

# ಶ್ರೀಮಾತೆಯವರ ಆಧ್ಯಾತ್ಮಿಕ ಜೀವನ ಯಾತ್ರೆ

## ಭಾಗ–2

ಅಖಿಲ ಭಾರತ ಪತ್ರಿಕೆ

ಏಪ್ರಿಲ್ 2015

ಬೆಲೆ : 15/–



*"Every good and kind deed brings light, restfulness, joy - the sunshine in which flowers bloom."*

- The Mother

# ಅಖಿಲ ಭಾರತ ಪತ್ರಿಕೆ

**ಸಂಪಾದಕರು**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org


## ಪರಿವಿಡಿ

**"ಶ್ರೀಮಾತೆಯವರ ಆಧ್ಯಾತ್ಮಿಕ ಜೀವನ ಯಾತ್ರೆ"**
**ಭಾಗ–2: (ಸುಮಾರು ಎಪ್ರಿಲ್ 24, 1920ರಂದು ನೀಡಿದ ಸಂದೇಶ)**

**ನಾನು ಪಾಂಡಿಚೇರಿಗೆ ಮರಳಿ ಬಂದ ವಾರ್ಷಿಕ ದಿನ, ಅದು ವಿರೋಧಿ ಶಕ್ತಿಗಳ ಮೇಲೆ ನಿಶ್ಚಿತವಾಗಿ ಜಯ ಸಾಧಿಸುವುದರ ಸ್ಪಷ್ಟ ಕುರುಹು.**


**ಅನು : ದಿ. ಪ್ರಹ್ಲಾದ ನರೇಗಲ್***

ಶ್ರೀಮಾತೆಯವರ ಪ್ರಯಾಣದಲ್ಲಿ ಹೊಸ ಹಂತ 3
ದೈವೀ ಪ್ರೇಮದ ಹೃದಯ 10
ಹೊಸ ದೈವೀಶಕ್ತಿ ಮತ್ತು ಹೊಸ ಸೃಷ್ಟಿಯ ದೈವೀಶಬ್ದ 17
ಪೃಥ್ವಿಗಾಗಿ ಪರಾಮಾತೆಯ ಯೋಗ 24
ಮಾನವ ಹಾಗೂ ದೈವೀ ಸ್ವರೂಪದಲ್ಲಿ ಶ್ರೀಮಾತೆ 33
ದೈವೀ ಪರಾಮಾತೆಯ ತ್ಯಾಗ 50

**ಅನು : ಡಾ. ಕೆ.ಎಸ್. ಆಮೂರ**

ಶ್ರೀಮಾತೆಯವರನ್ನು ಕುರಿತು ಶ್ರೀ ಅರವಿಂದರು 54
**ವಾರ್ತಾಪತ್ರ** 59


* ದಿ. ಪ್ರಹ್ಲಾದ ನರೇಗಲ್ ಅವರು ಶ್ರೀಮಾತೆಯವರ "Prayers and Meditations" ಗ್ರಂಥದ ಕನ್ನಡಾನುವಾದವನ್ನು ಮಾಡಿದ್ದರು. ಅದನ್ನು ಶ್ರೀ ಅರವಿಂದೋ ಸೊಸೈಟಿ, ಗುಲ್ಬರ್ಗಾ 1998ರಲ್ಲಿ ಪ್ರಕಟಿಸಿತ್ತು. ಈ ಸಂಚಿಕೆಗೆ ಅವಶ್ಯವಿದ್ದ ಭಾಗವನ್ನು ಆಯ್ದುಕೊಂಡು, ಪರಿಷ್ಕರಿಸಿ ಇಲ್ಲಿ ಕೊಡಲಾಗಿದೆ. **(ಸಂಪಾದಕರು)**

**ಸಂಪಾದಕರ ಟಿಪ್ಪಣಿ[1]:** ಶ್ರೀಮಾತೆಯವರು ಶ್ರೀ ಅರವಿಂದರನ್ನು ಭೇಟಿ ಮಾಡಿದ ನಂತರದ ದಿನಗಳಿಂದ 1914ರಲ್ಲಿ ತಮ್ಮನ್ನು ದೈವೀ ಪರಾಮಾತೆಯೊಡನೆ ಗುರುತಿಸಿಕೊಳ್ಳುವವರೆಗಿನ ಅವರ ಆಧ್ಯಾತ್ಮಿಕ ಪ್ರಯಾಣದ ಅನುಭವಗಳನ್ನು ಅವರು ತಮ್ಮ ದಿನಚರಿ ಪುಸ್ತಕದಲ್ಲಿ ದಾಖಲಿಸಿದ್ದರು. ನಂತರ ಅವು "Prayers and Meditations" ಗ್ರಂಥದಲ್ಲಿ ಪ್ರಕಟವಾಗಿದ್ದವು. ಅವುಗಳಿಂದ ಆಯ್ದುಕೊಂಡ ಭಾಗ ಈ ಸಂಕಲನದಲ್ಲಿದೆ. ಇದು ಫೆಬ್ರುವರಿ 2015ರ ಸಂಚಿಕೆಯಿಂದ ಮುಂದುವರಿದುಕೊಂಡು ಬಂದದ್ದು, ಅದನ್ನು ಭಾಗ–1 ಎಂದು ಸೂಚಿಸಲಾಗಿತ್ತು. ಅದರಲ್ಲಿ ಶ್ರೀಮಾತೆಯವರು ಶ್ರೀ ಅರವಿಂದರನ್ನು ಭೇಟಿ ಮಾಡುವುದಕ್ಕಿಂತ ಮೊದಲಿನದನ್ನು ಕೊಡಲಾಗಿದೆ. ಈ ಸಂಕಲನದಲ್ಲಿ ಕೊನೆಗೆ ಇನ್ನೂ ಕೆಲವು ಪ್ರಾರ್ಥನೆಗಳನ್ನು ಕೊಡಲಾಗಿದೆ, ಅದರಿಂದಾಗಿ ಅವರ ಪ್ರಯಾಣದ ಚಿತ್ರ ಸಂಪೂರ್ಣವಾಗಿ ಕಂಡುಬರುವಂತಾಗುವುದು. ಹಾಗಿದ್ದರೂ ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ಅನುಭವ ಹಾಗೂ ಸಿದ್ಧಿಗಳ ಆಳ–ಅಗಲಗಳ ಪೂರ್ತಿ ನೋಟವನ್ನು ಕುರಿತು ಯಾವ ಸಂಕಲನವೂ ಎಂದಿಗೂ ಕೊಡಲಾರದು ಎಂಬುದನ್ನು ಗಮನಿಸಬೇಕಾಗುತ್ತದೆ, ಏಕೆಂದರೆ ಅವರ ಜೀವನ ಜನರ ಮೇಲ್ನೋಟಕ್ಕೆ ಸಿಗುವಂತಹದಿರಲಿಲ್ಲ.

[1] ಇದು All India Magazine (ಕನ್ನಡದಲ್ಲಿ ಅಖಿಲ ಭಾರತ ಪತ್ರಿಕೆ) ಸಂಪಾದಕರ ಟಿಪ್ಪಣಿ.

# ಶ್ರೀಮಾತೆಯವರ ಪ್ರಯಾಣದಲ್ಲಿ ಹೊಸ ಹಂತ

## ಹೊಸ ಹಂತವೊಂದು ಪ್ರಾರಂಭವಾಗಿದೆ

ನಿನ್ನ ಗರ್ಭಗುಡಿಯ ಹೃದಯದಲ್ಲಿಯೇ ನಾವು ಪ್ರವೇಶಿಸಿದ್ದೇವೆ ಮತ್ತು ನಿನ್ನ ಸಂಕಲ್ಪದ ಬಗ್ಗೆ ಅರಿವುಳ್ಳವರಾಗಿದ್ದೇವೆ ಎಂಬ ಭಾವನೆ ನನಗೆ ಬರುತ್ತಿದೆ. ಮಹಾನ್ ಸಂತೋಷ ಹಾಗೂ ಆಳವಾದ ಶಾಂತಿ ನನ್ನೊಳಗೆ ಆಳಿಕೆ ನಡೆಸುತ್ತಿವೆ ಮತ್ತು ಆದಾಗ್ಯೂ ನನ್ನ ಇಡೀ ಆಂತರಿಕ ರಚನೆಗಳು ವ್ಯರ್ಥ ಕನಸಿನ ಹಾಗೆ ಮಾಯ–ವಾಗಿವೆ ಮತ್ತು ಈಗ ನಾನು ನಿನ್ನ ಭವ್ಯತೆಯೆದುರು ಚೌಕಟ್ಟನ್ನಾಗಲಿ, ಪದ್ಧತಿ–ಯನ್ನಾಗಲಿ ಇರಿಸಿಕೊಂಡಿರದಂತೆ ನನ್ನನ್ನು ಕಂಡುಕೊಳ್ಳುತ್ತಿದ್ದೇನೆ, ಅದು ನಾನಿನ್ನೂ ವ್ಯಕ್ತೀಕರಣಗೊಂಡಿರದ ಸತ್ತೆಯ ಹಾಗಿದೆ. ಎಲ್ಲ ಗತಕಾಲ, ಅದರ ಬಾಹ್ಯ ಸ್ವರೂಪದಲ್ಲಿ, ಹಾಸ್ಯಾಸ್ಪದವಾಗುವಂತೆ ಸ್ವೇಚ್ಛೆಯದಾಗಿತ್ತು ಎಂದು ತೋರಿ–ಬರುತ್ತದೆ, ಮತ್ತು ಆದಾಗ್ಯೂ ಅದರದೇ ಕಾಲದಲ್ಲಿ ಅದು ಉಪಯುಕ್ತವಾಗಿತ್ತು ಎಂಬುದು ನನಗೆ ತಿಳಿದಿದೆ.

ಆದರೆ ಈಗ ಎಲ್ಲವೂ ಬದಲಾಗಿದೆ: ಹೊಸ ಹಂತವೊಂದು ಪ್ರಾರಂಭವಾಗಿದೆ.

**ಎಪ್ರಿಲ್ 1, 1914**

*

## ಸಮಗ್ರವಾಗಿ ಮೃತವಾಗುವುದು ಮತ್ತು ಕಾಯ್ದಿರಿಸಿಕೊಳ್ಳದೆ ಶರಣಾಗತವಾಗುವುದು

“ಸಮಗ್ರವಾಗಿ ಹೇಗೆ ಮೃತವಾಗಬೇಕು ಎಂಬುದನ್ನು ನೀನು ಎಂದಿಗೂ ತಿಳಿದಿರಲಿಲ್ಲ. ಯಾವಾಗಲೂ ನಿನ್ನಲ್ಲಿರುವ ಏನೋ ಒಂದು ತಿಳಿದುಕೊಳ್ಳಲು, ಸಾಕ್ಷಿಯಾಗಲು ಹಾಗೂ ಅರ್ಥಮಾಡಿಕೊಳ್ಳಲು ಬಯಸುತ್ತ ಬಂದಿದೆ. ಸಂಪೂರ್ಣ–ವಾಗಿ ಸಮರ್ಪಿಸಿಕೋ, ಹೇಗೆ ಮಾಯವಾಗಬೇಕು ಎಂಬುದನ್ನು ಕಲಿತುಕೋ, ನನ್ನಿಂದ ನಿನ್ನನ್ನು ಪ್ರತ್ಯೇಕಗೊಳಿಸುವ ಕೊನೆಯ ಬೇಲಿಯನ್ನು ಮುರಿದು ಹಾಕು, ಶರಣಾಗತಿಯ ಕಾರ್ಯವನ್ನು ಕಾದಿರಿಸಿಕೊಳ್ಳದೆ ಸಿದ್ಧಿಸಿಕೋ” ಎಂದು ಹೇಳುವ ನಿನ್ನ ಧ್ವನಿಯನ್ನು ನಾನು ಈಗ ಕೇಳಿಸಿಕೊಳ್ಳುತ್ತಿರುವಂತೆ ತೋರಿಬರುತ್ತದೆ.

ಓ ದೈವೀ ಪ್ರಭು, ನನ್ನ ಮಧುರ ಹಾಗೂ ಸನಾತನ ಸ್ವಾಮಿ, ನನ್ನನ್ನು ತಳಮಳದಿಂದ ತುಂಬಿಬಿಡುವ ಈ ಪ್ರತಿರೋಧವನ್ನು ಮುರಿದು ಹಾಕು. ನನ್ನನ್ನು ನನ್ನಿಂದಲೇ ಮುಕ್ತಗೊಳಿಸು.

**ಎಪ್ರಿಲ್ 7, 1914**

*



## “ನಾನು” ಎಂಬುದು ಮೃತವಾಗಿದೆ, ನಿನ್ನ ಹೊರತಾಗಿ ಬೇರಾವುದೂ ಅಸ್ತಿತ್ವದಲ್ಲಿಲ್ಲ.

ನನಗೆ ಇನ್ನು ಯಾವ ಸೀಮಿತತೆಗಳೂ ಇರಲಾರವು ಎಂದು ತೋರಿ–ಬರುತ್ತಿದೆ, ಇನ್ನು ಮುಂದೆ ಶರೀರ, ಸಂವೇದನೆಗಳು, ಭಾವನೆಗಳು, ಯೋಚನೆಗಳು ಇವೆಲ್ಲವುಗಳ ಬಗ್ಗೆ ಗ್ರಹಿಕೆ ಇರುವುದಿಲ್ಲ–ಸ್ಪಷ್ಟ, ಪರಿಶುದ್ಧ, ಪ್ರಶಾಂತ ಭವ್ಯತೆಯು ಪ್ರಕಾಶ ಹಾಗೂ ಪ್ರೇಮಗಳೊಂದಿಗೆ ಒಳನುಗ್ಗಿತು. ವರ್ಣನಾತೀತ ದಿವ್ಯಾನಂದದಿಂದ ತುಂಬಿಕೊಂಡದ್ದು ಮಾತ್ರ ಅಲ್ಲಿರುವುದು, ಅದಷ್ಟೇ ನಾನಾಗಿದ್ದೇನೆ ಎಂದು ತೋರಿಬರುತ್ತಿದೆ. ಮತ್ತು ಈ ನಾನೆಂಬುದು ಮೊದಲಿದ್ದ ‘ನಾನು’ ಎಂಬು–ದರ ಅತಿ ಸ್ವಲ್ಪ ಭಾಗವಾಗಿದೆ, ಆ ಮೊದಲಿನ ನಾನು ಸ್ವಾರ್ಥದಿಂದ ಕೂಡಿತ್ತು, ಸೀಮಿತವಾಗಿತ್ತು. ಓ ದೈವೀ ಪ್ರಭು, ನಮ್ಮ ಅದೃಷ್ಟಗಳ ಘನತೆವೆತ್ತ ಯಜಮಾನನೆ, ಅದು ನಾನೋ ಅಥವಾ ನೀನೋ ಎಂದು ಹೇಳಲಾರದ ಹಾಗಾಗಿದೆ.

ಅದು ಎಲ್ಲ ಚೈತನ್ಯ, ಧೈರ್ಯ, ಶಕ್ತಿ, ಸಂಕಲ್ಪ, ಗಾಢ ಮಾಧುರ್ಯ, ಹೋಲಿಸಲು ಸಾಧ್ಯವಿಲ್ಲದ ಕರುಣೆ ಇವೆಲ್ಲವುಗಳಿಂದ ಕೂಡಿಕೊಂಡ ಹಾಗಿದೆ.

ಕಳೆದ ಈ ದಿನಗಳಲ್ಲಿ ಗತಕಾಲ ಮೊದಲಿನಿಗಿಂತ ಪ್ರಬಲವಾಗಿ ಮೃತ–ವಾದಂತಿದೆ, ಅದನ್ನು ಹೊಸ ಜೀವನದ ಕಿರಣಗಳಡಿಯಲ್ಲಿ ಹೂತಿಡಲಾಗಿದೆ–ಯೇನೋ ಎನ್ನುವಂತಿದೆ. ಈ ಪುಸ್ತಕದ ಕೆಲವು ಪುಟಗಳನ್ನು ಓದಿ ನನ್ನ ಇಣುಕು ನೋಟವನ್ನು ಹಿಂದೆ ತಿರುಗಿಸಿ ನೋಡಿದಾಗ ಅದು ಈ ಮೃತವಾಗಿರುವಿಕೆಯನ್ನು ಕುರಿತು ಖಚಿತವಾಗಿ ಮನವರಿಕೆ ಆಗುವಂತೆ ಮಾಡಿತು ಮತ್ತು ನಾನು ನಿನ್ನೆದುರಿಗೆ ಇರಿಸುವ ಭಾರ ಇಳಿದು ಹಗುರಾದ ಭಾವನೆ ಬರುವಂತಾಗಿ ನಾನು ನನ್ನ ಎಲ್ಲ ಸರಳತೆಯೊಂದಿಗೆ, ಮಗುವಿನ ಮುಗ್ಧತೆಯೊಂದಿಗೆ ನನ್ನನ್ನು ನಿನ್ನ ಎದುರು ಇರಿಸುತ್ತಿದ್ದೇನೆ... ಮತ್ತು ಆದಾಗ್ಯೂ ನನ್ನ ಗ್ರಹಿಕೆಗೆ ಬರುತ್ತಿರುವ ಒಂದು ವಿಷಯ–ವೆಂದರೆ ಸ್ಥಿರತೆಯುಳ್ಳ ಪರಿಶುದ್ಧ ಭವ್ಯತೆಯಾಗಿದೆ.

ದೈವೀ ಪ್ರಭು, ನನ್ನ ಪ್ರಾರ್ಥನೆಗೆ ಉತ್ತರ ನೀಡಿರುವಿ, ನಾನು ನಿನ್ನಲ್ಲಿ ಬೇಡಿ–ಕೊಂಡದ್ದನ್ನು ನೀಡಿರುವಿ. ಆ “ನಾನು” ಮಾಯವಾಗಿದೆ, ಕೇವಲ ವಿಧೇಯ ಉಪಕರಣವಿದೆ, ಅದನ್ನು ನಿನ್ನ ಸೇವೆಗಾಗಿ ಇರಿಸಲಾಗಿದೆ, ಆ ಸೇವೆ ಏಕಾಗ್ರತೆಗಾಗಿ ಹಾಗೂ ನಿನ್ನ ಅನಂತ ಹಾಗೂ ಸನಾತನ ಕಿರಣಗಳ ಪ್ರಕಟಣೆಗಾಗಿ ಒಂದು ಕೇಂದ್ರವಾಗುವುದಾಗಿದೆ, ನೀನು ನನ್ನ ಜೀವನವನ್ನು ಕೈಗೆತ್ತಿಕೊಂಡಿರುವಿ ಮತ್ತು ಅದನ್ನು ನಿನ್ನದನ್ನಾಗಿ ಮಾಡಿರುವಿ, ನನ್ನ ಸಂಕಲ್ಪವನ್ನು ಕೈಗೆತ್ತಿಕೊಂಡು ಅದನ್ನು

ನಿನ್ನದರ ಜೊತೆಗೆ ಏಕವಾಗಿರಿಸಿರುವಿ, ನನ್ನ ಪ್ರೇಮವನ್ನು ಕೈಗೆತ್ತಿಕೊಂಡು ಅದನ್ನು ನಿನ್ನದರೊಡನೆ ಒಂದೇ ಎಂದು ಪರಿಗಣಿಸಿರುವಿ, ನನ್ನ ಯೋಚನೆಯನ್ನು ಕೈಗೆತ್ತಿ–ಕೊಂಡು ಅದರ ಸ್ಥಾನದಲ್ಲಿ ನಿನ್ನ ಪರಿಪೂರ್ಣ ಪ್ರಜ್ಞೆಯನ್ನಿರಿಸಿರುವಿ.

ಆಶ್ಚರ್ಯಪಡುತ್ತ, ಮೂಕ ಹಾಗೂ ಅಧೀನಗೊಳಿಸಿಕೊಳ್ಳುವಿಕೆಯ ಆರಾಧನೆ–ಯೊಂದಿಗೆ ದೇಹ ಧೂಳಿನಲ್ಲಿ ತಲೆಬಾಗಿಸುತ್ತಿದೆ.

ನಿನ್ನ ಬದಲಾಗದ ಶಾಂತಿಯ ಭವ್ಯತೆಯಲ್ಲಿ ನಿನ್ನ ಹೊರತಾಗಿ ಬೇರೆ ಏನೂ ಅಸ್ತಿತ್ವದಲ್ಲಿರುವುದಿಲ್ಲ.

**ಎಪ್ರಿಲ್ 10, 1914**

*

**ಪ್ರತ್ಯೇಕ ವ್ಯಕ್ತಿ ವಿಶಿಷ್ಟತೆ ಇರುವುದರ ಭ್ರಮೆ**

ಕ್ರಿಯೆಯಲ್ಲಿ ವ್ಯಕ್ತಿ ವಿಶಿಷ್ಟತೆಯು ನಿನ್ನ ಸಂಕಲ್ಪ ಹಾಗೂ ನಿನ್ನ ಶಕ್ತಿಗಳಿಗೆ ಅನಿವಾರ್ಯವಾದ ಹಾಗೂ ಅತ್ಯಗತ್ಯದ್ದಾದ ಮಧ್ಯವರ್ತಿಯಾಗಿರುತ್ತದೆ.

ವ್ಯಕ್ತಿವಿಶಿಷ್ಟತೆ ಬಲವತ್ತರ, ಹೆಚ್ಚು ಸಂಕೀರ್ಣ, ಸಾಮರ್ಥ್ಯಪೂರ್ಣ, ಮತ್ತು ಪ್ರಜ್ಞಾಪೂರ್ಣವಾಗಿದ್ದಾಗ ಅದು ಹೆಚ್ಚು ಸಾಮರ್ಥ್ಯಪೂರ್ಣವಾಗಿ ಮತ್ತು ಉಪಯುಕ್ತವಾಗಿ ಸೇವೆ ಸಲ್ಲಿಸುವ ಉಪಕರಣವಾಗಬಹುದು. ಆದರೆ ವ್ಯಕ್ತಿ–ವಿಶಿಷ್ಟತೆಯ ಗುಣಧರ್ಮದ ಕಾರಣದಿಂದಾಗಿಯೇ, ಅದು, ಸುಲಭವಾಗಿ, ತನ್ನ ಪ್ರತ್ಯೇಕ ಅಸ್ತಿತ್ವದ ಮಾರಕ ಭ್ರಮೆಯಲ್ಲಿ ಎಳೆದುಕೊಂಡು ಹೋಗಿ ಬಿಡುವ ಮತ್ತು ಸ್ವಲ್ಪ ಸ್ವಲ್ಪವಾಗಿ ನಿನ್ನ ಹಾಗೂ ನೀನು ಯಾವುದರ ಮೇಲೆ ಕಾರ್ಯ ಕೈಕೊಳ್ಳಲು ಸಂಕಲ್ಪಿಸಿರುತ್ತೀಯೋ ಅದರ ನಡುವೆ ಪರದೆಯಂತಾಗುವ ಪ್ರವೃತ್ತಿ ಇರುತ್ತದೆ. ಹಾಗಾಗುವುದು ಪ್ರಕಟಣೆಯ ಪ್ರಾರಂಭದ ಹಂತದಲ್ಲಲ್ಲ, ಆದರೆ ಮರಳಿ ರವಾನೆ ಮಾಡಬೇಕಾದ ಹಂತದಲ್ಲಿ, ಎಂದರೆ ನಿನಗೆ ಸಲ್ಲಬೇಕಾದುದನ್ನು–ನಿನ್ನ ಕ್ರಿಯೆಗೆ ಉತ್ತರ ರೂಪದಲ್ಲಿ ಕಳಿಸಿದ ಶಕ್ತಿಗಳನ್ನು ನಿನಗೆ ನಿಖರವಾಗಿ ಮರಳಿ ತಂದು–ಕೊಡುವ ವಿಶ್ವಾಸಾರ್ಹ ಸೇವಕನಾಗುವುದರ ಬದಲಾಗಿ ಆ ವ್ಯಕ್ತಿವಿಶಿಷ್ಟತೆಯಲ್ಲಿ ಆ ಶಕ್ತಿಗಳ ಒಂದು ಭಾಗವನ್ನು ತನಗಾಗಿ ಇಟ್ಟುಕೊಳ್ಳುವ ಪ್ರವೃತ್ತಿ ಇರುತ್ತದೆ, ಅದರ ವಿಚಾರ "ಇದನ್ನು ಅಥವಾ ಅದನ್ನು ಕೈಕೊಂಡವನು ನಾನು, ನನಗೆ ಧನ್ಯವಾದಗಳು ಸಲ್ಲಬೇಕು" ಎಂದಿರುತ್ತದೆ. ವಿನಾಶಕಾರಿ ಭ್ರಮೆಯೇ, ಮಬ್ಬಾದ ಮಿಥ್ಯೆಯೇ



ನಿಮ್ಮನ್ನು ಶೋಧಿಸಲಾಗಿದೆ, ನಿಮ್ಮ ಮೇಲಿನ ಮುಸುಕನ್ನು ತೆಗೆದು ಹಾಕಲಾಗಿದೆ. ಅವು ಕ್ರಿಯೆಯ ಎಲ್ಲ ಪರಿಣಾಮಗಳನ್ನು ಮಿಥ್ಯೆಗೊಳಪಡಿಸಿ ಫಲವನ್ನು ಕೊರೆದು ತಿನ್ನುವಂತಹವು.

ಓ ದೈವೀ ಪ್ರಭು, ನನ್ನ ಮಧುರ ಸ್ವಾಮಿ, ಏಕೈಕ ದೈವೀ ನೈಜತೆಯಾದವನೆ, "ನಾನು" ಎನ್ನುವ ಭಾವನೆಯನ್ನು ನನ್ನಿಂದ ಚದುರಿಸಿಬಿಡು. ಪ್ರಕಟವಾದ ವಿಶ್ವ ಇರುವವರೆಗೆ "ನಾನು" ಎಂಬುದರ ಭಾವನೆ ನಿನ್ನ ಪ್ರಕಟಣೆಗಾಗಿ ಅವಶ್ಯವಾಗಿದೆ ಎಂಬುದನ್ನು ನಾನು ತಿಳಿದುಕೊಂಡಿದ್ದೇನೆ, ಆ "ನಾನು" ಎಂಬುದನ್ನು ಕರಗಿಸಿ–ಬಿಡುವುದಾಗಲಿ, ಅಥವಾ ಕುಗ್ಗಿಸುವುದಾಗಲಿ ಇಲ್ಲವೆ ದುರ್ಬಲಗೊಳಿಸು–ವುದಾಗಲಿ ನಿನ್ನ ಪ್ರಕಟಣೆಯ ಸಾಧನವನ್ನು ಭಾಗಶಃ ಇಲ್ಲವೆ ಇಡಿಯಾಗಿ ಕಿತ್ತುಕೊಂಡ ಹಾಗಾಗುತ್ತದೆ. ಆದರೆ ಪ್ರತ್ಯೇಕ "ನಾನು" ಎಂಬ ಸಂವೇದನೆಯ ಭ್ರಮೆಯ ಯೋಚನೆಯನ್ನು, ಭ್ರಮೆಯ ಭಾವನೆಯನ್ನು ಮೂಲಭೂತವಾಗಿ, ನಿರ್ಣಾಯಕವಾಗಿ ಅದುಮಿ ಹಿಡಿದಿಡಬೇಕಾಗಿರುತ್ತದೆ. ಯಾವುದೇ ಕ್ಷಣದಲ್ಲಿ, ಯಾವುದೇ ಪರಿಸ್ಥಿತಿಯಲ್ಲಿ ನಮ್ಮ "ನಾನು" ಎಂಬುದಕ್ಕೆ ನಿನಗೆ ಬಾಹ್ಯವಾದುದರಲ್ಲಿ ನೈಜತೆ ಇರುವುದಿಲ್ಲ ಎಂಬುದನ್ನು ನಾವು ಮರೆಯಬಾರದು.

**ಎಪ್ರಿಲ್ 17, 1914**

*

**ದೈವೀ ಏಕತೆಯ ಸ್ಥಿತಿ: ನಾನು ನೀನಾಗಿರುವುದು, ನೀನು ನಾನಾಗಿರುವುದು**

ನಿನ್ನಲ್ಲಿ ಹಾಗೂ ನಿನ್ನ ಕಾರ್ಯದಲ್ಲಿ ಮಗ್ನವಾಗಿರುವುದು... ಇನ್ನು ಮುಂದೆ ಸೀಮಿತ ವ್ಯಕ್ತಿವಿಶಿಷ್ಟತೆ ಆಗಿರದೆ ಇರುವುದು... ಒಂದು ಬಿಂದುವಿನ ಮೂಲಕ ಪ್ರಕಟವಾಗುತ್ತಿರುವ ನಿನ್ನ ಶಕ್ತಿಗಳ ಅನಂತತೆಯಾಗುವುದು... ಎಲ್ಲ ಸೀಮಿತತೆಗಳ ಬೇಡಿಗಳಿಂದ ಮುಕ್ತವಾಗುವುದು... ಕಟ್ಟಿನಿಟ್ಟು ಒಳಪಡಿಸುವ ಯೋಚನೆಗಳ ಮೇಲೇರಿ ಹೋಗುವುದು... ಕ್ರಿಯೆಯಿಂದ ಹೊರಗಿದ್ದಾಗ ಕ್ರಿಯೆ ಕೈಕೊಳ್ಳುವುದು... ದೈವೀ ಏಕತೆಯನ್ನಷ್ಟೇ ನೋಡುತ್ತಿರುವಾಗ ವ್ಯಕ್ತಿಗಳೊಂದಿಗೆ ಹಾಗೂ ಅವರಿಗಾಗಿ ಕಾರ್ಯ ಕೈಕೊಳ್ಳುವುದು: ಆ ಏಕತೆ ನಿನ್ನ ದೈವೀ ಪ್ರೇಮದಿಂದಾದ, ನಿನ್ನ ದೈವೀಜ್ಞಾನ ಹಾಗೂ ದೈವೀ ಸತ್ತೆಗಳಿಂದಾದ ಏಕತೆಯಾಗಿರುತ್ತದೆ. ಓ ನನ್ನ ದೈವೀ ಸ್ವಾಮಿಯೆ, ಸನಾತನ ದೈವೀ ಗುರುವೆ, ಏಕೈಕ ನೈಜತೆಯಾದವನೆ, ಸೇವೆಗಾಗಿ ಹಾಗೂ ಜಗತ್ತಿನಲ್ಲಿ ನಿನ್ನ ದೈವೀ ಪ್ರಕಟಣೆಗಾಗಿ ರೂಪಿಸಿದ ಈ ಒಟ್ಟಾದುದರಲ್ಲಿರುವ

ಅಂಧಕಾರವನ್ನು ತೊಲಗಿಸು. ಅದರಲ್ಲಿ ಆ ಪರಮೋಚ್ಚ ಪ್ರಜ್ಞೆಯನ್ನು ಸಿದ್ಧಿಸಿಕೋ, ಅದು ಎಲ್ಲೆಡೆಯಲ್ಲಿ ಅದೇ ಪ್ರಜ್ಞೆಯನ್ನು ಜಾಗ್ರತಗೊಳಿಸುವಂತಾಗುವುದು.

ಓ, ಬಿಟ್ಟೂಬಿಡದೆ ಬದಲಾಗುತ್ತಿರುವ ತೋರಿಕೆಗಳನ್ನು ಇನ್ನು ಮುಂದೆ ನೋಡದಂತಾಗಲಿ, ಪ್ರತಿಯೊಂದರಲ್ಲಿ ಹಾಗೂ ಎಲ್ಲೆಡೆಯಲ್ಲಿ, ಯಾವಾಗಲೂ, ಕೇವಲ ನಿನ್ನ ಬದಲಾಗದ ದೈವೀ ಏಕತೆಯನ್ನು ಕುರಿತು ಚಿಂತನ ಮಾಡುವಂ–ತಾಗಲಿ!

ಓ ದೈವೀ ಪ್ರಭು, ನನ್ನ ಇಡೀ ಸತ್ತೆ, ಪ್ರತಿರೋಧಿಸಲಾಗದ ಕರೆಯಿಂದ, ನಿನ್ನತ್ತ ಕೂಗುತ್ತದೆ; ನನ್ನ ಸಮಗ್ರ ಪ್ರಜ್ಞೆಯಲ್ಲಿ ನಾನು ನೀನೇ ಆಗಿಬಿಡುವಂತೆ ಅನುಗ್ರಹಿಸು–ವಿಯಲ್ಲವೆ? ಏಕೆಂದರೆ ನೈಜತೆಯಲ್ಲಿ ನಾನು ನೀನಾಗಿರುವಿ, ಮತ್ತು ನೀನು ನಾನಾಗಿರುವೆ.

**ಮೇ 4, 1914**

*

ಗತಕಾಲದ ಪ್ರಯತ್ನಗಳು ಫಲಪ್ರದವಾಗುತ್ತಿರುವಂತೆ ಗೋಚರವಾಗುವ ಚಟುವಟಿಕೆಯ ಕಾಲಾವಧಿಗಳಲ್ಲೊಂದರಲ್ಲಿ ನಾವಿದ್ದೇವೆ ಎಂದು ನನಗೆ ಹೆಚ್ಚು ಹೆಚ್ಚಾಗಿ ತೋರಿಬರುತ್ತದೆ–ಈ ಅವಧಿಯಲ್ಲಿ ನಿನ್ನ ನಿಯಮ ನಮ್ಮ ಸತ್ತೆಯ ಸಾರ್ವಭೌಮ ನಿಯಂತ್ರಕವಾದ ಪ್ರಮಾಣದಲ್ಲಿ ನಾವು ಆ ನಿಯಮಕ್ಕನುಸಾರವಾಗಿ ಕಾರ್ಯ ಕೈಕೊಳ್ಳುತ್ತೇವೆ, ಹಾಗೆ ಕಾರ್ಯಕೈಕೊಳ್ಳುತ್ತಿರುವಾಗ ಆ ನಿಯಮದ ಬಗ್ಗೆ ಅರಿವುಳ್ಳವರಾಗಲು ವಿರಾಮವಿರುವ ಅವಧಿ ನಮಗೆ ದೊರಕದೆ ಇರಬಹುದು.

ಈ ದಿನ ಬೆಳಿಗ್ಗೆ, ಆಳದಿಂದ ಆಳದವರೆಗೆ ಆಗುವ ತೀವ್ರಗತಿಯ ಅನುಭವಗಳ ಮೂಲಕ ಸಾಗಿ ಹೋದಾಗ, ಯಾವಾಗಲೂ ಆಗುವ ಹಾಗೆ, ಮತ್ತೆ ನನ್ನ ಪ್ರಜ್ಞೆ–ಯನ್ನು ನಿನ್ನದರೊಂದಿಗೆ ಗುರುತಿಸಿಕೊಳ್ಳುವ ಹಾಗೆ, ನಿನ್ನಲ್ಲಿ ಮಾತ್ರ ಇರುವ ಹಾಗೆ ಮಾಡಿಕೊಳ್ಳಲು ನಾನು ಶಕ್ತಳಾದೆ,–ನಿಜವಾಗಿ, ನೀನು ಮಾತ್ರ ಜೀವಿಸುತ್ತಿದ್ದೀ, ಆದರೆ ಕೂಡಲೆ ನಿನ್ನ ಸಂಕಲ್ಪವು ಕೈಕೊಳ್ಳಬೇಕಾದ ಕಾರ್ಯವಿರುವ ಬಾಹ್ಯದತ್ತ ನನ್ನ ಪ್ರಜ್ಞೆಯನ್ನು ಎಳೆದು ತಂದಿತು ಮತ್ತು ನೀನು ನನಗೆ ಹೇಳಿದೆ: "ನನಗೆ ಅವಶ್ಯ–ವಿದ್ದುದರ ಉಪಕರಣ ನೀನಾಗು" ಎಂದು, ನಿನ್ನೊಡನೆ ಗುರುತಿಸಿಕೊಂಡಿರು–ವುದನ್ನು, ಇನ್ನು ಮುಂದೆ ನನ್ನ ಹಾಗೂ ನಿನ್ನ ನಡುವೆ ಭಿನ್ನತೆ ಇರದೆ ಇರುವ



ಮಧುರ ಹಾಗೂ ಪರಿಶುದ್ಧ ಸಂತೋಷವನ್ನು, ನೀನು ಅನನ್ಯ ದೈವೀ ನೈಜತೆ–ಯಾಗಿರುವೆ, ಉಳಿದದ್ದೆಲ್ಲ ಕೇವಲ ತೋರಿಕೆ ಹಾಗೂ ಭ್ರಮೆ ಎಂಬುದನ್ನು ಕೇವಲ ಬುದ್ಧಿಮತ್ತೆಯ ಮೂಲಕವಷ್ಟೇ ಅಲ್ಲ, ಆದರೆ ಸಮಗ್ರ ಅನುಭವದಿಂದ ಪ್ರತಿಕ್ಷಣ ತಿಳಿದುಕೊಳ್ಳುವ ಸಂತೋಷವನ್ನು ತ್ಯಾಗ ಮಾಡುವುದು ಕೊನೆಯ ತ್ಯಾಗವಲ್ಲವೆ? ಬಾಹ್ಯ ಸತ್ತೆ ವಿಧೇಯ ಉಪಕರಣವಾಗಿರಬೇಕು, ಅದು ಚಲಿಸುವಂತೆ ಮಾಡುವ ಸಂಕಲ್ಪದ ಬಗ್ಗೆ ಅರಿವನ್ನೂ ಕೂಡ ಹೊಂದಿರಬಾರದು, ಸಂಶಯಪಡಬಾರದು, ಆದರೆ ನಾನು, ಇಡಿಯಾಗಿ, ನನ್ನನ್ನು ಉಪಕರಣದೊಂದಿಗೆ ಏಕೆ ಗುರುತಿಸಿ–ಕೊಳ್ಳಬೇಕು, ನಿನ್ನಲ್ಲಿ ಮುಳುಗಿ ಹೋದ ನಾನು ಏಕಾಗಬಾರದು ಮತ್ತು ಪೂರ್ಣ ಹಾಗೂ ಪರಿಪೂರ್ಣ ಪ್ರಜ್ಞೆಯಲ್ಲಿ ಏಕೆ ಜೀವಿಸಬಾರದು?

ನೀನು ಎಲ್ಲದರ ಸಾರ್ವಭೌಮ ಯಜಮಾನನಾಗಿರುವಿ, ನೀನು ತಲುಪ–ಲಾಗದವನು, ಅರಿತುಕೊಳ್ಳಲಾಗದವನು, ಸನಾತನನು ಹಾಗೂ ಘನತೆವೆತ್ತ ದೈವೀ ನೈಜತೆಯಾಗಿರುವಿ.

ಓ, ಅದ್ಭುತ ದೈವೀ ಏಕತೆಯೆ, ನಾನು ನಿನ್ನಲ್ಲಿ ಮಾಯವಾಗುವೆ.

**ಮೇ 12, 1914**

*

**ಎಲ್ಲ ಅಸಹನೆ, ಕಾರ್ಯಕ್ಕಾಗಿ ಎಲ್ಲ ಅವಸರ ನಿರುಪಯುಕ್ತವಾಗುವವು**

ಎಲ್ಲ ತಾಳ್ಮೆಯಿಲ್ಲದ ಬಂಡಾಯ, ಎಲ್ಲ ಅವಸರ ನಿರುಪಯುಕ್ತವಾಗುವವು ಎಂಬುದನ್ನು ನಾನು ಹೆಚ್ಚು ಹೆಚ್ಚಾಗಿ ನೋಡುತ್ತಿದ್ದೇನೆ; ಪ್ರತಿಯೊಂದೂ ನಿಧಾನ–ಗತಿಯಲ್ಲಿ ಸಂಘಟಿತಗೊಳ್ಳುತ್ತದೆ, ಅದರಿಂದಾಗಿ ನಿನಗೆ ಸರಿಯಾಗಿ ಸಲ್ಲಿಸಬೇಕಾದ ರೀತಿಯಲ್ಲಿ ನಾನು ಸೇವೆ ಸಲ್ಲಿಸುತ್ತೇನೆ. ಈ ಸೇವೆಯಲ್ಲಿ ನನ್ನ ಸ್ಥಾನವೇನು? ಬಹಳ ಕಾಲದಿಂದ ಇದನ್ನು ನನಗೆ ಕೇಳಿಕೊಳ್ಳುವುದನ್ನು ನಿಲ್ಲಿಸಿದ್ದೇನೆ. ಅದರ ಮಹತ್ವ–ವೇನು? ಮನುಷ್ಯ ಕೇಂದ್ರದಲ್ಲಿರುವನೋ ಇಲ್ಲವೆ ಪರಿಧಿಯ ಮೇಲಿರುವನೋ ಎಂಬುದನ್ನು ತಿಳಿದುಕೊಳ್ಳುವ ಆವಶ್ಯಕತೆ ಇದೆಯೆ? ನಿನಗೆ ಇಡಿಯಾಗಿ ಮುಡು–ಪಾಗಿರಿಸಿಕೊಂಡಿದ್ದೇನೆ, ನಿನ್ನಿಂದ ಮಾತ್ರ ಜೀವಿಸುತ್ತಿದ್ದೇನೆ ಎಂದಿದ್ದಾಗ ನೀನು ಕೊಟ್ಟ ಕಾರ್ಯವನ್ನು ಹೆಚ್ಚು ಒಳ್ಳೆಯ ರೀತಿಯಲ್ಲಿ ನಿರ್ವಹಿಸುತ್ತೇನೆ, ಉಳಿದದ್ದಕ್ಕೆ ಯಾವ ಮಹತ್ವವೂ ಇಲ್ಲ. ನಾನಿನ್ನೂ ಹೆಚ್ಚಿನದನ್ನು ಹೇಳಬಹುದು: ಜಗತ್ತಿನಲ್ಲಿ ನಿನ್ನ

ಕಾರ್ಯವನ್ನು ಸಾಧ್ಯವಿದ್ದಷ್ಟು ಒಳ್ಳೆಯ ರೀತಿಯಲ್ಲಿ, ಸಂಪೂರ್ಣವಾಗಿ ಸಿದ್ಧಿಸಿ–ಕೊಳ್ಳಲಾಗಿದ್ದಾಗ ಯಾವ ವ್ಯಕ್ತಿ ಇಲ್ಲವೆ ಗುಂಪು ಈ ಕಾರ್ಯವನ್ನು ಸಿದ್ಧಿಸಿ–ಕೊಳ್ಳುತ್ತದೆ ಎಂಬುದು ಮಹತ್ವದ್ದಾಗಿರುತ್ತದೆಯೆ?

ಓ, ನನ್ನ ಮಧುರ ಸ್ವಾಮಿ, ಶಾಂತಿಯಲ್ಲಿ, ಪ್ರಶಾಂತತೆಯಲ್ಲಿ, ಸಮತೆಯಲ್ಲಿ ನನ್ನನ್ನು ನಿನಗೆ ಕೊಟ್ಟುಕೊಳ್ಳುತ್ತೇನೆ, ನಿನ್ನಲ್ಲಿ ಮುಳುಗುತ್ತೇನೆ, ನನ್ನ ಯೋಚನೆ ಸ್ಥಿರ ಮತ್ತು ಪ್ರಶಾಂತವಾಗಿರುತ್ತದೆ, ನನ್ನ ಹೃದಯ ಮುಗುಳ್ನಗುತ್ತಿರುತ್ತದೆ; ನಿನ್ನ ಕಾರ್ಯ ಮುಗಿಯುತ್ತದೆ ಮತ್ತು ನಿನ್ನ ವಿಜಯ ನಿಶ್ಚಿತ ಎಂಬುದನ್ನು ನಾನು ಅರಿತಿದ್ದೇನೆ.

ಓ, ನನ್ನ ಮಧುರ ಸ್ವಾಮಿ, ನಿನ್ನ ಜ್ಞಾನೋದಯದ ವರವನ್ನು ಎಲ್ಲರಿಗೂ ಅನುಗ್ರಹಿಸು!

**ಮೇ 13, 1914**

*

**ಏಕತೆ ಹಾಗೂ ಅನೇಕತೆ ಇವುಗಳ ನಡುವಿನ ಅತಿಮಾನಸ ಕೊಂಡಿ**

ಶಿಖರವೊಂದನ್ನು ತಲುಪಿದಾಗ ಮನುಷ್ಯ ವಿಶಾಲವಾದ ಕ್ಷಿತಿಜವನ್ನು ಶೋಧಿಸುವ ಹಾಗೆ, ಮನುಷ್ಯನ ಪ್ರಜ್ಞೆ ನಿನ್ನ ದೈವೀ ಏಕತೆ ಮತ್ತು ಪ್ರಕಟವಾದ ಜಗತ್ತು ಇವುಗಳ ನಡುವಿರುವ ಪ್ರಾಂತದೊಡನೆ ಗುರುತಿಸಿಕೊಂಡಾಗ ಅವನು ನಿನ್ನ ಅನಂತತೆಯಲ್ಲಿ ಮತ್ತು ಜಗತ್ತಿನ ಸಿದ್ಧಿಸಿಕೊಳ್ಳುವಿಕೆಯಲ್ಲಿ ಭಾಗವಹಿಸುತ್ತಾನೆ. ಅದು ಮನುಷ್ಯ ಒಂದು ಕೇಂದ್ರದಲ್ಲಿರುವ ಹಾಗಿರುತ್ತದೆ, ಅಲ್ಲಿ ಪ್ರಜ್ಞೆ ನಿನ್ನ ಪರಿಣಾಮಕಾರಿ ದೈವೀ ಸಾಮರ್ಥ್ಯದಲ್ಲಿ ಇಡಿಯಾಗಿ ಮಗ್ನವಾಗಿ ನಿನ್ನ ಶಕ್ತಿಗಳ ಕಿರಣವನ್ನು ನಿಮ್ನ ಉಪಕರಣದ ಮೇಲೆ ನಿರ್ದೇಶಿಸಬಹುದಾಗಿದೆ, ಆ ಉಪಕರಣ ಅದರ ಸಹೋದರ ಉಪಕರಣಗಳ ಮಧ್ಯೆ ಚಲಿಸುತ್ತಿರುತ್ತದೆ.

ಈ ವಿಶ್ವಾತೀತ ಪ್ರಾಂತಗಳ ಎತ್ತರದಿಂದ ನೋಡಿದಾಗ ಭೌತಿಕ ದ್ರವ್ಯದ ಏಕತೆ ಸ್ಪಷ್ಟವಾಗಿ ಗೋಚರವಾಗುತ್ತದೆ, ಮತ್ತು ಆದಾಗ್ಯೂ ಭೌತಿಕ ಕ್ಷೇತ್ರದಲ್ಲಿ ಒಂದು ವಿಶಿಷ್ಟ ಉಪಕರಣವೆಂದು ಸೇವೆ ಸಲ್ಲಿಸುವ ದೇಹ ವಿಶೇಷವಾಗಿ ನಿಖರವಾದದ್ದು, ಹಾಗೂ ಭಿನ್ನವಾದದ್ದು ಎಂದು ತೋರಿಬರುತ್ತದೆ, ಅದು ಇಡಿಯಾದುದರಲ್ಲಿ ಬಲವತ್ತರ–ವಾದ ಒಂದು ಬಿಂದುವಿನ ಹಾಗಿದ್ದು ಏಕಕಾಲಕ್ಕೆ ಅನೇಕ ಹಾಗೂ ಒಂದೇ ಆಗಿರುತ್ತದೆ, ಅದರಲ್ಲಿ ಶಕ್ತಿಗಳು ಸರಿಸಮನಾಗಿ ಸುತ್ತಾಡುತ್ತವೆ.



ಈ ಗ್ರಹಿಕೆ ನಿನ್ನೆಯಿಂದ ನನ್ನನ್ನು ಇನ್ನೂ ಬಿಟ್ಟುಹೋಗಿಲ್ಲ. ಅದು ನಿರ್ಧಾರಕ–ವಾಗಿ ನೆಲೆಸಿದೆ ಮತ್ತು ತೋರಿಕೆಗೆ ಸಾಮಾನ್ಯವಾದದ್ದು ಎನಿಸುವಂತೆ ಮುಂದು–ವರಿದುಕೊಂಡು ಹೋಗುತ್ತಿರುವ ಬಾಹ್ಯ ಚಟುವಟಿಕೆ ಯಾಂತ್ರಿಕವಾಗಿದೆ, ಅದು ಅದ್ಭುತವಾಗಿ ಕೀಲುಗೂಡಿಸಿದ ಹಾಗೂ ಜೀವಂತಗೊಳಿಸಿದ ಆಟಿಗೆಯ ಹಾಗಿದೆ, ಅದರ ಸ್ಥಾನದ ಮೇಲಿನ ಎತ್ತರದಲ್ಲಿರುವ ಪ್ರಜ್ಞೆಯಿಂದ ಅದನ್ನು ಚಲಿಸುವಂತೆ ಮಾಡಲಾಗುತ್ತದೆ, ಅದು ಇನ್ನು ಮುಂದೆ ವ್ಯಕ್ತಿವಿಶಿಷ್ಟತೆಯಾಗಿರುವುದಿಲ್ಲವಾದರೂ ಇನ್ನೂ ವಿಶ್ವಂಭರವಾಗಿರುತ್ತದೆ, ಎಂದರೆ ಅದು ನಿನ್ನ ದೈವೀ ಏಕತೆಯಲ್ಲಿ ಸಂಪೂರ್ಣವಾಗಿ ಮುಳುಗಿ ಹೋಗಿರುವುದಿಲ್ಲ. ವ್ಯಕ್ತಿವಿಶಿಷ್ಟ ಪ್ರಕಟಣೆಯ ಎಲ್ಲ ನಿಯಮಗಳು ನನಗೆ ಸ್ಪಷ್ಟವಾಗಿವೆ, ಆದರೆ ಅವು ಎಷ್ಟೊಂದು ಸಮನ್ವಯದ ವಿಶ್ವವ್ಯಾಪಕ, ಏಕಕಾಲಕ್ಕೆ ಆಗುವ ರೀತಿಯಲ್ಲಿ ಇವೆ ಎಂದರೆ ಅವುಗಳನ್ನು ನಮ್ಮ ಸಾಮಾನ್ಯ ಭಾಷೆಯಲ್ಲಿ ಅಭಿವ್ಯಕ್ತಪಡಿಸುವುದು ಅಸಾಧ್ಯವಾಗುತ್ತದೆ.

**ಮೇ 15, 1914**

*

ಶ್ರೀಮಾತೆಯವರು ಅತಿಮಾನಸವನ್ನು ಕೆಳಗಿಳಿಸಿ ತರುವುದಕ್ಕಾಗಿ ಬರುತ್ತಾರೆ ಮತ್ತು ಆ ಅವರೋಹಣ ಅವರ ಪೂರ್ತಿ ಪ್ರಕಟಣೆ ಸಾಧ್ಯವಾಗುವಂತೆ ಮಾಡುತ್ತದೆ.

**CWSA 32/34** **– ಶ್ರೀ ಅರವಿಂದರು**

**23–9–1935**

*

## ದೈವೀ ಪ್ರೇಮದ ಹೃದಯ

ನನ್ನ ಪಾಲಿನ ಅಸ್ತಿತ್ವದ ಸಂಕೇತವೆಂದು ನೀನು ಕೊಡುತ್ತಿರುವುದು ಹೀಗಿದೆ: ಅದೆಂದರೆ ಎಲ್ಲರಿಗಾಗಿ ಕಾರ್ಯ ಮಾಡುವ ಬಾಹ್ಯ ಉಪಯುಕ್ತತೆಗೆ ಪರಮೋಚ್ಚ ಸಿದ್ಧಿಗಿಂತ ಹೆಚ್ಚು ಶ್ರೇಷ್ಠತರ ಸ್ಥಾನವಿದೆ. ನನ್ನ ಜೀವನದ ಎಲ್ಲ ಪರಿಸ್ಥಿತಿಗಳು ನಿನ್ನ ವತಿಯಿಂದ ನನಗೆ ಹೇಳುತ್ತಿರುವುದು ಹೀಗಿದೆ: "ಪರಮೋಚ್ಚ ಏಕಾಗ್ರತೆಯಿಂದ ನೀನು ಏಕತೆಯನ್ನು ಸಿದ್ಧಿಸಿಕೊಳ್ಳುವುದಿಲ್ಲ. ಎಲ್ಲರಲ್ಲಿ ಹರಡಿಕೊಳ್ಳುವುದರಿಂದ ಅದನ್ನು ಪಡೆಯುವಿ."

ಓ, ದೈವೀ ಪ್ರಭು ನಿನ್ನ ಸಂಕಲ್ಪ ಕೈಗೂಡಲಿ.

ಸದ್ಯದ ವ್ಯಕ್ತಿವಿಶಿಷ್ಟತೆಯ ಸಂಬಂಧದಲ್ಲಿ ನಿನ್ನೊಡನೆ ಏಕತೆಯನ್ನು ಬೆಂಬತ್ತು–ವುದು ಗುರಿಯಾಗಿರುವುದಿಲ್ಲ ಎಂಬುದನ್ನು ಸ್ಪಷ್ಟವಾಗಿ ತಿಳಿದುಕೊಂಡಿದ್ದೇನೆ; ಅದು (ಆ ಏಕತೆ) ಬಹಳ ಕಾಲದಿಂದ ಸಿದ್ಧಿಸಿಕೊಂಡ ವಾಸ್ತವ ಸಂಗತಿ; ಮತ್ತು ಆ ಕಾರಣದಿಂದ ನೀನು ನನಗೆ: "ಈ ಏಕತೆಯ ದಿವ್ಯಾನಂದದ ಚಿಂತನದಲ್ಲಿ ಸಂತೋಷ ಕಂಡುಕೊಳ್ಳುತ್ತಿರಬೇಡ, ನಾನು ಪೃಥ್ವಿಯ ಮೇಲೆ ನಿನಗೆ ಒಪ್ಪಿಸಿಕೊಟ್ಟ ಮಣಿಹವನ್ನು ಸಿದ್ಧಿಸಿಕೋ" ಎಂದು ಯಾವಾಗಲೂ ಹೇಳುತ್ತಿರುವಂತೆ ತೋರಿ–ಬರುವಿ.

ಸಾಮೂಹಿಕ ಕಾರ್ಯದೊಂದಿಗೆ ಏಕಕಾಲಕ್ಕೆ ಕೈಕೊಳ್ಳಬೇಕಾದ ವ್ಯಕ್ತಿಗತ ಕಾರ್ಯವು ಸತ್ತೆಯ ಎಲ್ಲ ಚಟುವಟಿಕೆಗಳು ಹಾಗೂ ಭಾಗಗಳು ಇವೆಲ್ಲವುಗಳ ಬಗ್ಗೆ ಅರಿವನ್ನು ತಂದುಕೊಳ್ಳುವುದಾಗಿದೆ ಹಾಗೂ ಅವುಗಳನ್ನು ವಶದಲ್ಲಿಟ್ಟುಕೊಳ್ಳುವು–ದಾಗಿದೆ, ಅತ್ಯುಚ್ಚ ಬಿಂದುವಿನಲ್ಲಿ ನಿರ್ಧಾರಕ ಪ್ರಜ್ಞೆಯನ್ನು ಸ್ಥಾಪಿಸುವುದಾಗಿದೆ, ವಿಧಿಸಲಾದ ಕ್ರಿಯೆ ಮತ್ತು ನಿನ್ನೊಡನೆ ಸತತ ಸಂಸರ್ಗ ಸಾಧ್ಯವಾಗುವಂತೆ ಮಾಡುವುದಾಗಿದೆ. ಕೈಕೊಳ್ಳಬೇಕಾದುದನ್ನು ಕೈಕೊಂಡು ಮುಗಿಸುವವರೆಗೆ ಪರಿಪೂರ್ಣ ಏಕತೆಯ ಸಂತೋಷಗಳು ಬರಲಾರವು.

ಮೊದಲನೆಯದಾಗಿ ನಿನ್ನೊಡನೆ ಏಕತೆಯನ್ನು ಕುರಿತು, ನಂತರ ಕಾರ್ಯ–ವನ್ನು ಕುರಿತು ಎಲ್ಲರಿಗೂ ಬೋಧನೆ ಮಾಡಬೇಕು; ಆದರೆ ಏಕತೆಯನ್ನು ಸಿದ್ಧಿಸಿ–ಕೊಂಡವರಿಗೆ ಪ್ರತಿಯೊಂದು ಕ್ಷಣ, ಅವರ ಜೀವನ ಅವರ ಮೂಲಕ ನಿನ್ನ ಸಂಕಲ್ಪದ ಸಮಗ್ರ ಅಭಿವ್ಯಕ್ತಿಯಾಗಬೇಕು.

**ಮೇ 16, 1914**

*

**ಈ ದೇಹ ನಿನ್ನ ದೈವೀ ಪ್ರೇಮವನ್ನು ಹೊರಸೂಸಲಿ**

ಓ ದೈವೀ ಪ್ರಭು, ಸತತ ಯಾರ ಬಗ್ಗೆ ನಾನು ಪ್ರಜ್ಞೆಯುಳ್ಳವಳಾಗಿರ–ಬೇಕಾಗಿದೆಯೋ ಮತ್ತು ಯಾರನ್ನು ನನ್ನ ಸತ್ತೆಯ ಅತಿ ಚಿಕ್ಕ ಜೀವಕೋಶಗಳಲ್ಲಿ ಸಿದ್ಧಿಸಿಕೊಳ್ಳಬೇಕಾಗಿದೆಯೋ ಆ ನಿನ್ನನ್ನು ನಾನೆಂದೇ ತಿಳಿದುಕೊಳ್ಳುವೆ ಮತ್ತು ಎಲ್ಲ ವಸ್ತು–ವಿಷಯಗಳಲ್ಲಿ ನೀನು ಪ್ರಕಟವಾದದ್ದನ್ನು ನೋಡುವೆ. ನೀನು ಏಕೈಕ ದೈವೀ ನೈಜತೆಯಾಗಿರುವಿ, ಅಸ್ತಿತ್ವದ ಕಾರಣ ಹಾಗೂ ಗುರಿಯಾಗಿರುವಿ, ನಿನಗಾಗಿ



ಇರುವ ನನ್ನ ಪ್ರೇಮ ಎಂದೆಂದಿಗೂ ಶ್ರೇಷ್ಠತರವಾಗಿ ಬೆಳೆಯುವಂತಾಗಲಿ ಎಂದು ಅನುಗ್ರಹಿಸು, ಅದರಿಂದಾಗಿ ನಾನು ಎಲ್ಲ ಪ್ರೇಮವಾಗುವಂತಾಗಲಿ, ಅದು ನಿನ್ನದೇ ಪ್ರೇಮ ಮತ್ತು ಅದು ನಿನ್ನ ಪ್ರೇಮವಾಗಿರುವುದರಿಂದ ನಾನು ಸಮಗ್ರವಾಗಿ ನಿನ್ನೊಡನೆ ಏಕವಾಗುವಂತಾಗಲಿ. ಈ ಪ್ರೇಮ ಹೆಚ್ಚು ಹೆಚ್ಚಾಗಿ ಗಾಢವಾಗಲಿ, ಸಂಪೂರ್ಣವಾಗಲಿ, ಪ್ರಕಾಶಮಯವಾಗಲಿ, ಸಾಮರ್ಥ್ಯಪೂರ್ಣವಾಗಲಿ; ಈ ಪ್ರೇಮ ನಿನ್ನತ್ತ ಪ್ರತಿರೋಧಿಸಲಾಗದ ಉತ್ಕಟೇಚ್ಛೆಯಾಗಲಿ, ನಿನ್ನನ್ನು ಪ್ರಕಟಿಸುವ ಅಜೇಯ ಸಾಧನವಾಗಲಿ, ಈ ಸತ್ತೆಯಲ್ಲಿರುವ ಪ್ರತಿಯೊಂದೂ ಆಳವನರಿಯ–ಲಾಗದ ಆಳಗಳಿಂದ ಅತ್ಯಂತ ಬಾಹ್ಯದಲ್ಲಿರುವ ದ್ರವ್ಯದವರೆಗೂ ಪರಿಶುದ್ಧವಾಗಲಿ, ಗಾಢವಾಗಲಿ, ಅನಾಸಕ್ತವಾಗಲಿ, ದೈವೀ ಪ್ರೇಮವಾಗಲಿ. ಈ ಒಟ್ಟುಗೂಡಿ–ರುವುದರಲ್ಲಿ (ದೇಹದಲ್ಲಿ) ಪ್ರಕಟವಾಗುವ ರೂಪ ತಾಳಿದ ದೇವ ನಿನ್ನ ಸಂಪೂರ್ಣ ಹಾಗೂ ಘನತೆವೆತ್ತ ಪ್ರೇಮದ ಎರಕವಿರಲಿ, ಆ ಪ್ರೇಮ ಒಂದೇ ವೇಳೆಗೆ ಎಲ್ಲ ಜ್ಞಾನದ ಮೂಲ ಹಾಗೂ ಸಿದ್ಧಿಸಿಕೊಳ್ಳುವಿಕೆಯಾಗಿರುತ್ತದೆ; ನಿನ್ನ ಪ್ರೇಮದ ಮೂಲಕ ಯೋಚನೆ ಸ್ಪಷ್ಟವಾಗುವಂತಾಗಲಿ, ಸಂಘಟಿತವಾಗಲಿ, ಜ್ಞಾನೋದಯ ಪಡೆಯಲಿ ಮತ್ತು ಪರಿವರ್ತನೆಗೊಳಗಾಗಲಿ; ಎಲ್ಲ ಜೀವಶಕ್ತಿಗಳು ನಿನ್ನ ಪ್ರೇಮದಿಂದ ಗರ್ಭ–ತಳೆದವುಗಳಾಗಲಿ ಹಾಗೂ ಅದರಿಂದ ಎರಕ ಪಡೆಯು–ವಂತಾಗಲಿ, ಅದರಿಂದ ಪ್ರತಿರೋಧಿಸಲಾಗದ ಪರಿಶುದ್ಧತೆ, ಮತ್ತು ಸತತ ಚೈತನ್ಯ, ಸಾಮರ್ಥ್ಯ ಹಾಗೂ ಸಚ್ಚಾರಿತ್ರ್ಯ ಇವೆಲ್ಲವುಗಳನ್ನು ಎಳೆದುಕೊಳ್ಳುವಂತಾಗಲಿ, ಈ ದುರ್ಬಲಗೊಂಡ ಮಧ್ಯವರ್ತಿ ಸತ್ತೆ ತನ್ನ ದೌರ್ಬಲ್ಯದ ಅನುಕೂಲತೆ ಪಡೆಯಲಿ, ಆ ಅನುಕೂಲತೆಯಿಂದ ನಿನ್ನ ಪ್ರೇಮದ ಎರಕಗೊಂಡ ಅಂಶಗಳಿಂದ ತನ್ನನ್ನು ಪುನರ್ರಚನೆ ಮಾಡಿಕೊಳ್ಳುವಂತಾಗಲಿ, ಮತ್ತು ಈಗ ಪ್ರಜ್ವಲಿಸುತ್ತಿರುವ ಅಗ್ನಿಷ್ಟಿಕೆ–ಯಾದ ಈ ದೇಹ ನಿನ್ನ ದೈವೀ, ಅವೈಯಕ್ತಿಕ, ಘನತೆವೆತ್ತ ಮತ್ತು ಸ್ಥಿರವಾಗಿರುವ ನಿನ್ನ ಪ್ರೇಮವನ್ನು ಅದರ ಪ್ರತಿಯೊಂದು ರಂಧ್ರದಿಂದ ಹೊರಸೂಸಲಿ... ಮಿದುಳು ನಿನ್ನ ಪ್ರೇಮದಿಂದ ಪುನರ್ರಚಿತಗೊಳ್ಳಲಿ. ಕೊನೆಯದಾಗಿ, ನಿನ್ನ ಪ್ರೇಮ ಅದರದೇ ಸಾಮರ್ಥ್ಯ, ವೈಭವ, ಮಾಧುರ್ಯ ಮತ್ತು ಶಕ್ತಿಗಳೊಂದಿಗೆ ಎಲ್ಲ ವಸ್ತು–ವಿಷಯಗಳ ಮೇಲೆ ಹೊರಹರಿಯಲಿ, ಪ್ರವಹಿಸಲಿ, ಒಳನುಗ್ಗಲಿ, ಅವು ರೂಪ–ಪರಿವರ್ತನೆಗೊಳ್ಳಲಿ, ಪುನರುಜ್ಜೀವನ ಪಡೆಯಲಿ, ಜೀವಂತಗೊಳಿಸಲಿ, ನಿನ್ನ ಪ್ರೇಮದಲ್ಲಿ ಶಾಂತಿಯಿದೆ, ಸಂತೋಷವಿದೆ, ನಿನ್ನ ಪ್ರೇಮದಲ್ಲಿ ಸೇವಕನ ಕಾರ್ಯಕ್ಕಾಗಿ ಸಾರ್ವಭೌಮ ಸನ್ನೆ (lever) ಯಿದೆ. ನಿನ್ನ ಪ್ರೇಮ ವಿಶ್ವಕ್ಕಿಂತ

ವಿಶಾಲವಾಗಿದೆ, ಎಲ್ಲ ಯುಗಗಳಿಗಿಂತಲೂ ಹೆಚ್ಚಿನಕಾಲ ಬಾಳುವಂತಹದಾಗಿದೆ; ಅದು ಅನಂತ, ಸನಾತನ, ಅದು ನೀನೇ ಆಗಿರುವಿ. ನಾನು ನೀನೇ ಆಗಬೇಕೆಂದು ಬಯಸುತ್ತೇನೆ ಮತ್ತು ಅದು ನಾನೇ ಆಗಿರುವೆ, ಏಕೆಂದರೆ ನಿನ್ನ ನಿಯಮ ಹಾಗಿದೆ, ನಿನ್ನ ಸಂಕಲ್ಪ ಹಾಗಿದೆ.

**ಮೇ 23, 1914**

*

**ನಿಜವಾಗಿ ಪ್ರೀತಿಸುವುದನ್ನು ಕಲಿಯುವುದು**

ಓ, ನನ್ನ ಮಧುರ ಸ್ವಾಮಿಯೆ, ಬಾಹ್ಯ ವಸ್ತು–ವಿಷಯಗಳಲ್ಲಿ ನಾನು ಮುಳುಗಿ ಹೋಗದಂತಾಗಲಿ, ಅವುಗಳಿಗಾಗಿ ನನಗೆ ಅಭಿರುಚಿಯಿಲ್ಲ, ಆಸಕ್ತಿಯಿಲ್ಲ. ನಾನು ಅವುಗಳಲ್ಲಿ ತೊಡಗಿಕೊಂಡಿದ್ದರೆ ಅದಕ್ಕೆ ಕಾರಣ ಅದು ನಿನ್ನ ಸಂಕಲ್ಪವಾಗಿದೆ ಎಂಬ ಭಾವನೆ ನನಗೆ ಬರುತ್ತದೆ, ಮತ್ತು ಕಾರ್ಯವನ್ನು ಅದರ ಕನಿಷ್ಠಮಟ್ಟದ ವಿವರಗಳಲ್ಲಿ ಹಾಗೂ ಸತ್ವದಲ್ಲಿ ಸಮಗ್ರವಾಗಿ ಸಿದ್ಧಿಸಿಕೊಳ್ಳಬೇಕಾಗುತ್ತದೆ. ಆದರೆ ಆ ಕಾರ್ಯ–ಗಳತ್ತ ಮನುಷ್ಯ ತನ್ನ ಲಕ್ಷ್ಯ ಹೊರಳಿಸುವುದು ಮತ್ತು ಸಾಧ್ಯವಿದ್ದಷ್ಟು ನಿನ್ನ ಶಕ್ತಿ ಅವುಗಳಲ್ಲಿ ಬೆಸುಗೆಗೊಳ್ಳುವಂತೆ ಮಾಡುವುದು ಸಾಕಾಗುತ್ತದೆ. ಆದರೆ ಅವು ಮನುಷ್ಯನ ಪ್ರಜ್ಞೆಯಲ್ಲಿ ನಿಜವಾದ ನೈಜತೆಗಳ ಆದ್ಯತೆಯನ್ನು ಪಡೆಯಲು ಅನುವು ಮಾಡಿ ಕೊಡಬಾರದು. ಓ ನನ್ನ ಮಧುರ ಸ್ವಾಮಿ, ನಾನು ನಿನಗಾಗಿ ನೀನೇನಾ–ಗಿರುವೆ ಎಂಬುದರ ಜ್ಞಾನಕ್ಕಾಗಿ, ನಿನ್ನೊಡನೆ ಗುರುತಿಸಿಕೊಳ್ಳುವುದಕ್ಕಾಗಿ ಅಭೀಪ್ಸೆ–ಪಡುತ್ತೇನೆ, ಯಾವಾಗಲೂ ಹೆಚ್ಚು ಪರಿಶುದ್ಧವಾಗಿ, ವಿಶಾಲವಾಗಿ, ಗಾಢವಾಗಿ ಬೆಳೆಯುತ್ತಿರುವ ಶ್ರೇಷ್ಠತರ ಪ್ರೇಮವನ್ನು ಬೇಡುತ್ತೇನೆ, ನಾನು ಭೌತ–ದ್ರವ್ಯದಲ್ಲಿ ಮುಳುಗಿ ಹೋಗಿರುವ ಹಾಗೆ ನನ್ನನ್ನು ಕಂಡುಕೊಳ್ಳುತ್ತೇನೆ; ಇದೇ ನಿನ್ನ ಉತ್ತರವಾಗಿದೆಯೆ? ನೀನೇ ಸ್ವತಃ ಈ ರೀತಿ ಭೌತದ್ರವ್ಯದಲ್ಲಿ ಮುಳುಗಿ ಹೋಗು–ವುದನ್ನು ಒಪ್ಪಿಕೊಂಡಾಗ, ಅದನ್ನು ಕ್ರಮೇಣ ಪ್ರಜ್ಞೆಗೆ ಎಚ್ಚರಿಸಬೇಕೆಂದಿದ್ದಾಗ ಇದು ನಿನ್ನೊಡನೆ ಹೆಚ್ಚು ಪರಿಪೂರ್ಣವಾಗಿ ಗುರುತಿಸಿಕೊಂಡಿದ್ದರ ಪರಿಣಾಮ–ವಾಗಿದೆಯೆ? "ನೀನು ನಿಜವಾಗಿ ಪ್ರೀತಿಸುವುದನ್ನು ಕಲಿತುಕೊಳ್ಳಬೇಕೆಂದಿದ್ದರೆ, ಇದು ಆ ರೀತಿ ಪ್ರೀತಿಸಬೇಕಾಗಿದೆ" ಎಂದು ನೀನು ಉತ್ತರಕೊಡುತ್ತಿರು–ವಿಯಲ್ಲವೆ?... ಅದನ್ನು ಅಂಧಕಾರದಲ್ಲಿ ಹಾಗೂ ಅಪ್ರಜ್ಞೆಯಲ್ಲಿ ಕೈಕೊಳ್ಳ–ಬೇಕಾಗಿದೆಯಲ್ಲವೆ?



ಓ ದೈವೀ ಪ್ರಭು, ನನ್ನ ಮಧುರ ಸ್ವಾಮಿ, ನಾನು ನಿನಗೆ ಸೇರಿದವಳಾಗಿರುವೆ ಮತ್ತು ನೀನು ಸಂಕಲ್ಪಿಸಿದ್ದನ್ನು ಬಯಸುವೆ ಎಂಬುದನ್ನು ನೀನು ತಿಳಿದಿರುವೆ, ಆದರೆ ನೀನು ಸಂಕಲ್ಪಿಸಿದುದರ ಬಗ್ಗೆ ನನ್ನಲ್ಲಿ ಸಂಶಯ ಉಂಟಾಗದಿರಲಿ. ಹೃದಯದ ಬದಲಾಗದ ಶಾಂತಿಯಲ್ಲಿ ನನ್ನಲ್ಲಿ ಜ್ಞಾನೋದಯವುಂಟಾಗುವಂತೆ ಮಾಡು. ಅವಶ್ಯವಾಗಿದ್ದರೆ ನಾನು ಅಂಧಕಾರದಲ್ಲಿ ಮುಳುಗಿ ಹೋಗುವಂತಾಗಲಿ, ಆದರೆ ಕನಿಷ್ಠ ಪಕ್ಷ ಅದನ್ನು ನೀನೇ ಸಂಕಲ್ಪಿಸಿರುವೆ ಎಂಬುದು ನನಗೆ ತಿಳಿಯುವಂತಾಗಲಿ. ದೈವೀ ಪ್ರಭು, ನಿನ್ನ ಉತ್ತರ ರೂಪದಲ್ಲಿ ನಾನು ಹೃದಯದಲ್ಲಿ ನಿನ್ನ ದೈವೀ ಹಾಗೂ ಶಾಶ್ವತ ಸಾನ್ನಿಧ್ಯದ ಸಂತೋಷವಿರುವ ಸ್ತೋತ್ರ ಘೋಷವನ್ನು ಕೇಳುತ್ತೇನೆ.

**ಮೇ 24, 1914**

*

**ಪೃಥ್ವಿಯ ಅಭೀಪ್ಸೆಯೊಂದಿಗೆ ಗುರುತಿಸಿಕೊಳ್ಳುವುದು**

ಓಹ್, ಪರಿಶುದ್ಧ, ಕುಂದಿಲ್ಲದ ಸ್ಫಟಿಕದಂತಾಗುವುದು, ಅದು ನಿನ್ನ ದೈವೀ ಕಿರಣವನ್ನು ಮಬ್ಬುಗೊಳಿಸದೆ, ಬಣ್ಣವಿರಿಸದೆ ಇಲ್ಲವೆ ವಿರೂಪಗೊಳಿಸದೆ ಸಾಗಿ ಹೋಗುವಂತೆ ಮಾಡುವುದು!–ಪರಿಪೂರ್ಣತೆಗಾಗಿ ಇರುವ ಆಸೆಯಿಂದಲ್ಲ, ಆದರೆ ಅದರಿಂದಾಗಿ ನಿನ್ನ ಕಾರ್ಯ ಸಾಧ್ಯವಿದ್ದಷ್ಟು ಪರಿಪೂರ್ಣತೆಯಿಂದ ಈಡೇರುವಂ–ತಾಗುವುದು. ನಾನು ನಿನ್ನಲ್ಲಿ ಇದನ್ನು ಬೇಡಿದಾಗ ನಿನ್ನ ಬಳಿ ಮಾತನಾಡುವ "ನಾನು" ಇಡೀ ಪೃಥ್ವಿಯಾಗಿರುತ್ತದೆ, ಅದು ಈ ವಜ್ರದಂತೆ ಪರಿಶುದ್ಧವಾಗಿರಲು, ನಿನ್ನ ಪರಮೋಚ್ಚ ಪ್ರಕಾಶವನ್ನು ಪ್ರತಿಫಲಿಸುವ ಕನ್ನಡಿಯಂತಾಗಿರಲು ಅಭೀಪ್ಸೆ–ಪಡುತ್ತದೆ. ಎಲ್ಲ ಜನರ ಹೃದಯಗಳು ನನ್ನ ಹೃದಯದಲ್ಲಿ ಬಡಿದುಕೊಳ್ಳುತ್ತವೆ, ಎಲ್ಲ ಯೋಚನೆಗಳು ನನ್ನ ಯೋಚನೆಯಲ್ಲಿ ಕಂಪಿಸುತ್ತವೆ, ವಿಧೇಯ ಪಶುವಿನ ಇಲ್ಲವೆ ವಿನಮ್ರ ಸಸ್ಯದ ಅತಿ ಅಲ್ಪ ಅಭೀಪ್ಸೆ ನನ್ನ ಪ್ರಬಲ ಅಭೀಪ್ಸೆಯೊಂದಿಗೆ ಜೊತೆ–ಗೂಡುತ್ತದೆ, ಮತ್ತು ಇದೆಲ್ಲ ನಿನ್ನತ್ತ ಮೇಲೇರಿ ಹೋಗುತ್ತದೆ, ಕಾರಣ ಅದು ಪ್ರೇಮ ಹಾಗೂ ಪ್ರಕಾಶಗಳನ್ನು ಗೆದ್ದುಕೊಳ್ಳಬೇಕಾಗಿರುತ್ತದೆ, ದೈವೀ ಸತ್ತೆಯ ಶಿಖರಗಳ ಮೇಲೇರಿ ಹೋಗುತ್ತ ಅದು ನಿನ್ನನ್ನು ಸಿದ್ಧಿಸಿಕೊಳ್ಳುವಂತಾಗುತ್ತದೆ, ನಿನ್ನ ನಿಶ್ಚಲ ದಿವ್ಯಾನಂದದಿಂದ ಮಂತ್ರಮುಗ್ಧವಾಗುವಂತಾಗುತ್ತದೆ, ಮತ್ತು ವೇದನೆಯ ಅಂಧ–ಕಾರದಲ್ಲಿ ಒಳನುಗ್ಗಿ ಹೋಗುವಂತಾಗಿ ಅದನ್ನು ದೈವೀ ಸಂತೋಷವನ್ನಾಗಿ

ರೂಪಪರಿವರ್ತನೆ ಹೊಂದುವಂತೆ ಮಾಡಲಾಗುತ್ತದೆ, ಸಾರ್ವಭೌಮ ಶಾಂತಿ–ಯನ್ನು ಪಡೆಯುವಂತಾಗುತ್ತದೆ, ತನ್ನನ್ನೇ ಕೊಟ್ಟುಕೊಳ್ಳುವ ಅನಂತ ಪ್ರೇಮದಿಂದ ಈ ಹಿಂಸೆಯನ್ನು ಮತ್ತು ನಿನ್ನೊಡನೆ ಪರಿಪೂರ್ಣ ಏಕತೆ ಇರುವ ನಿಶ್ಚಿತತೆ–ಯೊಂದಿಗೆ ಮುಗುಳ್ನಗುವ ವಿಶ್ವಾಸಾರ್ಹ ಪ್ರಶಾಂತತೆಯದನ್ನಾಗಿ ಮಾಡಲಾಗಿದೆ.

ಓ, ನನ್ನ ಮಧುರ ಸ್ವಾಮಿ, ನೀನು ವಿಜಯಿಯಾಗುವವ ಹಾಗೂ ವಿಜಯ, ಜಯಿಸುವವ ಹಾಗೂ ಜಯ ಹೀಗೆ ಎಲ್ಲವೂ ಆಗಿರುವಿ!

**ಮೇ 25, 1914**

*

## ಎಲ್ಲ ವಸ್ತು–ವಿಷಯಗಳಲ್ಲಿ ನಿನ್ನ ದೈವೀ ಪ್ರೇಮವನ್ನು ಜಾಗ್ರತಗೊಳಿಸುವ ನಿನ್ನ ಹೃದಯ ನಾನು

ಓ, ವಿಜಯಿಯಾಗಿರುವ ದೈವೀ ಪ್ರೇಮದ ಸಾಮರ್ಥ್ಯವೆ, ನೀನು ಈ ವಿಶ್ವದ ಸಾರ್ವಭೌಮ ಒಡೆಯನಾಗಿರುವಿ, ನೀನು ಅದರ ಸೃಷ್ಟಿಕರ್ತ ಹಾಗೂ ಸಂರಕ್ಷಕ–ನಾಗಿರುವಿ, ಅದು ಅಸ್ತವ್ಯಸ್ತತೆಯಿಂದ ಹೊರಹೊಮ್ಮಲು ಅನುಮತಿ ನೀಡಿರುವಿ ಮತ್ತು ಈಗ ನೀನು ಅದರ ಶಾಶ್ವತ ಗುರಿಯತ್ತ ಅದನ್ನು ಮುನ್ನಡೆಸಿಕೊಂಡು ಹೋಗುತ್ತಿರುವಿ. ಇದಕ್ಕಿಂತ ವಿನಮ್ರವಾಗಿರುವ ವಿಷಯ ಬೇರೊಂದಿಲ್ಲ, ಆದರೆ ಅದರಲ್ಲಿ ನೀನು ದೇದೀಪ್ಯಮಾನನಾಗಿರುವುದನ್ನು ನಾನು ನೋಡುತ್ತೇನೆ, ನಿನ್ನ ಸಂಕಲ್ಪಕ್ಕೆ ಅಷ್ಟೊಂದು ವೈರತ್ವವಿರುವ ಸತ್ತೆಯಿಲ್ಲ, ಆದರೆ ನೀನು ಅದರಲ್ಲಿ ಜೀವಿಸುತ್ತಿರುವುದನ್ನು, ಕಾರ್ಯಕೈಕೊಳ್ಳುತ್ತಿರುವುದನ್ನು ಹಾಗೂ ತೇಜಸ್ಸನ್ನು ಹೊರಸೂಸುತ್ತಿರುವುದನ್ನು ನಾನು ನೋಡುತ್ತೇನೆ. ಓ, ನನ್ನ ಮಧುರ ಸ್ವಾಮಿಯೆ, ಈ ಪ್ರೇಮದ ಸಾರವಾದವನೆ, ನಾನು ನಿನ್ನ ಹೃದಯ, ಮತ್ತು ನಿನ್ನ ದೈವೀ ಪ್ರೇಮದ ರಭಸ ಪ್ರವಾಹಗಳು ನನ್ನ ಇಡೀ ಸತ್ತೆಯಲ್ಲಿ ಹಾದು ಹೋಗುತ್ತವೆ, ಎಲ್ಲ ವಸ್ತು–ವಿಷಯಗಳಲ್ಲಿ ನಿನ್ನ ದೈವೀ ಪ್ರೇಮವನ್ನು ಜಾಗ್ರತಗೊಳಿಸುತ್ತವೆ ಇಲ್ಲವೆ ಅದಕ್ಕೂ ಹೆಚ್ಚಾಗಿ ಎಲ್ಲ ವಸ್ತು–ವಿಷಯಗಳು ಎಲ್ಲವನ್ನೂ ಜೀವಂತಗೊಳಿಸುವ ನಿನ್ನ ದೈವೀ ಪ್ರೇಮದ ಪ್ರಜ್ಞೆಗೆ ಎಚ್ಚರಗೊಳ್ಳುವಂತೆ ಮಾಡುತ್ತವೆ.

ನಿನ್ನನ್ನು ಗುರುತಿಸದೆ ಇರುವ ಎಲ್ಲರನ್ನೂ, ನಿನ್ನನ್ನು ತಿಳಿದುಕೊಳ್ಳದೆ ಇರುವವರನ್ನೂ, ನಿನ್ನ ಮಧುರ ದೈವೀ ನಿಯಮಕ್ಕೆ ಮುಖ ತಿರುಗಿಸಿ ಹೋಗಲು ಪ್ರಯತ್ನಿಸುವ ಎಲ್ಲರನ್ನೂ ನನ್ನ ತೋಳುಗಳಲ್ಲಿ ತೆಗೆದುಕೊಳ್ಳುತ್ತೇನೆ, ನನ್ನ ಪ್ರೇಮದ ಹೃದಯದ ತೊಟ್ಟಿಲಲ್ಲಿ ಅವರನ್ನಿರಿಸಿ ತೂಗುತ್ತೇನೆ ಮತ್ತು ಅವರನ್ನು ನಿನ್ನ ದೈವೀ ಜ್ವಾಲೆಗಳಿಗೆ ಅರ್ಪಿಸುತ್ತೇನೆ, ಅದರಿಂದಾಗಿ ನಿನ್ನ ಅದ್ಭುತ ತೇಜಸ್ಸು ಅವರೊಳಗೆ ನುಗ್ಗಿ ಹೋಗಿ ಅವರು ನಿನ್ನ ದೈವೀ ಆನಂದದಲ್ಲಿ ಪರಿವರ್ತನೆಗೆ ಒಳಗಾಗು–ವಂತಾಗುವುದು. ಓ ದೇದಿಪ್ಯಮಾನವಾದ ದೈವೀ ಪ್ರೇಮವೆ ಎಲ್ಲದರಲ್ಲೂ ನೀನು ಒಳನುಗ್ಗುವಿ, ಎಲ್ಲವನ್ನೂ ರೂಪ ಪರಿವರ್ತನೆಗೆ ಒಳಪಡಿಸುವಿ.



**ಜೂನ 1, 1914**

*

## ನಾನು ನಿನ್ನ ಅಕ್ಷಯ ದೈವೀ ಪ್ರೇಮವಲ್ಲದೆ ಬೇರೇನೂ ಅಲ್ಲ

. . . ನಾನು ಅಕ್ಷಯ ದೈವೀ ಪ್ರೇಮವಲ್ಲದೆ ಬೇರೇನೂ ಅಲ್ಲ, ನಾನು ಎಲ್ಲ ವಸ್ತು–ವಿಷಯಗಳಲ್ಲಿ ಒಳನುಗ್ಗಿ ಹೋಗುತ್ತೇನೆ, ಪ್ರತಿಯೊಂದು ಅಣುವಿನ ಒಳಗೆ ಜೀವಿಸುತ್ತಿದ್ದು ಅದರಲ್ಲಿ ಪರಿಶುದ್ಧಗೊಳಿಸುವ ಹಾಗೂ ರೂಪ–ಪರಿವರ್ತನೆ ಮಾಡುವ ಅಗ್ನಿಯನ್ನು ಹೊತ್ತಿಸುತ್ತೇನೆ, ಆ ಅಗ್ನಿ ಎಂದಿಗೂ ನಂದಿ ಹೋಗು–ವುದಿಲ್ಲ, ಅದು ನಿನ್ನ ದೈವೀ ಆನಂದಗಳನ್ನು ಕುರಿತು ಸಂದೇಶ ನೀಡುವಂತಹದು, ಎಲ್ಲ ಪರಿಪೂರ್ಣತೆಗಳನ್ನು ಸಿದ್ಧಿಸಿಕೊಳ್ಳುವಂತಹದು.

ಆಗ ಇದೇ ದೈವೀ ಪ್ರೇಮ ಮೌನದಿಂದ ಚಿಂತನಶೀಲವಾಗುತ್ತದೆ ಮತ್ತು ಓ, ಅರಿತುಕೊಳ್ಳಲಾಗದ ವೈಭವವಿದ್ದವನೆ, ನಿನ್ನೆಡೆಗೆ ಹೊರಳಿ ಸಂತೋಷದಿಂದ ನಿನ್ನ ಹೊಸ ಪ್ರಕಟಣೆಗಾಗಿ ಕಾದುಕೊಂಡಿರುತ್ತದೆ.

**ಜೂನ 2, 1914**

*

ಮಾನವನಿಗಾಗಿ ನೀನು ಅರಸುತ್ತಿರುವೆ, ಕೇವಲ ನಿನಗಾಗಿ ಅಲ್ಲ.
ದೇವ ಮಾನವ–ಮನಸ್ಸನ್ನು ಹೊಂದಿದರೆ ಮತ್ತು
ತನ್ನ ನಿಲುವಂಗಿಯೆಂದು ಮರ್ತ್ಯ ಅಜ್ಞಾನವನ್ನು ಧರಿಸಿದರೆ
ಮತ್ತು ಮೂರು ಹೆಜ್ಜೆಗಳನಿರಿಸುವ ವಾಮನನಾದರೆ ಮಾತ್ರ,
ತನ್ನಂತೆ ದೇವನಾಗಲು ಮಾನವನಿಗೆ ಸಹಾಯ ನೀಡಬಲ್ಲ.
ವಿಶ್ವವ್ಯಾಪಿ ದೈವೀ ಶ್ರೇಷ್ಠತೆ ಮಾನವ ವೇಷಧರಿಸಿ ಕಾರ್ಯ
ಕೈಕೊಳ್ಳುತಿಹುದು

ಮತ್ತು ರಹಸ್ಯ, ತಲುಪಲಾಗದ ಮಹಾದ್ವಾರವನು
ಕಂಡು ಹಿಡಿಯುತಿಹುದು
ಮತ್ತು ಅಮರನ ಬಂಗಾರ ವರ್ಣದ ಬಾಗಿಲನು ತೆರೆದಿರಿಸುತಿಹುದು.
ಮಾನವತೆ ಇರುವ ಮನುಷ್ಯ ದೇವನ ಮಾನವ ಹೆಜ್ಜೆಗಳನು
ಅನುಸರಿಸುವನು.
ಅವನ ಅಂಧಕಾರವನು ಒಪ್ಪಿಕೊಳ್ಳುತ್ತ ನೀನು ಅವನಿಗೆ ಪ್ರಕಾಶ
ತಂದುಕೊಡಬೇಕು,
ಅವನ ವೇದನೆಯನು ಒಪ್ಪಿಕೊಳ್ಳುತ್ತ ನೀನು ಅವನಿಗೆ ದಿವ್ಯಾನಂದ
ತಂದುಕೊಡಬೇಕು.

**'ಸಾವಿತ್ರಿ' ಪು. 488**

*

## ಹೊಸ ದೈವೀಶಕ್ತಿ ಮತ್ತು ಹೊಸ ಸೃಷ್ಟಿಯ ದೈವೀಶಬ್ದ



*

ಪ್ರತಿಯೊಂದು ಭಗವಂತನಿಂದ ಬರುತ್ತದೆ; ಆದರೆ ನಿಮ್ಮ ಪ್ರಕೃತಿ ಅವಿದ್ಯೆಯ ಸಾಮರ್ಥ್ಯವಾಗಿರುತ್ತದೆ–ಹಾಗಾಗಿ ಅದು ದೈವೀ ಸತ್ಯದ ಸಾಮರ್ಥ್ಯವಾಗಿರುವುದಿಲ್ಲ, ಆದರೆ ಸತ್ಯ, ಮಿಥ್ಯೆಗಳಿಂದ ಮಿಶ್ರಣಗೊಂಡ ಸಾಮರ್ಥ್ಯವಾಗಿರುತ್ತದೆ. ಶ್ರೀಮಾತೆ–ಯವರು ಇಲ್ಲಿ ಅವಿದ್ಯೆಯ ದೈವೀ ಸಾಮರ್ಥ್ಯವನ್ನು ಪ್ರತಿನಿಧಿಸುತ್ತಿರುವುದಿಲ್ಲ, ಆದರೆ ದೈವೀ ಸತ್ಯವನ್ನು ಕೆಳಗಿಳಿಸಿ ತರುವುದಕ್ಕಾಗಿ ಮತ್ತು ಅವಿದ್ಯೆಯಿಂದ ದೈವೀ ಸತ್ಯದಲ್ಲಿ ಏರಿ ಹೋಗುವುದಕ್ಕಾಗಿ ಕೆಳಗಿಳಿದು ಬಂದ ದೈವೀ ಸಾಮರ್ಥ್ಯವನ್ನು ಪ್ರತಿನಿಧಿ–ಸುತ್ತಾರೆ.

**ಎಪ್ರಿಲ್ 12, 1933**

*



## ದೈವೀ ಪ್ರಭುವಿನ ನಿವಾಸ : ಯಜ್ಞವೇದಿ

ದೈವೀ ಪ್ರಭು, ದೈವೀ ಏಕತೆಯ ಪ್ರಜ್ವಲಿಸುವ ಅಗ್ನಿಯಲ್ಲಿ ಉದ್ದೀಪ್ತವಾಗಿರುವ ಅರ್ಪಣೆಯ ರೂಪದಲ್ಲಿ ನಾನು ನಿನ್ನೆದುರಿಗಿದ್ದೇನೆ.

ಹೀಗೆ ನಿನ್ನೆದುರು ಇದ್ದುದು ಈ ಮನೆಯ ಎಲ್ಲ ಕಲ್ಲುಗಳು ಮತ್ತು ಈ ಮನೆ ಒಳಗೊಂಡಿರುವುದೆಲ್ಲವೂ, ಅದರ ಹೊಸ್ತಿಲನ್ನು ದಾಟಿ ಹೋಗುವ ಎಲ್ಲರೂ, ಮತ್ತು ಅದನ್ನು ನೋಡುವವರೂ ಕೂಡ, ಯಾವುದೇ ರೀತಿಯಲ್ಲಿ ಅದರೊಡನೆ ಮತ್ತು ಒಬ್ಬರಿಂದ ಒಬ್ಬರಿಗೆ ಸಂಪರ್ಕ ಇಟ್ಟುಕೊಂಡವರು ಮತ್ತು ಇಡೀ ಪೃಥ್ವಿ. ನಿನ್ನ ಪ್ರಕಾಶ ಹಾಗೂ ಪ್ರೇಮಗಳಿಂದ ಈಗ ಹೆಚ್ಚು ಹೆಚ್ಚಾಗಿ ಒಳಗೆ ವ್ಯಾಪಿಸಿಕೊಂಡಿರುವ ಮತ್ತು ಮುಂದೆ ವ್ಯಾಪಿಸಿಕೊಳ್ಳಲಿರುವ, ಈ ಕೇಂದ್ರದಿಂದ, ಈ ಉರಿಯುತ್ತಿರುವ ಒಲೆಯಿಂದ ನಿನ್ನ ಶಕ್ತಿಗಳು ಪೃಥ್ವಿಯ ಮೇಲೆ ಎಲ್ಲೆಡೆಯಲ್ಲಿ, ಎಲ್ಲರ ಹೃದಯಗಳಲ್ಲಿ, ಯೋಚನೆಗಳಲ್ಲಿ ತಮ್ಮ ತೇಜಸ್ಸನ್ನು ಹೊರಸೂಸುವವು.

ಓ, ಅಸಂತೋಷದಲ್ಲಿ ಹಾಗೂ ಅಜ್ಞಾನದಲ್ಲಿ ಇರುವ ಮುದ್ದು ಮಕ್ಕಳೆ, ಬಂಡಾಯವೇಳುವ ಹಾಗೂ ಹಿಂಸಾತ್ಮಕ ಪ್ರಕೃತಿಯೆ, ನಿಮ್ಮ ಹೃದಯಗಳನ್ನು ತೆರೆದಿರಿಸಿರಿ, ನಿಮ್ಮ ಶಕ್ತಿಗಳನ್ನು ಶಾಂತಗೊಳಿಸಿರಿ, ಏಕೆಂದರೆ ಇಲ್ಲಿ ಪ್ರೇಮದ ಮಧುರ ಸರ್ವಸಾಮರ್ಥ್ಯ ಬರುತ್ತಿದೆ, ಇಲ್ಲಿ ನಿಮ್ಮೊಳಗೆ ವ್ಯಾಪಿಸಿಕೊಳ್ಳುವ ಪರಿಶುದ್ಧ ತೇಜಸ್ಸಿದೆ. ಈ ಮಾನವ ಗಳಿಗೆ, ಈ ಪಾರ್ಥಿವ ಗಳಿಗೆ ಎಲ್ಲ ಇತರ ಗಳಿಗೆಗಳ ಮೇಲೆ ಹೆಚ್ಚು ಸೌಂದರ್ಯವುಳ್ಳದ್ದಾಗಿದೆ. ಪ್ರತಿಯೊಬ್ಬನೂ, ಎಲ್ಲರೂ ಅದನ್ನು ಅರಿತುಕೊಳ್ಳಲಿ ಮತ್ತು ಕೊಡಲಾದ ವೈಶಾಲ್ಯದಲ್ಲಿ ಸಂತೋಷ ಕಂಡುಕೊಳ್ಳಲಿ.

ಓ, ವೇದನೆಯಿಂದ ತುಂಬಿಕೊಂಡ ಹೃದಯಗಳೆ, ಮತ್ತು ಚಿಂತೆಯಿಂದ ದಣಿದ ಹುಬ್ಬುಗಳೆ, ಮೂರ್ಖ ಮಬ್ಬುತನವೆ, ಮತ್ತು ಅಜ್ಞಾನದಲ್ಲಿರುವ ಬದ್ಧ ದ್ವೇಷವೆ ನಿಮ್ಮ ತಳಮಳವೆಲ್ಲ ಶಾಂತವಾಗಲಿ, ನಿರ್ನಾಮವಾಗಲಿ, ಓ, ಹೊಸ ಜಗತ್ತಿನ ಭವ್ಯತೆ ಬರುತ್ತಿದೆ :

"ನಾನಿಲ್ಲಿದ್ದೇನೆ."

**ಜೂನ 9, 1914**

*

### ದೈವೀ ಪ್ರಭುವಿನ ಒಡಂಬಡಿಕೆ ಹಾಗೂ ವಚನ ನೀಡುವಿಕೆ

ದೈವಿಕವಾದ ಅದು ನಾವು ಕೈಕೊಳ್ಳಬೇಕಾದ, ದಿಟ ಎನ್ನಬಹುದಾದ, ಸೃಷ್ಟಿಯ ಕಾರ್ಯ; ಚಟುವಟಿಕೆಗಳನ್ನು, ಸತ್ತೆಯ ಹೊಸ ರೀತಿಗಳನ್ನು ಸೃಷ್ಟಿಸಬೇಕಾಗಿದೆ ಅದರಿಂದಾಗಿ ಇಂದಿನವರೆಗೆ ಪೃಥ್ವಿಗೆ ಅಪರಿಚಿತವಾಗಿದ್ದ ಈ ದೈವೀ ಶಕ್ತಿ ತನ್ನ ವೈಶಾಲ್ಯದಲ್ಲಿ ಪ್ರಕಟಗೊಳ್ಳಬಹುದು. ಈ ಯಾತನೆಗೆ ನನ್ನನ್ನು ಮುಡಿಪಾಗಿರಿಸಿಕೊಂಡಿದ್ದೇನೆ, ಏಕೆಂದರೆ ಇದನ್ನು ನೀನು ನನ್ನಿಂದ ಬಯಸಿರುವಿ. ನನ್ನನ್ನು ನೀನು ಈ ಕಾರ್ಯಕ್ಕೆ ನಿಯಮಿಸಿರುವುದರಿಂದ, ನನಗೆ ಅವಶ್ಯವಾದ ಸಾಧನವನ್ನು ನೀನು ಕೊಡಬೇಕು, ಎಂದರೆ ಅದನ್ನು ಸಿದ್ಧಿಸಿಕೊಳ್ಳುವುದಕ್ಕಾಗಿ ಅವಶ್ಯವಾಗಿರುವ ಜ್ಞಾನವನ್ನು ಕೊಡಬೇಕು. ನಮ್ಮ ಪ್ರಯತ್ನಗಳನ್ನು ಒಂದುಗೂಡಿಸುತ್ತೇವೆ. ಈ ದೈವೀ ಶಕ್ತಿಯ ಪ್ರಕಟಣೆಯ ರೀತಿಯನ್ನು ಕುರಿತು ಇರುವ ಜ್ಞಾನಕ್ಕಾಗಿ ಸತತ ಕರೆ ಕೊಡುವುದರಲ್ಲಿ ಏಕಾಗ್ರತೆ ವಹಿಸುತ್ತೇವೆ, ಮತ್ತು ನೀನು, ಸತ್ತೆಯ ಪರಮೋಚ್ಚ ಕೇಂದ್ರವಾದವನು ಆ ದೈವೀ ಶಕ್ತಿಯನ್ನು ಪೂರ್ತಿಯಾಗಿ ಹೊರಗೆ ಕಳಿಸುವಿ, ಅದರಿಂದಾಗಿ ಅದು ಎಲ್ಲ ಅಡೆತಡೆಗಳ ಮೇಲೆ ಒಳನುಗ್ಗಲು ಅವುಗಳ ರೂಪ ಪರಿವರ್ತನೆ ಮಾಡಲು ಹಾಗೂ ಅವುಗಳ ಮೇಲೆ ಜಯ ಸಾಧಿಸಲು ಸಾಧ್ಯವಾಗುವುದು. ವ್ಯಕ್ತಿಗತ ಜೀವನವಿರುವ ಜಗತ್ತುಗಳೊಂದಿಗೆ ನೀನು ಒಡಂಬಡಿಕೆಗೆ ರುಜು ಹಾಕಿರುವಿ. ನೀನು ಭರವಸೆ ನೀಡಿರುವಿ, ಅದನ್ನು ಸಾಧಿಸಬಲ್ಲವರನ್ನು ಮತ್ತು ಈ ಭರವಸೆಯನ್ನು ಈಡೇರಿಸಬಲ್ಲುದುದನ್ನು ಈ ಜಗತ್ತುಗಳಲ್ಲಿ ಕಳಿಸಿಕೊಟ್ಟಿರುವಿ. ಇದು ನಿನ್ನ ಸಮಗ್ರ ಸಹಾಯವನ್ನು ಒತ್ತಾಯದಿಂದ ಬೇಡುತ್ತದೆ, ಅದರಿಂದಾಗಿ ಭರವಸೆ ನೀಡಲಾಗಿದ್ದನ್ನು ಸಿದ್ಧಿಸಿಕೊಳ್ಳುವಂತಾಗುತ್ತದೆ.

ನಮ್ಮಲ್ಲಿ ಎರಡೂ ಸಂಕಲ್ಪಗಳ ಹಾಗೂ ಎರಡೂ ಪ್ರವಾಹಗಳ ಏಕತೆ ಸಂಭವಿಸಬೇಕು, ಅದರಿಂದಾಗಿ ಅವುಗಳ ಸಂಪರ್ಕದಿಂದ ಪ್ರಕಾಶ ನೀಡುವ ಕಿಡಿ ಜಿಗಿದು ಬರುವಂತಾಗುವುದು.

ಮತ್ತು ಇದನ್ನು ಕೈಕೊಳ್ಳಲೇಬೇಕಾದುದರಿಂದ ಇದನ್ನು ಕೈಕೊಂಡು ಪೂರ್ತಿಗೊಳಿಸಲಾಗುವುದು.

**ಜೂನ 14, 1914**

*

### ಅತಿಮಾನಸ ಭವ್ಯತೆಯ ಸುತ್ತ ಅಗ್ನಿಯ ಬೀಜಾಣು (nucleus)

ಸೂರ್ಯನದಿರುವ ಹಾಗೆ ನಿನ್ನ ವೈಭವ ಪೃಥ್ವಿಯ ಮೇಲೆ ಅವರೋಹಣ



ಮಾಡುತ್ತದೆ. ಸಾಕಷ್ಟು ಪರಿಶುದ್ಧವಾದ, ನಮ್ಯವಾದ ಮತ್ತು ಕೇಂದ್ರದಲ್ಲಿರುವ ಅಗ್ನಿಯ ಬೀಜಾಣುವಿನ ಭವ್ಯತೆಯನ್ನು ಪ್ರಕಟಿಸಲು ಸಾಕಷ್ಟು ಸ್ವೀಕಾರ ಯೋಗ್ಯತೆ ಇರುವ ಆ ಎಲ್ಲ ಅಂಶಗಳು ತಮ್ಮನ್ನು ಗುಂಪಾಗಿ ಒಟ್ಟುಗೂಡಿಸಿಕೊಳ್ಳುತ್ತಿವೆ. ಈ ಗುಂಪುಗೂಡುವಿಕೆ ಸ್ವೇಚ್ಛೆಯದಲ್ಲ ಮತ್ತು ಒಂದು ಅಥವಾ ಇನ್ನೊಂದು ಅಂಶದ ಸಂಕಲ್ಪದ ಇಲ್ಲವೆ ಅಭೀಪ್ಸೆಯ ಮೇಲೆ ಅವಲಂಬಿಸಿರುವುದಿಲ್ಲ, ಅದೇನಿರುವುದೋ ಅದರ ಮೇಲೆ ಅವಲಂಬಿಸಿರುತ್ತದೆ, ಅದು ಯಾವುದೇ ವ್ಯಕ್ತಿಗತ ನಿರ್ಧಾರದ ಮೇಲೆ ಅವಲಂಬಿಸಿರುವುದಿಲ್ಲ. ನಿನ್ನ ಭವ್ಯತೆ ತೇಜಸ್ಸನ್ನು ಹೊರಸೂಸಲು ಬಯಸುತ್ತದೆ; ಪ್ರಕಟವಾಗಲು ಕ್ಷಮತೆಯುಳ್ಳದ್ದನ್ನು ಅದು ಪ್ರಕಟಿಸುತ್ತದೆ, ಪ್ರಕಟಿಸಬೇಕಾಗಿರುವ ದೈವೀ ಕೇಂದ್ರವನ್ನು ಸಾಧ್ಯವಿದ್ದಷ್ಟು ಪರಿಪೂರ್ಣವಾಗಿ ಪುನರ್ರಚಿಸಲು ಈ ಅಂಶಗಳು ಒಟ್ಟಿಗೆ ಗುಂಪುಗೂಡುತ್ತವೆ. ಈ ಚಿಂತನದ ಆಶ್ಚರ್ಯದಲ್ಲಿ ಎಲ್ಲ ಜೀವಕೋಶಗಳು ಪರಮಾನಂದ ಪಡೆಯುತ್ತವೆ ಮತ್ತು ಇರುವ ಆ 'ತತ್'ನ್ನು ನೋಡಿ ಸಮಗ್ರ ದ್ರವ್ಯ (ದೇಹ) ದಿವ್ಯಾನಂದದಲ್ಲಿ ಸಾಗಿ ಹೋಗುತ್ತದೆ. ಈಗ ಈ ದ್ರವ್ಯವನ್ನು ನಿನ್ನಿಂದ ಭಿನ್ನವಾಗಿ ಹೇಗೆ ನೋಡಲಾದೀತು? ಅದು ನೀನೇ–ಸಂಪೂರ್ಣವಾಗಿ, ಇಡಿಯಾಗಿ, ಗಾಢವಾಗಿ–ಪರಿಪೂರ್ಣವಾಗಿ ಗುರುತಿಸಿಕೊಂಡ ನೀನು.

**ಜೂನ 16, 1914**

*

### ಗತಕಾಲದ ಪರಿಪೂರ್ಣತೆಗಳು ಹಾಗೂ ಹೊಸ ಅಪಾರ ಸಾಮರ್ಥ್ಯ

ಏನಿರಬೇಕು ಎಂಬುದಕ್ಕೆ ಇಲ್ಲಿಯವರೆಗೆ ಕಲ್ಪಿಸಿಕೊಂಡದ್ದೆಲ್ಲವನ್ನು ಸಿದ್ಧಿಸಿಕೊಂಡದ್ದೆಲ್ಲವನ್ನು ಹೋಲಿಸಿದಾಗ ಅದೆಲ್ಲ ನೀರಸವಾಗಿದೆ, ಮಧ್ಯಮ ಹಂತದ ದರ್ಜೆಯದಾಗಿದೆ, ಸಾಕಷ್ಟಾಗಿಲ್ಲ ಎಂದು ಕಂಡುಬರುತ್ತದೆ. ಗತಕಾಲದ ಪರಿಪೂರ್ಣತೆಗಳಿಗೆ ಇನ್ನು ಮುಂದೆ ಯಾವ ಶಕ್ತಿಯೂ ಇರುವುದಿಲ್ಲ. ಹೊಸ ಸಾಮರ್ಥ್ಯಗಳನ್ನು ಪರಿವರ್ತಿಸಲು ಹಾಗೂ ಅವುಗಳನ್ನು ನಿನ್ನ ಸಂಕಲ್ಪಕ್ಕೆ ಅಧೀನಪಡಿಸಲು ಅಪಾರ ಸಾಮರ್ಥ್ಯದ ಆವಶ್ಯಕತೆ ಇದೆ. "ಬೇಡಿಕೋ, ಮತ್ತು ಇದಾಗುತ್ತದೆ" ಎಂದು ನೀನು ಸತತ ಉತ್ತರ ಕೊಡುತ್ತಿರುವಿ. ಓ ದೈವೀ ಪ್ರಭು, ಈಗ ಈ ಸತ್ತೆಯಲ್ಲಿ, ಬದಲಾಗದ ಪ್ರಶಾಂತತೆಯಲ್ಲಿರುವ, ತಡೆಗೊಳಗಾಗದ, ಗಾಢವಾದ, ಭಾವೋದ್ರೇಕದ ಸತತ ಇರುವ ಅಭೀಪ್ಸೆಯನ್ನು ಸೃಷ್ಟಿಸಬೇಕು. ನಿಶ್ಚಲ ನೀರವತೆ, ಹಾಗೂ ಶಾಂತಿ ಅಲ್ಲಿವೆ: ಅಲ್ಲಿ ಗಾಢತೆ ಪಟ್ಟುಹಿಡಿದು ಉಳಿದುಕೊಳ್ಳಬೇಕಾಗಿದೆ.

ಓಹ್, ನೀನು ಸಂಕಲ್ಪಿಸಿದ್ದೆಲ್ಲ ನೆರವೇರಿಕೆ ಕಂಡುಕೊಳ್ಳುವ ಮಾರ್ಗದಲ್ಲಿದೆ ಎನ್ನುವ ಹಾಗೆ ಸಂತೋಷದಿಂದ ಹೇಳುವ "ದೇವನಿಗೆ ಜಯವಾಗಲಿ" ಎಂದು ನಿನ್ನ ಹೃದಯ ಘೋಷಿಸುತ್ತಿದೆ... ಈ ಎಲ್ಲ ಅಂಶಗಳನ್ನು ನಾಶಮಾಡು, ಅವುಗಳ ಬೂದಿಯಿಂದ ಹೊಸ ಪ್ರಕಟಣೆಗೆ ಹೊಂದಿಕೊಳ್ಳುವ ಹೊಸ ಅಂಶಗಳು ಹೊರಹೊಮ್ಮಿ ಬರುವಂತಾಗಲಿ.

ಓಹ್, ನಿನ್ನ ಪ್ರಕಾಶಮಯ ದೈವೀ ಶಾಂತಿಯ ಭವ್ಯತೆ!
ಓಹ್, ನಿನ್ನ ಸಾರ್ವಭೌಮ ದೈವೀ ಪ್ರೇಮದ ಸರ್ವಸಾಮರ್ಥ್ಯ!
ನಾವು ಕಲ್ಪನೆ ಮಾಡಿಕೊಳ್ಳುವುದೆಲ್ಲದರಾಚೆಗೆ ನಮಗೆ ಬರಲಿರುವುದನ್ನು
ಕುರಿತು ಉಂಟಾಗುವ ಭಾವನೆ. ನಮಗೆ ದೈವೀ ಯೋಚನೆಯನ್ನು,
ದೈವೀ ಶಬ್ದವನ್ನು ಮತ್ತು ದೈವೀ ಸಾಮರ್ಥ್ಯವನ್ನು ಕೊಡು.
ಓ ಹೊಸದಾಗಿ ಜನ್ಮತಾಳಿದ ದೈವೀ ಅಪರಿಚಿತವಾದದ್ದೆ, ಜಗತ್ತಿನ
ಅಖಾಡದಲ್ಲಿ ಪ್ರವೇಶಿಸು.

**ಜೂನ 17, 1914**

*

## ನಿನ್ನ ದೈವೀ ಶಕ್ತಿ ಪ್ರಕಟಣೆಗೆ ಸಿದ್ಧವಾಗಿ ಇಲ್ಲಿದೆ

ಗ್ರಹಿಕೆಯಲ್ಲಿ ಅದೆಂತಹ ವೈಶಾಲ್ಯವಿದೆ! ವಿನಮ್ರ, ವಿನೀತ, ಶರಣಾಗತ, ಆರಾಧನೆ ಕೈಕೊಳ್ಳುತ್ತಿರುವ, ಸ್ಥಿರ ಮತ್ತು ಮುಗುಳ್ನಗುತ್ತಿರುವ, ಎಲ್ಲ ಸತ್ತೆಗಳೊಡನೆ ಏಕವಾಗಿರುವ ಭಾವನೆ ತಂದುಕೊಳ್ಳುತ್ತಿರುವ, ಮೌಲ್ಯದಲ್ಲಿ ಭಿನ್ನತೆ ಕಂಡುಕೊಳ್ಳಲು ಶಕ್ತವಾಗದಿರುವ, ಎಲ್ಲ ವಸ್ತು–ವಿಷಯಗಳೊಡನೆ ಪರಿಪೂರ್ಣ ಐಕಮತ್ಯ (solidarity) ವಿರುವ ಇಡೀ ವ್ಯಕ್ತಿಗತ ಸತ್ತೆ ನಿನ್ನೆದುರಿಗೆ ಅವರೆಲ್ಲರೊಂದಿಗೆ ಮೊಣಕಾಲೂರುತ್ತದೆ; ಮತ್ತು ಅದೇ ಕಾಲಕ್ಕೆ ಇಲ್ಲಿರುವ ನಿನ್ನ ದೈವೀ ಶಕ್ತಿಯ ಪ್ರಬಲ ಸರ್ವ ಸಾಮರ್ಥ್ಯ ಪ್ರಕಟಣೆಗಾಗಿ ಸಿದ್ಧವಾಗಿ ಕಾದುಕೊಂಡಿದೆ, ಅನುಕೂಲಕರ ಗಳಿಗೆಯನ್ನು ಹಾಗೂ ಅವಕಾಶವನ್ನು ನಿರ್ಮಾಣ ಮಾಡುತ್ತಿದೆ: ಅದು ನಿನ್ನ ವಿಜಯಶಾಲಿಯಾದ, ಹೋಲಿಸಲಾಗದ ವೈಭವ.

ಆ ದೈವೀಶಕ್ತಿ ಇಲ್ಲಿದೆ. ಓ ಕಾದುಕೊಂಡಿರುವ ಮತ್ತು ಭರವಸೆ ತಾಳಿರುವ ನೀನು ಸಂತೋಷಪಡು: ಹೊಸ ಪ್ರಕಟಣೆ ನಿಶ್ಚಿತವಾದದ್ದು, ಹೊಸ ಪ್ರಕಟಣೆ ಕೈಗೆಟಕುವಂತಿದೆ.

ಆ ದೈವೀಶಕ್ತಿ ಇಲ್ಲಿದೆ.



ಎಲ್ಲ ಪ್ರಕೃತಿ ಪರಮಾನಂದದಲ್ಲಿದೆ, ಮತ್ತು ಸಂತೋಷದಿಂದ ಹಾಡುತ್ತದೆ, ಎಲ್ಲ ಪ್ರಕೃತಿ ಹಬ್ಬವನ್ನು ಆಚರಿಸುತ್ತಿದೆ: ದೈವೀಶಕ್ತಿ ಇಲ್ಲಿದೆ.

ಮೇಲಕ್ಕೇಳಿರಿ ಮತ್ತು ಜೀವಿಸಿರಿ; ಮೇಲಕ್ಕೆದ್ದು ಜ್ಞಾನೋದಯ ಪಡೆಯಿರಿ. ಮೇಲಕ್ಕೆದ್ದು ಎಲ್ಲದರ ರೂಪಪರಿವರ್ತನೆಗಾಗಿ ಸಮರ ನಡೆಸಿರಿ:

ದೈವೀಶಕ್ತಿ ಇಲ್ಲಿದೆ.

**ಜುಲೈ 6, 1914**

*

## ಸರ್ವಸಾಮರ್ಥ್ಯವುಳ್ಳ ದೈವೀಶಕ್ತಿಯ ಶಾಂತಿ ಇಲ್ಲಿದೆ

ದೈವೀ ಶಾಂತಿ, ಪೃಥ್ವಿಯ ಮೇಲೆ ಎಲ್ಲೆಡೆಯಲ್ಲಿ ಶಾಂತಿ.

ಅಚೇತನದಲ್ಲಿ ನಿದ್ರೆ ಮಾಡುತ್ತಿರುವಾಗಿನ ಶಾಂತಿಯಲ್ಲ, ಸ್ವ–ವಿಸ್ಮೃತಿಯ ಅಜ್ಞಾನದಿಂದ ಮತ್ತು ಕಪ್ಪಾದ, ಭಾರವಾದ ಉದಾಸೀನತೆಯಿಂದ ಬರುವ ಶಾಂತಿಯಲ್ಲ, ಆದರೆ ಸರ್ವಸಾಮರ್ಥ್ಯವುಳ್ಳ ಶಕ್ತಿಯ ಶಾಂತಿ, ಸಮಗ್ರವಾಗಿ ಜಾಗ್ರತ–ಗೊಳ್ಳುವಿಕೆಯಿಂದ ಬರುವ ಶಾಂತಿ, ಪರಿಪೂರ್ಣ ಸಂಸರ್ಗದ ಶಾಂತಿ, ಎಲ್ಲ ಸೀಮಿತತೆಗಳು ಹಾಗೂ ಎಲ್ಲ ಅಂಧಕಾರ ಮಾಯವಾಗುವುದರಿಂದ ಬರುವ ಶಾಂತಿ ಇಲ್ಲಿದೆ.

ಮನುಷ್ಯ ಪೀಡೆಗೊಳಗಾಗುವುದೇಕೆ, ವೇದನೆಪಡುವುದೇಕೆ, ಈ ಕಹಿ ಹೋರಾಟ ಮತ್ತು ವೇದನಾಪೂರ್ಣ ಬಂಡಾಯವೇಕೆ, ವ್ಯರ್ಥ ಹಿಂಸೆ ಏಕೆ, ಈ ಅಚೇತನ ಹಾಗೂ ಭಾರವಾದ ನಿದ್ರೆ ಏಕೆ? ಭಯಪಡದೆ ಎಚ್ಚತ್ತುಗೊಳ್ಳಿರಿ, ನಿಮ್ಮ ಸಂಘರ್ಷಗಳನ್ನು ಶಮನ ಮಾಡಿರಿ, ನಿಮ್ಮ ವಾದ ವಿವಾದಗಳು ಮೌನದಲ್ಲಿರು–ವಂತೆ ಮಾಡಿರಿ, ನಿಮ್ಮ ಕಣ್ಣುಗಳನ್ನು ಹಾಗೂ ನಿಮ್ಮ ಹೃದಯಗಳನ್ನು ತೆರೆದಿರಿಸಿರಿ, ದೈವೀಶಕ್ತಿ ಅಲ್ಲಿದೆ, ಅದು ಅಲ್ಲಿ ದೈವಿಕವಾಗಿ ಪರಿಶುದ್ಧಗೊಂಡು ಇದೆ, ಪ್ರಕಾಶ–ಮಯವಾಗಿದೆ, ಸಾಮರ್ಥ್ಯಪೂರ್ಣವಾಗಿದೆ, ಅದು ಅಲ್ಲಿ ಮೇರೆರಹಿತ ಪ್ರೇಮದ ರೂಪದಲ್ಲಿದೆ, ಸಾರ್ವಭೌಮ ಸಾಮರ್ಥ್ಯವಾಗಿದೆ, ವಾದ ವಿವಾದಗಳಿಗೆ ಒಳಪಡದ ನೈಜತೆ, ಮಿಶ್ರಣಕ್ಕೊಳಗಾಗದ ಶಾಂತಿ, ತಡೆಗೊಳಗಾಗದ ದಿವ್ಯಾನಂದ, ಪರಮೋಚ್ಚ ದೈವಾನುಗ್ರಹ ಇದೆಲ್ಲ ಆಗಿದೆ, ಅದು ಸ್ವ–ಅಸ್ತಿತ್ವದಲ್ಲಿರುವಂತಹದು, ಅನಂತ ಜ್ಞಾನದ ಕೊನೆರಹಿತ ದಿವ್ಯಾನಂದ... ಅದು ಇನ್ನೂ ಹೆಚ್ಚಿನದೇನೋ ಆಗಿದೆ, ಅದನ್ನು ಕುರಿತು ಹೇಳಲಾಗದು, ಆದರೆ ಅದು ಈಗಾಗಲೆ ಕಾರ್ಯನಿರತವಾಗಿದೆ, ಆ ಕಾರ್ಯ

ಯೋಚನೆಯಾಚೆಗಿರುವ ಉಚ್ಚತರ ಲೋಕಗಳಲ್ಲಿ ಸಾರ್ವಭೌಮ ರೂಪ–ಪರಿವರ್ತನೆಯ ಸಾಮರ್ಥ್ಯದಿಂದ ಮತ್ತು ಭೌತದ್ರವ್ಯದ ಅಚೇತನದ ಆಳಗಳಲ್ಲಿ ಪ್ರತಿರೋಧಿಸಲಾಗದ ಚಿಕಿತ್ಸಕ ಎಂದು ಕೈಕೊಳ್ಳುವುದಾಗಿದೆ.

ಅರಿತುಕೊಳ್ಳಲು, ಆಗದೆ ಇರುವ ಓ ನೀನು ಕೇಳಿಸಿಕೋ
ಕಂಡುಕೊಳ್ಳಲಾರದ ನೀನು ನೋಡು, ಚಿಂತನ ಮಾಡು ಹಾಗೂ
ಜೀವಿಸು: ದೈವೀಶಕ್ತಿ ಇಲ್ಲಿದೆ.

**ಜುಲೈ 7, 1914**

*

**ರೂಪ ಪರಿವರ್ತನೆಯ ವಿಜಯ**

ಇಡೀ ಭೌತಿಕ ಸತ್ತೆ ಕರಗಿ ಹೋಗುವುದನ್ನು ಮತ್ತು ಯಾವ ಮಿತಿಗಳೂ ಇಲ್ಲದ ಆರಾಧನೆಯಲ್ಲಿ ಪುನರ್ರಚನೆಗೊಳ್ಳುವುದನ್ನು ಇಷ್ಟಪಡುತ್ತದೆ. ಪರಮೋಚ್ಚ ಸಾಮರ್ಥ್ಯ ಹಾಗೂ ಪರಮೋಚ್ಚ ದಿವ್ಯಾನಂದ ಇವುಗಳ ಸಂದೇಶವಾಹಕನಾಗಿ ಓ ದೈವೀ ಪ್ರಭು, ನೀನು ಭೌದ್ರವ್ಯವನ್ನು ಸ್ಪರ್ಶಿಸಲು ಬರುವಿ ಮತ್ತು ಇಡಿಯಾದ ಸಿದ್ಧಿ ಏನಾಗಿರಬಲ್ಲದು ಎಂಬುದರ ಕಲ್ಪನೆಯನ್ನು ಸೃಷ್ಟಿಮಾಡುವಿ. ಸತ್ತೆ ಅದನ್ನು ನಂಬಿಕೊಂಡಾಗ ಅದನ್ನು ನಿರ್ಧಾರಕವಾಗಿ ಅದಕ್ಕೆ ನಿನ್ನ ಘನತೆವೆತ್ತ ಆಜ್ಞೆಯೊಂದಿಗೆ ವಹಿಸಿಕೊಡಲಾಯಿತು. ಅದು ಕೇವಲ ಒಂದು ವಾಗ್ದಾನವೆಂದು ಮತ್ತು ಅದು ಏನಾಗಬಹುದು ಎಂಬುದರ ಒಂದು ಸಂಕೇತವೆಂದು ಅದು ತಿಳಿದುಕೊಳ್ಳುವಂತೆ ಮಾಡಿ ನೀನು ಹಿಂದೆ ಸರಿದುಕೊಳ್ಳುವಿ. ಅಯ್ಯೋ, ಭೌತದ್ರವ್ಯದಲ್ಲಿ ಅದೆಂತಹ ಅಪರಿಪೂರ್ಣತೆ ಇದೆ, ಅದರಿಂದಾಗಿ ನಿನ್ನನ್ನು ನಾವು ಹಿಡಿದಿಟ್ಟುಕೊಳ್ಳಲಾರೆವು! ಓ ದೈವೀ ಪ್ರಭು, ನಿನ್ನ ಸರ್ವ ಸಾಮರ್ಥ್ಯವನ್ನು ಉಪಯೋಗಿಸು, ನಿನ್ನ ಶಾಶ್ವತ ದೈವೀ ಸಾನ್ನಿಧ್ಯವಿರುವುದರ ಪವಾಡ ಕಾರ್ಯಗತವಾಗುವಂತೆ ಮಾಡು. ... ಇಷ್ಟೊಂದು ಪರಿಗಣನೆ ಮಾಡುವುದೇಕೆ? ನಾವು ವಿಜಯಿಗಳಾಗಬೇಕು ಇಲ್ಲವೆ ನಾಶವಾಗಿ ಹೋಗಬೇಕು.

ವಿಜಯ, ವಿಜಯ, ವಿಜಯ! ನಾವು ರೂಪಪರಿವರ್ತನೆಯ ವಿಜಯವನ್ನು ಬಯಸುತ್ತೇವೆ.

**ಜುಲೈ 11, 1914**

*



**ಶ್ರೀಮಾತೆಯವರು ಮತ್ತು ನಾನು ಒಬ್ಬರೇ ಆಗಿದ್ದೇವೆ, ಆದರೆ ಎರಡು ಭಿನ್ನ ದೇಹಗಳಲ್ಲಿದ್ದೇವೆ; ಎರಡೂ ದೇಹಗಳು, ಯಾವಾಗಲೂ, ಒಂದೇ ಕಾರ್ಯವನ್ನು ಕೈಕೊಳ್ಳಬೇಕಾಗಿಲ್ಲ. ತದ್ವಿರುದ್ಧವಾಗಿ, ನಾವಿಬ್ಬರೂ ಒಬ್ಬರೇ ಆಗಿರುವುದರಿಂದ ಒಬ್ಬರು ಸಹಿ ಹಾಕುವುದು ಸಾಕು, ಅದು ಇನ್ನೊಬ್ಬರು ಕೆಳಗಿಳಿದು ಹೋಗಿ ಪ್ರಣಾಮವನ್ನು ಸ್ವೀಕರಿಸುವುದಕ್ಕೆ ಮತ್ತು ಧ್ಯಾನವನ್ನು ಮಾಡಿಸುವುದಕ್ಕೆ ಅವಕಾಶ ಮಾಡಿಕೊಡುವ ರೀತಿಯದಾಗಿರುತ್ತದೆ.**

**CWSA, 32/82 – ಶ್ರೀ ಅರವಿಂದರು**

**ನಮ್ಮ ಹೃದಯಗಳನ್ನು ನಿನ್ನ ದೈವೀ ಪ್ರೇಮದ ದಿವ್ಯಾನಂದದಿಂದ ತುಂಬಿಬಿಡು.**
**ನಿನ್ನ ದೈವೀಪ್ರಕಾಶದ ಭವ್ಯತೆಯ ಪ್ರವಾಹ ನಮ್ಮ ಮನಸ್ಸುಗಳ ಮೇಲೆ ಪ್ರವಹಿಸಲಿ.**
**ನಿನ್ನ ದೈವೀ ವಿಜಯವನ್ನು ನಾವು ಕಾರ್ಯರೂಪಕ್ಕೆ ತರುವಂತೆ ಅನುಗ್ರಹಿಸು.**

**CWM 1/177 – ಶ್ರೀಮಾತೆ**

*

## ಪೃಥ್ವಿಗಾಗಿ ಪರಾಮಾತೆಯ ಯೋಗ



*ಪ್ರಶ್ನೆ : ನಿಮ್ಮ ಶ್ರೀಮಾತಾ (The Mother) ಪುಸ್ತಕದಲ್ಲಿ ನೀವು ನಮ್ಮ ಶ್ರೀಮಾತೆಯವರನ್ನು ಕುರಿತಾಗಿಯೇ ಬರೆದಿರುವಿರಲ್ಲವೆ?*

ಶ್ರೀ ಅ : ಹೌದು.

ಪ್ರಶ್ನೆ : *ಪರಾಮಾತೆಯ ವಿಶ್ವಾತೀತ ಮತ್ತು ವಿಶ್ವಂಭರ ಎಂದು ಎರಡು ಬಗೆಯಲ್ಲಿ ಅಸ್ತಿತ್ವದಲ್ಲಿರುವ ಸಾಮರ್ಥ್ಯವನ್ನು ಧಾರಣ ಮಾಡಿಕೊಂಡವರು ಶ್ರೀಮಾತೆಯವ–ರಲ್ಲವೆ?*

ಶ್ರೀ ಅ : ಹೌದು.

ಪ್ರಶ್ನೆ : *ಅಂಧಕಾರ ಮತ್ತು ಮಿಥ್ಯೆ, ದೋಷ ಹಾಗೂ ಮೃತ್ಯು ಇವುಗಳಿರುವ ಇಲ್ಲಿ ಪರಾಮಾತೆ ಶ್ರೀಮಾತೆಯವರ ರೂಪದಲ್ಲಿ ಅವರೋಹಣ ಮಾಡಿದ್ದು ನಮಗಾಗಿರುವ ಆಳವಾದ ಹಾಗೂ ಶ್ರೇಷ್ಠವಾದ ಪ್ರೇಮದಿಂದಾಗಿ ಅಲ್ಲವೆ?*

ಶ್ರೀ ಅ : ಹೌದು.

*

**ನಿನ್ನನ್ನು ಕಂಡುಕೊಳ್ಳುವುದು ಅನಂತಪಟ್ಟು ಎತ್ತರವಿರುವ ಏಣಿಯ ಮೇಲೆ ಮೊದಲ ಹೆಜ್ಜೆ ಇರಿಸಿದಂತೆ**

ಸತ್ತೆಯ ಎಲ್ಲ ಸ್ಥಿತಿಗಳಲ್ಲಿ, ಚಟುವಟಿಕೆಗಳ ಎಲ್ಲ ರೀತಿಗಳಲ್ಲಿ, ಎಲ್ಲ ವಸ್ತು–ವಿಷಯಗಳಲ್ಲಿ, ಎಲ್ಲ ಲೋಕಗಳಲ್ಲಿ ಮನುಷ್ಯ ನಿನ್ನನ್ನು ಭೇಟಿ ಮಾಡಬಹುದು ಮತ್ತು ನಿನ್ನೊಡನೆ ಏಕತೆ ಪಡೆಯಬಹುದು, ಏಕೆಂದರೆ ನೀನು ಎಲ್ಲೆಡೆ ಇರುವಿ ಮತ್ತು ಯಾವಾಗಲೂ ಉಪಸ್ಥಿತವಿರುವಿ. ನಿನ್ನನ್ನು ತನ್ನ ಸತ್ತೆಯ ಒಂದು ಚಟುವಟಿಕೆಯಲ್ಲಿ ಇಲ್ಲವೆ ವಿಶ್ವದ ಒಂದು ಲೋಕದಲ್ಲಿ ಭೇಟಿಮಾಡಿದವನು ಹೇಳುತ್ತಾನೆ: "ನಾನು ಭಗವಂತನನ್ನು ಭೇಟಿ ಮಾಡಿದ್ದೇನೆ," ಮತ್ತು ಅವನು ಅದಕ್ಕಿಂತ ಹೆಚ್ಚಿನದೇನನ್ನೂ ಅರಸುವುದಿಲ್ಲ, ಸಾಧ್ಯತೆಗಳ ಶಿಖರವನ್ನು ತಲುಪಿದ್ದೇನೆ ಎಂದು ಮಾನವ ಯೋಚಿಸುತ್ತಾನೆ. ಅದೊಂದು ತಪ್ಪು. ಎಲ್ಲ ಸ್ಥಿತಿಗಳಲ್ಲಿ, ಎಲ್ಲ ರೀತಿಗಳಲ್ಲಿ, ಎಲ್ಲ ವಸ್ತು–ವಿಷಯಗಳಲ್ಲಿ, ಎಲ್ಲ ಲೋಕಗಳಲ್ಲಿ, ಎಲ್ಲ ಅಂಶಗಳಲ್ಲಿ ನಾವು ನಿನ್ನನ್ನು ಶೋಧಿಸಬೇಕು ಮತ್ತು ನಿನ್ನೊಡನೆ ಏಕತೆ ಪಡೆಯಬೇಕು ಮತ್ತು ಒಂದು ಅಂಶವನ್ನು ಬದಿಗಿರಿಸಿದರೆ ಅದೆಷ್ಟೇ ಚಿಕ್ಕದಾಗಿರಬಹುದು, ಸಂಸರ್ಗ ಪರಿಪೂರ್ಣವಾಗುವುದಿಲ್ಲ, ಸಿದ್ಧಿಯನ್ನು ಪಡೆಯಲಾಗುವುದಿಲ್ಲ.



ಮತ್ತು ಆ ಕಾರಣದಿಂದಾಗಿ ನಿನ್ನನ್ನು ಕಂಡುಕೊಂಡದ್ದು ಅನಂತಪಟ್ಟು ಎತ್ತರವಿರುವ ಏಣಿಯ ಮೇಲೆ ಮೊದಲ ಹೆಜ್ಜೆ ಇರಿಸಿದ ಹಾಗೆ.

**ಜುಲೈ 12, 1914**

*

**ನೀನು ನನ್ನ ಎಲ್ಲ ಚಿಂತೆಗಳನ್ನು ಎತ್ತಿಕೊಂಡು ಹೋಗಿರುವಿ**

ಐಹಿಕ ಸಿದ್ಧಿಗಳು ನಮ್ಮ ದೃಷ್ಟಿಯಲ್ಲಿ ಹೆಚ್ಚಿನ ಮಹತ್ವ ಪಡೆಯುತ್ತವೆ, ಏಕೆಂದರೆ ನಮ್ಮನ್ನು ಮಾನವರನ್ನಾಗಿ ಮಾಡುವ ಈ ಬಾಹ್ಯ ಸತ್ತೆಗೆ, ಅದರ ಸೀಮಿತ ರೂಪಕ್ಕೆ ಆ ಸಿದ್ಧಿಗಳು ಪ್ರಮಾಣಬದ್ಧವಾಗಿರುತ್ತವೆ. ಆದರೆ ದೈವೀ ಪ್ರಭು ನಿನ್ನ ಸಮ್ಮುಖದಲ್ಲಿ ಈ ಐಹಿಕ ಸಿದ್ಧಿಯ ಮಹತ್ವವೇನಿದೆ? ಎಷ್ಟೇ ಪರಿಪೂರ್ಣ, ಸಂಪೂರ್ಣ ಹಾಗೂ ದೈವಿಕವಾಗಿರಬಹುದಾದರೂ ಅದು ನಿನ್ನ ಶಾಶ್ವತತೆಯಲ್ಲಿ ವಿವೇಚಿಸಲಾಗದ ಕ್ಷಣ; ಮತ್ತು ಅದರಿಂದ ದೊರಕಿಸಿದ ಪರಿಣಾಮಗಳು, ಅವುಗಳೆಷ್ಟೇ ಸಾಮರ್ಥ್ಯ–ಪೂರ್ಣವಾದವುಗಳು ಮತ್ತು ಅದ್ಭುತವಾದವುಗಳಾಗಿರಬಹುದು, ನಿನ್ನೆಡೆಗೆ ಸಾಗುವ ಮಾರ್ಗದಲ್ಲಿ ಅವು ಅತಿ ಸೂಕ್ಷ್ಮ ಅಣುವಿದ್ದ ಹಾಗೆ. ಇದನ್ನು ನಿನ್ನ ಕಾರ್ಯಕರ್ತರು ಎಂದಿಗೂ ಮರೆಯಬಾರದು, ಹಾಗಿಲ್ಲದಿದ್ದರೆ ಅವರು ನಿನಗೆ ಸೇವೆ ಸಲ್ಲಿಸಲು ಯೋಗ್ಯರಾಗುವುದಿಲ್ಲ.

ಓ ನನ್ನ ಮಧುರ ಸ್ವಾಮಿ, ಯಾವುದಕ್ಕಾದರೂ ಮನುಷ್ಯ ಜವಾಬ್ದಾರ–ನಾಗಿರುವನೆಂದು ಯೋಚಿಸುವುದು, ಮತ್ತು ನಿನ್ನ ಪರಮೋಚ್ಚ ದೈವೀ ಸಂಕಲ್ಪ–ವನ್ನು ವ್ಯಕ್ತಿಗತಗೊಳಿಸಬೇಕೆಂದು ಬಯಸುವುದು ಎಷ್ಟೊಂದು ಬಾಲಿಶವಾದದ್ದು! ನಿನ್ನ ಹೃದಯದೊಡನೆ ಏಕತೆ ಪಡೆದು ಅಲ್ಲಿ ಶಾಶ್ವತವಾಗಿ ಜೀವಿಸುವುದು ಸಾಕಾಗುವುದಿಲ್ಲವೆ? ಆಗ ದೈವೀ ಪ್ರಭು, ನೀನು ಎಲ್ಲ ಜವಾಬ್ದಾರಿಗಳನ್ನು ವಹಿಸುವಿ ಮತ್ತು ನಿನ್ನ ಸಂಕಲ್ಪ, ನಾವದನ್ನು ಅರಿತುಕೊಳ್ಳುವ ಆವಶ್ಯಕತೆಯನ್ನೂ ಉಂಟು–ಮಾಡದೆ, ಕಾರ್ಯಕೈಕೊಳ್ಳುವುದು... ಎಲ್ಲ ಬಾಹ್ಯ ಪರಿಸ್ಥಿತಿಗಳಿಂದ ಮುಕ್ತವಾದ, ಎಲ್ಲ ಆಸಕ್ತಿಗಳಿಂದ ಮುಕ್ತವಾದ ಅರ್ಥಮಾಡಿಕೊಳ್ಳುವಿಕೆ–ಅದೆಷ್ಟೇ ಉಚ್ಚತರ–ವಾಗಿದ್ದರೂ ಮುಕ್ತವಾದ ಸಿದ್ಧಿ ಮಾತ್ರ ನಿಜವಾದ ಹಾಗೂ ಮೌಲಿಕವಾದ ಸಿದ್ಧಿ–ಯಾಗಿರುತ್ತದೆ. ಇಂತಹ ಸಿದ್ಧಿಯನ್ನು ನಿನ್ನೊಡನೆ ಸಮಗ್ರವಾಗಿ, ಹತ್ತಿರದಿಂದ ಮತ್ತು ನಿರ್ಧಾರಕವಾಗಿ ಏಕತೆ ಪಡೆಯುವುದರಿಂದ ಮಾತ್ರ ಪಡೆಯಬಹುದಾಗಿದೆ.

ಅಶಾಶ್ವತ ಜಗತ್ತಿನಲ್ಲಿ ಕ್ಷಣಿಕ ಅಸ್ತಿತ್ವದಲ್ಲಿರುವ ನಿನ್ನ ನಶ್ವರ, ತಾತ್ಕಾಲಿಕ ಪ್ರಕಟಣೆಯನ್ನು ಕುರಿತು ಕಾಳಜಿ ಮಾಡಬೇಕಾದುದರ ಬಗ್ಗೆ ಹೇಳುವುದಾದರೆ, ಅದು ಒಳ್ಳೆಯದು ಎಂದು ನೀನು ಯೋಚಿಸಿದರೆ ನೀನು ಅದಕ್ಕೆ ಹೊಣೆಗಾರನಾಗಿರಬೇಕು ಮತ್ತು ಅದು ಅಸ್ತಿತ್ವದಲ್ಲಿರಲು ಅವಶ್ಯವಾದದ್ದನ್ನು ಕೈಕೊಳ್ಳಬೇಕು. ಓ ನನ್ನ ಮಧುರ ಸ್ವಾಮಿ, ಸಾರ್ವಭೌಮ ಪ್ರಭು, ನೀನು ನನ್ನಿಂದ ಎಲ್ಲ ಚಿಂತೆಗಳನ್ನು ತೆಗೆದುಕೊಂಡು ಹೋಗಿರುವಿ ಮತ್ತು ನಿನ್ನ ದೈವೀ ಸಂಸರ್ಗದ ಪರಮೋಚ್ಚ ದಿವ್ಯಾನಂದವನ್ನು ಮಾತ್ರ ನನಗಾಗಿ ಉಳಿಸಿರುವಿ.

**ಜುಲೈ 17, 1914**

*

## ಅನಂತಪಟ್ಟು ಎತ್ತರವಿರುವ ದೈವೀ ಪ್ರಕಾಶದ ಕಂಬ

ಅಲ್ಲಿ ಇನ್ನು ಮುಂದೆ ಯಾವ ದೇಹವೂ ಇರಲಿಲ್ಲ, ಸಂವೇದನೆ ಇರಲಿಲ್ಲ; ಕೇವಲ ಒಂದು ಬೆಳಕಿನ ಕಂಬವಿತ್ತು; ಸಾಮಾನ್ಯವಾಗಿ ದೇಹದ ತಳ ಇರುವಲ್ಲಿಂದ, ಶಿರ ಇರುವಲ್ಲಿಯವರೆಗೆ ಮೇಲಕ್ಕೇಳುತ್ತ ಅಲ್ಲಿ ಚಂದ್ರನ ಬಿಂಬದಂತಹ ಆಕಾರದ ರೂಪ ತಳೆದು ಅಲ್ಲಿಂದ ಆ ಕಂಬ ದೂರದವರೆಗೆ, ಶಿರದ ಮೇಲೆ, ಮೇಲಕ್ಕೇರುತ್ತ ಹೋಗಿ ಭವ್ಯ ಸೂರ್ಯನ ರೂಪದಲ್ಲಿ ತೆರೆದುಕೊಂಡಿತು, ಕಣ್ಣುಕುಕ್ಕಿಸು–ವಂತಹದಾಯಿತು ಮತ್ತು ಅನೇಕ ವರ್ಣಗಳನ್ನು ಹೊಂದಿತು, ಅಲ್ಲಿಂದ ಬಂಗಾರ ವರ್ಣದ ಮಳೆ ಪೃಥ್ವಿಯನ್ನು ಆವರಿಸುತ್ತ ಬಿದ್ದಿತು. ನಂತರ ನಿಧಾನವಾಗಿ ಬೆಳಕಿನ ಕಂಬ ಜೀವಂತ ಪ್ರಕಾಶವಿರುವ ಅಂಡಾಕಾರ ತಳೆಯುತ್ತ ಮತ್ತು ಚಲನೆಯಲ್ಲಿ ತೊಡಗಿಕೊಳ್ಳುತ್ತ ಕೆಳಗೆ ಬಂದಿತು–ಪ್ರತಿಯೊಂದರ ಚಲನೆ ವಿಶಿಷ್ಟ ಕಂಪನಕ್ಕನು–ಸಾರವಾಗಿ ವಿಶಿಷ್ಟ ರೀತಿಯದಾಗಿತ್ತು–ಆ ಬೆಳಕಿನ ಕಂಬ ಸಹಸ್ರದಳ ಚಕ್ರ, ಆಜ್ಞಾ ಚಕ್ರ, ಅನಾಹತ ಚಕ್ರ, ನಾಭಿ ಚಕ್ರ, ಮೂಲಾಧಾರ ಚಕ್ರ, ಇನ್ನೂ ಕೆಳಗಿರುವ ಚಕ್ರ. ಇವೆಲ್ಲವುಗಳಲ್ಲಿ ಪ್ರತಿಯೊಂದನ್ನು ಜಾಗ್ರತಗೊಳಿಸುತ್ತ ಸಾಗಿತು, ಮೊಳಕಾಲುಗಳ ಮಟ್ಟದಲ್ಲಿ ಆರೋಹಣ ಹಾಗೂ ಅವರೋಹಣ ಮಾಡುತ್ತಿರುವ ಪ್ರವಾಹಗಳು ಒಂದುಗೂಡಿದವು ಮತ್ತು ಹೀಗೆ ಅಡೆತಡೆಯಿಲ್ಲದೆ ಇಡೀ ಸತ್ತೆಯನ್ನು ಭವ್ಯ ಅಂಡಾಕಾರದ ಜೀವಂತ ಪ್ರಕಾಶದಿಂದ ಆವರಿಸುತ್ತ ಮುನ್ನಡೆದವು.

ನಂತರ ಪ್ರಜ್ಞೆ ನಿಧಾನಗತಿಯಿಂದ ಹಂತದಿಂದ ಹಂತಕ್ಕೆ ಕೆಳಗಿಳಿಯುತ್ತ, ಪ್ರತಿಯೊಂದು ಲೋಕದಲ್ಲಿ ತಡೆದು ನಿಲ್ಲುತ್ತ ದೇಹದ ಪ್ರಜ್ಞೆಯವರೆಗೆ ಮರಳಿ



ಬಂದಿತು. ನನ್ನ ಸ್ಮರಣಶಕ್ತಿ ಸರಿಯಾದದ್ದು ಆಗಿದ್ದರೆ, ದೈಹಿಕ ಪ್ರಜ್ಞೆಯನ್ನು ಮರಳಿ ಪಡೆದದ್ದು ಒಂಬತ್ತನೆಯ ಹಂತದಲ್ಲಾಗಿತ್ತು. ಆ ಕ್ಷಣದಲ್ಲಿ ದೇಹ ಇನ್ನೂ ಗಡುಸಾಗಿತ್ತು ಮತ್ತು ನಿಶ್ಚಲವಾಗಿತ್ತು.

**ಜುಲೈ 21, 1914**

*

## ಭಿನ್ನ ಯೌಗಿಕ ಅನುಭವಗಳ ಶಿಖರವನ್ನು ಸಮನ್ವಯಗೊಳಿಸುವುದು

ಯೋಗದ ಶಿಖರದಲ್ಲಿ, ಅದರ ಪರಾಕಾಷ್ಠೆಯೆಂದು ಮತ್ತು ಅದರ ಪರಿಪೂರ್ಣ ಸಿದ್ಧಿಯೆಂದು ಸಾಮಾನ್ಯವಾಗಿ ಇರಿಸಲಾದ ಎಲ್ಲ ಅನುಭವಗಳ ಸ್ವಾದವನ್ನು ನಾನು ಒಂದರ ನಂತರ ಒಂದರಂತೆ ಪಡೆಯುವಂತೆ ಮಾಡಲು ಬಯಸಿರುವಿಯೆಂದು ತೋರಿಬರುತ್ತದೆ. ಆ ಅನುಭವ ಆಕರ್ಷಕ, ಗಾಢವಾದದ್ದು ಮತ್ತು ಸಂಪೂರ್ಣವಾದದ್ದು ಆಗಿದೆ. ಅದು ಎಲ್ಲ ಪರಿಣಾಮಗಳ ಜ್ಞಾನವನ್ನು, ಅದರ ಎಲ್ಲ ಪರಿಣಾಮಗಳನ್ನು ತನ್ನಲ್ಲಿ ಕೊಂಡೊಯ್ಯುತ್ತದೆ, ಅದು ಪ್ರಜ್ಞೆಯುಳ್ಳದ್ದಾಗಿದೆ, ಸಂಕಲ್ಪಿಸಿದ್ದಾಗಿದೆ, ವಿಧಿಬದ್ಧ ಪ್ರಯತ್ನದ ಪರಿಣಾಮದ್ದಾಗಿದೆ, ಅನಿರೀಕ್ಷಿತ ಆಕಸ್ಮಿಕವಾದದ್ದಲ್ಲ; ಆದಾಗ್ಯೂ ಆ ಅನುಭವ ಯಾವಾಗಲೂ ಅದರ ಬಗೆಯಲ್ಲಿ ಏಕೈಕವಾಗಿರುತ್ತದೆ, ಅದು ಮಾರ್ಗವನ್ನು ವಿಭಾಗಿಸುವ ಮೈಲುಗಲ್ಲು–ಗಳ ಹಾಗೆ ಎನ್ನುವಂತೆ ಇರುತ್ತದೆ, ಅಲ್ಲದೆ ಅನಂತ ಆರೋಹಣವನ್ನು ಗುರುತಿಸುವ ಈ ಮೈಲುಗಲ್ಲುಗಳು ಎಂದಿಗೂ ಒಂದೇ ಬಗೆಯವಾಗಿರುವುದಿಲ್ಲ, ಅವು ಯಾವಾಗಲೂ ಹೊಸದಾಗಿರುತ್ತವೆ ಮತ್ತು ಒಂದರ ಸಂಬಂಧ ಇನ್ನೊಂದಕ್ಕೆ ಇಲ್ಲವೇನೋ ಎನಿಸುವ ಹಾಗಿರುತ್ತವೆ... ಈ ಎಲ್ಲ ಅಸಂಖ್ಯ ಅನುಭವಗಳನ್ನು ಸಮನ್ವಯಗೊಳಿಸುವ ಕ್ಷಮತೆಯನ್ನು ಈ ಸತ್ತೆ ಹೊಂದುವಂತೆ ನೀನು ಕೈಕೊಳ್ಳುವ ಸಮಯ ಬರಲಿರುವುದೇ? ಅದರಿಂದಾಗಿ ಈವರೆಗೆ ಸಿದ್ಧಿಸಿಕೊಳ್ಳಲು ಆಗದಿರುವ ಹೆಚ್ಚು ಸಂಪೂರ್ಣವಾದ, ಹೆಚ್ಚು ಸುಂದರವಾದ ಒಂದು ಹೊಸ ಸಿದ್ಧಿಯನ್ನು ಎಳೆದು ತರುವಂತಾಗಬಹುದೇನೋ. ಅದು ನನಗೆ ತಿಳಿಯದು. ಅದು ಬರುವು–ದಕ್ಕಿಂತ ಮೊದಲೇ ಅದನ್ನು ಬಯಸದ ಹಾಗಿರುವ ಅಪರೂಪದ ಒಂದು ಸ್ಥಿತಿ ಮಾಯವಾದಾಗ ವಿಷಾದಪಡದೆ ಇರುವುದನ್ನು ನನಗೆ ನೀನು ಕಲಿಸಿಕೊಟ್ಟಿರುವಿ, ಆ ಮಾಯವಾಗುವಿಕೆಯಲ್ಲಿ, ಇನ್ನು ಮುಂದೆ, ಸಾಧಿಸಿದ ಪ್ರಗತಿಯಲ್ಲಿ ಅಸ್ಥಿರತೆಯ

ಕುರುಹನ್ನು ನೋಡುವುದಿಲ್ಲ, ಆದರೆ ಮಾರ್ಗದ ಹಲವಾರು ಹಂತಗಳಲ್ಲಿ ಅತ್ಯಗತ್ಯವಾದದ್ದಕ್ಕಿಂತ ಹೆಚ್ಚುಕಾಲ ತಡೆದು ನಿಲ್ಲದೆ, ಉದ್ದೇಶಪೂರ್ವಕವಾಗಿ ಮುಂದೆ ಸಾಗುವ ಮುನ್ನಡೆಯ ಸಾಕ್ಷ್ಯವನ್ನು ನೋಡುತ್ತೇನೆ. ಪ್ರಕಟಣೆಯ ಸಾಧನ ಸೀಮಿತಗೊಳ್ಳುವುದಕ್ಕೆ ಇರುವ ಏಕ ಮಾತ್ರ ಕಾರಣ ನಾವು ಆ ರೀತಿ ಯೋಚಿಸುತ್ತೇವೆ, ಅದು ನಿನ್ನ ಅನಂತತೆಯಲ್ಲಿ ಪರಿಣಾಮಕಾರಿಯಾಗಿ ಭಾಗಿ–ಯಾಗುವುದು ಸಾಧ್ಯವಿದೆ. ನಿನ್ನ ಭವ್ಯತೆಯ ಏನೋ ಒಂದು ಮೇರೆರಹಿತ ಕ್ಷಿತಿಜಗಳ ಮೇಲೆ ತೆರೆದುಕೊಳ್ಳುವ ದ್ವಾರಗಳನ್ನು ವಿಸ್ತಾರವಾಗಿ ದಬ್ಬಿಕೊಟ್ಟಾಗ ತನ್ನ ವಾಸಸ್ಥಾನವಾಗಿರುವ ಉಪಕರಣಕ್ಕೆ ಸಂಬಂಧ ಕಲ್ಪಿಸಿಕೊಳ್ಳುತ್ತದೆ ಎಂದೂ ಕಲಿಸಿ–ಕೊಡುತ್ತಿರುವಿ.

**ಜುಲೈ 31, 1914**

*

**ಪರಾಮಾತೆಯ ಸಂಪೂರ್ಣಾಹುತಿ**

ಓ ದೈವೀ ಪ್ರಭು, ಓ ಸನಾತನ ಸ್ವಾಮಿ,

ಜನರು ಶಕ್ತಿಗಳ ಸಂಘರ್ಷದಿಂದ ಮುನ್ನೂಕಲ್ಪಟ್ಟು ಅಮೋಘ ತ್ಯಾಗವನ್ನು ಮಾಡುತ್ತಿದ್ದಾರೆ, ಅವರು ತಮ್ಮ ಜೀವನಗಳನ್ನು ರಕ್ತರಂಜಿತ ಸಂಪೂರ್ಣಾಹುತಿಯ ರೂಪದಲ್ಲಿ ಅರ್ಪಿಸುತ್ತಿದ್ದಾರೆ.

ಓ ದೈವೀ ಪ್ರಭು, ಓ ಸನಾತನ ಸ್ವಾಮಿ, ಇದೆಲ್ಲವೂ ವ್ಯರ್ಥವಾಗಿ ಹೋಗದಂತೆ ಅನುಗ್ರಹಿಸು, ನಿನ್ನ ದೈವೀ ಶಕ್ತಿಯ ಅಕ್ಷಯ ಪ್ರವಾಹಗಳು ಪೃಥ್ವಿಯ ಮೇಲೆ ಹರಡಲಿ, ಅದರ ಕ್ಷೋಭೆಗೊಳಗಾದ ವಾತಾವರಣದಲ್ಲಿ, ಹೋರಾಡುತ್ತಿರುವ ಚೈತನ್ಯಗಳಲ್ಲಿ, ಕಾದಾಡುತ್ತಿರುವ ಅಂಶಗಳ ಹಿಂಸಾತ್ಮಕ ಅಸ್ತವ್ಯಸ್ತತೆಯಲ್ಲಿ ಒಳ–ನುಗ್ಗಲಿ ಎಂದು ಅನುಗ್ರಹಿಸು, ನಿನ್ನ ದೈವೀ ಜ್ಞಾನದ ಪರಿಶುದ್ಧ ಪ್ರಕಾಶ ಮತ್ತು ನಿನ್ನ ದೈವಾನುಗ್ರಹ, ಅಕ್ಷಯ ಪ್ರೇಮ ಇವು ಜನರ ಹೃದಯಗಳನ್ನು ತುಂಬಲಿ, ಅವರ ಆತ್ಮಗಳಲ್ಲಿ ಒಳನುಗ್ಗಲಿ, ಅವರ ಪ್ರಜ್ಞೆ ಜ್ಞಾನೋದಯ ಪಡೆಯಲಿ ಎಂದು ಅನುಗ್ರಹಿಸು, ಮತ್ತು ಈ ಮಬ್ಬಿನಿಂದ, ಅಂಧಕಾರಮಯತೆಯಿಂದ, ಭಯಾನಕ ಮತ್ತು ಪ್ರಬಲ ಕತ್ತಲೆಯಿಂದ ನಿನ್ನ ಉದಾತ್ತ ದೈವೀ ಸಾನ್ನಿಧ್ಯದ ಭವ್ಯತೆಯನ್ನು ಮುಂದೆ ತರುವಂತಾಗಲಿ! ಪ್ರಜ್ಞಾಪೂರ್ಣವಾದ ಮತ್ತು ಸಂಪೂರ್ಣವಾದ



ಸಂಪೂರ್ಣಾಹುತಿಯೊಂದಿಗೆ ನನ್ನ ಸತ್ತೆಯನ್ನು ನಿನ್ನೆದುರಿಗೆ ಇರಿಸಲಾಗಿದೆ, ಅದರ ಮೂಲಕ ಆ ಜನರ ಅಪ್ರಜ್ಞೆಯ ಬಲಿದಾನ ಪರಿಣಾಮಕಾರಿಯಾಗುವಂತೆ ಮಾಡಲಾಗಲಿ.

ಅರ್ಪಣೆಯನ್ನು ಸ್ವೀಕರಿಸು, ನಮ್ಮ ಕರೆಗೆ ಉತ್ತರ ನೀಡು: ಬಂದುಬಿಡು.

**ಅಗಸ್ಟ 4, 1914**

*

**ಪೃಥ್ವಿಯ ಮೇಲೆ ಎರಗಿದ ರಾಕ್ಷಸೀ ಶಕ್ತಿಗಳು**

ಆಸುರೀ ಶಕ್ತಿಗಳು ಸುಂಟರಗಾಳಿಯಂತೆ ಪೃಥ್ವಿಯ ಮೇಲೆ ಎರಗಿವೆ. ಅವು ಅಂಧಕಾರಮಯ ಮತ್ತು ಹಿಂಸಾತ್ಮಕ, ಸಾಮರ್ಥ್ಯಪೂರ್ಣ ಹಾಗೂ ಕುರುಡಾಗಿ–ರುವಂತಹವು ಆಗಿವೆ. ಓ ದೈವೀ ಪ್ರಭು, ಅವುಗಳಿಗೆ ಪ್ರಕಾಶ ನೀಡಲು ನಮಗೆ ಬಲವನ್ನು ಕೊಡು. ಅವುಗಳಲ್ಲಿ ಭವ್ಯತೆ ಎಲ್ಲೆಡೆಗೆ ಹರಿದು ಹೋಗಬೇಕು ಮತ್ತು ಅವುಗಳ ಕ್ರಿಯೆಯನ್ನು ರೂಪಪರಿವರ್ತನೆಗೆ ಒಳಪಡಿಸಬೇಕು. ಅವುಗಳ ಧ್ವಂಸ–ಕಾರಕ ಸಾಗುವಿಕೆ ದೈವೀ ಬೀಜ ಬಿತ್ತುವಿಕೆಯನ್ನು ಹಿಂದೆ ಬಿಡುವಂತಾಗಬೇಕು...

ಓ ನನ್ನ ದೈವೀ ಸ್ವಾಮಿ, ನನ್ನ ಅರ್ಪಣೆಯನ್ನು ತಿರಸ್ಕರಿಸಬೇಡ, ಕೊಟ್ಟು–ಕೊಳ್ಳುವಿಕೆಯ ಸಮೃದ್ಧಿಯಲ್ಲಿ ಮತ್ತು ಪ್ರಕಟಣೆಯ ಪೂರ್ಣತೆಯಲ್ಲಿ ನಾನು ಇಡಿಯಾಗಿ ನಿನ್ನವಳಾಗಲು ಯೋಗ್ಯಳಾಗುವಂತೆ ಮಾಡು.

**ಅಗಸ್ಟ 8, 1914**

*

**ನಾನು ನಿನ್ನ ಅಪಾರ ದೈವೀ ಪ್ರೇಮದ ವಕ್ಷಸ್ಥಳವಾಗಿರುವೆ**

ಓ ನನ್ನ ಮಧುರ ಸ್ವಾಮಿ, ಈ ಎಲ್ಲ ಗೊಂದಲಕ್ಕೀಡಾದ ಯೋಚನೆಗಳಲ್ಲಿ, ತಳಮಳಗೊಂಡ ಹೃದಯಗಳಲ್ಲಿ ಪ್ರವೇಶಿಸು, ಅಲ್ಲಿ ನಿನ್ನ ದೈವೀ ಸಾನ್ನಿಧ್ಯದ ಅಗ್ನಿಯನ್ನು ಹೊತ್ತಿಸು. ಪೃಥ್ವಿಯ ನೆರಳು ಅದರ ಮೇಲೆಯೇ ತಿರುಗಿ ಬಿದ್ದಿದೆ, ಅದರಿಂದಾಗಿ ಪೃಥ್ವಿ ಸಂಪೂರ್ಣವಾಗಿ ಕುಗ್ಗಿ ಹೋಗಿದೆ, ಆದರೆ ಈ ನೆರಳು ಬದಲಾಗದ ನಿನ್ನ ಸೂರ್ಯನನ್ನು ಅಡಗಿಸಿಡುತ್ತಿತ್ತು, ಮತ್ತು ಈಗ ಈ ಬಡ

ಪ್ರಪಂಚದ ಮೇಲೆ ಅಪ್ಪಳಿಸಿದೆ, ಬುನಾದಿಯನ್ನೇ ನಡುಗಿಸಿಬಿಟ್ಟಿದೆ ಮತ್ತು ಅದನ್ನು ಭಯಾನಕ ಅಸ್ತವ್ಯಸ್ತತೆ ಹೊಂದುವಂತೆ ಪರಿವರ್ತಿಸಿದೆ, ನೀನು ಮತ್ತೊಮ್ಮೆ ಆ ಅಸ್ತವ್ಯಸ್ತತೆಯ ಮೇಲೆ ಚಲಿಸಲಾರೆಯಾ, ಮಾತನಾಡಲಾರೆಯಾ?

ನಿನ್ನ ಸಂಕಲ್ಪ: "ಅಲ್ಲಿ ದೈವೀ ಪ್ರಕಾಶವಿರಲಿ" ಎಂದಿದೆಯೆ?

ಓ ಅದ್ಭುತ, ಅಜ್ಞಾತ ಏಕೈಕನಾದವನೆ, ನೀನು ಇನ್ನೂ ನಿನ್ನನ್ನು ಪ್ರಕಟಿಸಿಲ್ಲ, ಸರಿಯಾದ ಗಳಿಗೆಗಾಗಿ ಕಾದುಕೊಂಡಿರುವ ನೀನು ನಿನ್ನ ರೀತಿಗಳನ್ನು ತಯಾರು ಮಾಡುವುದಕ್ಕಾಗಿ ನಮ್ಮನ್ನು ಪೃಥ್ವಿಯ ಮೇಲೆ ಕಳಿಸಿರುವಿ, ಈ ಸತ್ತೆಯ ಎಲ್ಲ ಅಂಶಗಳು "ನಿನ್ನ ಸಂಕಲ್ಪ ಈಡೇರುವಂತಾಗಲಿ" ಎಂದು ಕೂಗಿ ನಿನಗೆ ಹೇಳುತ್ತವೆ, ಮತ್ತು ತಮ್ಮನ್ನು ನಿನಗೆ ಪರಮೋಚ್ಚ ಜಯಿಸಲಾಗದ ಪ್ರಚೋದನೆಯೊಂದಿಗೆ ಕೊಟ್ಟುಕೊಳ್ಳುತ್ತವೆ.

ಈ ವೇದನಾಪೂರ್ಣ ಪೃಥ್ವಿಯನ್ನು ನಿನ್ನ ಕರುಣೆಯ ಬಲವತ್ತರವಾದ ತೋಳುಗಳಿಂದ ಅಪ್ಪಿಕೋ, ನಿನ್ನ ಅನಂತ ಪ್ರೇಮದ ಉಪಕಾರಿ ಪ್ರವಾಹಗಳು ಅದರೊಳಗೆ ವ್ಯಾಪಿಸಿಬಿಡಲಿ.

ನಾನು ನಿನ್ನ ಕರುಣೆಯ ಸಾಮರ್ಥ್ಯಪೂರ್ಣ ತೋಳುಗಳಂತಿದ್ದೇನೆ.

ನಿನ್ನ ಅಪಾರ ಪ್ರೇಮದ ವಿಶಾಲ ವಕ್ಷಸ್ಥಳ (ಮಡಿಲು) ನಾನು...ನನ್ನ ತೋಳುಗಳು ವೇದನಾಪೂರ್ಣ ಪೃಥ್ವಿಯನ್ನು ಬಳಸಿ ಹಿಡಿದುಕೊಂಡಿವೆ ಮತ್ತು ಅದನ್ನು ನನ್ನ ಉದಾರ ಹೃದಯಕ್ಕೆ ಕೋಮಲತೆಯಿಂದ ಒತ್ತಿ ಹಿಡಿದಿವೆ, ಮತ್ತು ನಿಧಾನಗತಿಯಲ್ಲಿ ಈ ಹೋರಾಡುತ್ತಿರುವ ಅಣುವಿನ ಮೇಲೆ ಪರಮೋಚ್ಚ ಆಶೀರ್ವಾದದ ಮುತ್ತನ್ನು ಕೊಡಲಾಗಿದೆ, ಅದು ಸಾಂತ್ವನಗೊಳಿಸುವ, ಚಿಕಿತ್ಸೆ ನೀಡುವ ದೈವೀ ಮಾತೆಯ ಮುತ್ತು.

**ಅಗಸ್ಟ 11, 1914**

*

**ಇಡೀ ಪೃಥ್ವಿ ನರಳುತ್ತದೆ ಹಾಗೂ ವೇದನೆಪಡುತ್ತದೆ**

ಓ ದೈವೀ ಪ್ರಭು, ಇಡೀ ಪೃಥ್ವಿ ಒಂದು ವಿಪ್ಲವ (upheaval) ದಲ್ಲಿದೆ, ಅದು ನರಳುತ್ತದೆ, ವೇದನೆ ಪಡುತ್ತದೆ, ಅದು ದಾರುಣ ವೇದನೆಯಲ್ಲಿದೆ. ಅದರ ಮೇಲೆ



ಇಳಿದು ಬಂದ ಈ ಎಲ್ಲ ವೇದನೆ ವ್ಯರ್ಥವಾಗಬಾರದು, ಸೌಂದರ್ಯದ, ಪ್ರಕಾಶದ ಹಾಗೂ ಪ್ರೇಮದ ಬೀಜಗಳು ತೀವ್ರಗತಿಯಲ್ಲಿ ಮೊಳಕೆ ಒಡೆಯುವಂತ ಮತ್ತು ಅರಳಿಕೊಂಡ ಅವು ತಮ್ಮ ಸಮೃದ್ಧ ಫಸಲಿನೊಂದಿಗೆ ಪೃಥ್ವಿಯನ್ನು ಆವರಿಸುವಂತೆ ಅನುಗ್ರಹಿಸು.

ಅಂಧಕಾರದ ಅಗಾಧಕೂಪದ ಆಳಗಳಿಂದ ಪೃಥ್ವಿಯ ಇಡೀ ಸತ್ತೆ ಮೊರೆ–ಯಿಟ್ಟು ನಿನ್ನತ್ತ ಕೂಗುತ್ತಿದೆ, ನೀನು ಅದಕ್ಕೆ ಗಾಳಿ ಹಾಗೂ ಪ್ರಕಾಶ ಕೊಡಬಹು–ದಾಗಿದೆ, ಅದು ಅಡ್ಡಿಗೊಳಗಾಗಿದೆ, ನೀನು ಅದರ ಸಹಾಯಕ್ಕೆ ಬರುವುದಿಲ್ಲವೆ?

ಓ ದೈವೀ ಪ್ರಭು, ವಿಜಯ ಪಡೆಯಲು ನಾವು ಏನನ್ನು ಕೈಕೊಳ್ಳಬೇಕು?

ನಮ್ಮ ಮೊರೆ ಕೇಳು, ಏಕೆಂದರೆ ನಾವು ಎಷ್ಟೇ ಬೆಲೆ ತೆತ್ತಾದರೂ ವಿಜಯಿ–ಗಳಾಗಬೇಕು. ಪ್ರತಿಯೊಂದು ಪ್ರತಿರೋಧವನ್ನು ಮುರಿದು ಹಾಕು. ನಿನ್ನನ್ನು ತೋರಿಸಿಕೊಡು.

**ಅಗಸ್ಟ 21, 1914**

*

**ದೂರ ಸಾಗಿ ಹೋಗಿಬಿಡದ ಅರುಣೋದಯವನ್ನು ರಾತ್ರಿ ತಯಾರು ಮಾಡುತ್ತದೆ**

ದೈವೀ ಪ್ರಭು, ದೈವೀ ಕೃಪೆ ನಮ್ಮೊಂದಿಗಿದೆ, ತೋರಿಕೆಗಳು ಅಂಧಕಾರದ–ವಾದಾಗಲೂ ಕೂಡ, ಅದು ನಮ್ಮನ್ನು ಎಂದಿಗೂ ಬಿಟ್ಟು ಹೋಗುವುದಿಲ್ಲ. ಹೆಚ್ಚು ಪರಿಪೂರ್ಣ ಅರುಣೋದಯಗಳನ್ನು ತಯಾರು ಮಾಡುವುದಕ್ಕಾಗಿ ಕೆಲವೊಮ್ಮೆ ರಾತ್ರಿ ಅವಶ್ಯವಾಗುತ್ತದೆ. ಆದರೆ, ಬಹುಶಃ ಈ ಸಲ ನೀನು ನಮ್ಮನ್ನು ಸಾಗಿ ಹೋಗಿಬಿಡದ ಅರುಣೋದಯದ ಸಾನ್ನಿಧ್ಯದಲ್ಲಿ ಇರಿಸಿರಬಹುದು.

ನಮ್ಮ ಉತ್ಸಾಹಪೂರ್ಣ ಕೃತಜ್ಞತೆಯನ್ನು ಹಾಗೂ ಸಮಗ್ರ ಶರಣಾಗತಿಯನ್ನು ಸ್ವೀಕರಿಸು.

ಪ್ರಕಾಶ ಬಂದಿದೆ, ದಾರಿ ತೆರೆದುಕೊಂಡಿದೆ, ನೀನು ನಮ್ಮೆದುರಿಗೆ ವಿಸ್ತಾರವಾಗಿ ತೆರೆದಿರಿಸಿದ ಹೊಸ ಮಾರ್ಗದ ಮೇಲೆ ಶ್ರಮದಾಯಕ ಗತಕಾಲಕ್ಕೆ ಕೃತಜ್ಞತೆಯಿಂದ ನಮಸ್ಕರಿಸುತ್ತ, ತೀವ್ರಗತಿಯಿಂದ ಮುಂದೆ ಚಲಿಸುತ್ತೇವೆ. ಓ ದೈವೀ ಪ್ರಭು, ವಿಶಾಲವೂ, ಹೆಚ್ಚು ಪ್ರಜ್ಞಾಪೂರ್ಣವೂ ಆದ ಸಿದ್ಧಿಯ ಈ ಹೊಸ ಕ್ಷೇತ್ರದ

ಹೊಸ್ತಿಲಲ್ಲಿ ನಾವು ನಿನಗೆ ಸಮಗ್ರ ಶರಣಾಗತಿ ಹಾಗೂ ಆರಾಧನೆಯಿಂದ ಬಾಗಿ ನಮಸ್ಕರಿಸುತ್ತೇವೆ. ಕಾದಿರಿಸಿಕೊಳ್ಳದೆ ನಮ್ಮನ್ನು ನಾವು ನಿನಗೆ ಕೊಟ್ಟುಕೊಳ್ಳುತ್ತೇವೆ.

ಮತ್ತೊಮ್ಮೆ ಹೇಳುವುದಾದರೆ, ನೀನು ಮಾತ್ರ ನಮ್ಮಲ್ಲಿ ಜೀವಿಸುತ್ತಿರುವಿ. ನೀನು ಮತ್ತೊಮ್ಮೆ ನಿನ್ನ ರಾಜ್ಯದ ರಾಜನಾಗಿರುವಿ, ಆದರೆ ಆ ರಾಜ್ಯ ಹೆಚ್ಚು ವಿಶಾಲ–ವಾದದ್ದು ಮತ್ತು ಪರಿಪೂರ್ಣವಾದದ್ದು, ಆ ರಾಜ್ಯ ನಿನ್ನ ಆಳಿಕೆಗೆ ಹೆಚ್ಚು ಯೋಗ್ಯವಾದದ್ದು.

**ಅಗಸ್ಟ 24, 1914**

*

## ಮಾನವ ಹಾಗೂ ದೈವೀ ಸ್ವರೂಪದಲ್ಲಿ ಶ್ರೀಮಾತೆ



ಶ್ರೀಮಾತೆಯ ಇರುವಿಕೆಯಲ್ಲಿ ಮೂರು ಬಗೆಗಳಿವೆ. ನೀವು ದೈವೀ ಪ್ರಜ್ಞಾ–ಶಕ್ತಿಯೊಡನೆ ಏಕತೆಯ ಸ್ಪರ್ಶದಲ್ಲಿ ಬಂದಾಗ ಆ ಮೂರು ಬಗೆಗಳ ಬಗ್ಗೆ ಅರಿವುಳ್ಳವರಾಗುವಿರಿ. ಆ ದೈವೀ–ಪ್ರಜ್ಞಾಶಕ್ತಿಯೇ ನಮ್ಮನ್ನು, ವಿಶ್ವವನ್ನು ಮೇಲಕ್ಕೆತ್ತಿ ಹಿಡಿಯುತ್ತದೆ. ವಿಶ್ವಾತೀತ, ಮೂಲ ಪರಮೋಚ್ಚ ಶಕ್ತಿಯಾಗಿ ಅವಳು ಲೋಕಗಳ ಮೇಲ್ಗಡೆ ಇರುತ್ತಾಳೆ ಮತ್ತು ಸೃಷ್ಟಿಯನ್ನು ಪರಮೋಚ್ಚನ ಎಂದಿಗೂ ಪ್ರಕಟ–ವಾಗದ ರಹಸ್ಯದೊಡನೆ ಜೋಡಿಸುತ್ತಾಳೆ. ವಿಶ್ವಂಭರಳಾದ, ವಿಶ್ವವ್ಯಾಪಿ ಮಹಾಶಕ್ತಿ–ಯಾದ ಅವಳು ಈ ಎಲ್ಲ ಸತ್ತೆಗಳನ್ನು ಸೃಷ್ಟಿಸುತ್ತಾಳೆ ಮತ್ತು ಈ ಎಲ್ಲ ಲಕ್ಷಾನುಗಟ್ಟಲೆ ವಿಧಾನಗಳನ್ನು ಹಾಗೂ ಶಕ್ತಿಗಳನ್ನು ಒಳಗೊಂಡಿರುತ್ತಾಳೆ, ಅವುಗಳಲ್ಲಿ ಪ್ರವೇಶಿ–ಸುತ್ತಾಳೆ, ಅವುಗಳಿಗೆ ಆಧಾರ ನೀಡುತ್ತಾಳೆ ಮತ್ತು ಅವುಗಳನ್ನು ನಿರ್ದೇಶಿಸುತ್ತಾಳೆ. ಈ ಎರಡೂ ವಿಶಾಲ ರೀತಿಯ ಅಸ್ತಿತ್ವಗಳ ಸಾಮರ್ಥ್ಯವನ್ನು ವ್ಯಕ್ತಿವಿಶಿಷ್ಟತೆಯಲ್ಲಿ ಮೈವೆತ್ತು ನಮಗೆ ಅವು ಜೀವಂತವಾಗಿರುವಂತೆ, ಹತ್ತಿರವಾಗಿರುವಂತೆ ಮಾಡುತ್ತಾಳೆ



ಹಾಗೂ ಮಾನವ ವ್ಯಕ್ತಿವಿಶಿಷ್ಟತೆ ಮತ್ತು ದೈವೀ ಪ್ರಕೃತಿ ಇವುಗಳ ನಡುವೆ ಮಧ್ಯಸ್ಥಿಕೆ ವಹಿಸುತ್ತಾಳೆ.

**CWSA 32/14** **– ಶ್ರೀ ಅರವಿಂದರು**

*

ಈ ಗಾಬರಿಗೊಳಿಸುವ ಅಸ್ತವ್ಯಸ್ತತೆ, ಭಯಾನಕ ವಿನಾಶ ಇವುಗಳಲ್ಲಿ ಶ್ರೇಷ್ಠ ಕಾರ್ಯಗತಿಯನ್ನು ಕಾಣಬಹುದು, ಅದು ಹೊಸ ಬಿತ್ತನೆಗಾಗಿ ಪೃಥ್ವಿಯನ್ನು ತಯಾರು ಮಾಡುವುದಕ್ಕೆ ಅವಶ್ಯವಾದ ಶ್ರಮವಾಗಿರುತ್ತದೆ ಎಂಬುದನ್ನು ನೋಡಬಹುದು, ಈ ಬಿತ್ತನೆಯಿಂದ ಅದ್ಭುತ ಕಾಳಿನ ಹೂಗೊನೆ ಮೇಲೆದ್ದು ಬರುತ್ತದೆ ಮತ್ತು ಜಗತ್ತಿಗೆ ಹೊಸ ಕುಲದ ಫಸಲನ್ನು ಕೊಡುತ್ತದೆ. ದರ್ಶನ ಸ್ಪಷ್ಟವಾಗಿದೆ ಹಾಗೂ ನಿಖರವಾಗಿದೆ, ನಿನ್ನ ದೈವೀ ನಿಯಮದ ಯೋಜನೆಯನ್ನು ಎಷ್ಟೊಂದು ಸರಳವಾಗಿ ಗುರುತಿಸಲಾಗಿದೆ ಎಂದರೆ ಶಾಂತಿ ಮರಳಿ ಬಂದಿದೆ ಮತ್ತು ತನ್ನನ್ನು ಕಾರ್ಯಕರ್ತರ ಹೃದಯಗಳಲ್ಲಿ ಪ್ರತಿಷ್ಠಾಪನಗೊಳಿಸಿದೆ. ಅಲ್ಲಿ ಸಂಶಯಗಳಿಲ್ಲ, ಹಿಂದು ಮುಂದು ನೋಡುವಿಕೆಗಳಿಲ್ಲ, ಇನ್ನು ಮುಂದೆ ತಳಮಳ, ಅಸಹನೆ ಇರುವುದಿಲ್ಲ. ಏನೆಲ್ಲ ಇದ್ದಾಗಲೂ, ಎಲ್ಲದರ ವಿರೋಧವಿದ್ದಾಗಲೂ, ವೈರುಧ್ಯವಿರುವ ತೋರಿಕೆಗಳ ಹಾಗೂ ಭ್ರಾಮಕ ಬಳಸುದಾರಿಗಳಿದ್ದಾಗ್ಯೂ ಅಲ್ಲಿ ಶಾಶ್ವತವಾಗಿ ತನ್ನನ್ನು ಸಿದ್ಧಿಸಿಕೊಳ್ಳುವುದಕ್ಕಾಗಿ ಕಾರ್ಯದ ಪ್ರಧಾನ ಸರಳ ರೇಖೆ–ಯುಂಟು. ಈ ಭೌತಿಕ ವ್ಯಕ್ತಿವಿಶಿಷ್ಟತೆಗಳು, ಅನಂತ ಸಂಭೂತಿಯಲ್ಲಿ ಹಿಡಿತ–ಕ್ಕೊಳಗಾಗದ ಕ್ಷಣಗಳು ಇವುಗಳಿಗೆ ತಿಳಿದದ್ದು ಹೀಗಿದೆ: ತಾವು ಮನುಕುಲ ಒಂದು ದೂರದ ಹೆಜ್ಜೆ ಇರಿಸುವಂತೆ ಮಾಡಿದ್ದೇವೆ, ನಿಸ್ಸಂದೇಹವಾಗಿ ಮತ್ತು ಅನಿವಾರ್ಯವಾಗಿ ಸಂಭವಿಸಲಿರುವ ಸಂಗತಿಗಳ ಬಗ್ಗೆ ಕಾಳಜಿ ಮಾಡದೆ, ತಾತ್ಕಾಲಿಕ ಪರಿಣಾಮ ಏನೇ ಆಗಿರಲಿ, ಅವು ತಮ್ಮನ್ನು ಓ ಸನಾತನ ಪ್ರಭುವೆ, ನಿನ್ನೊಂದಿಗೆ ಒಟ್ಟುಗೂಡಿಸಿಕೊಳ್ಳುತ್ತವೆ, ಓ ವಿಶ್ವಂಭರ ಮಾತೆಯೆ, ಅವು ತಮ್ಮನ್ನು ನಿನ್ನೊಂದಿಗೆ ಒಟ್ಟುಗೂಡಿಸಿಕೊಳ್ಳುತ್ತವೆ, ಮತ್ತು ಆಚೆಗಿರುವ ಹಾಗೂ ಎಲ್ಲ ಪ್ರಕಟಣೆಯಾಗಿರುವ 'ತತ್' ದೊಂದಿಗೆ ಈ ದ್ವಿವಿಧ ಗುರುತಿಸಿಕೊಳ್ಳುವಿಕೆಯಲ್ಲಿ ಅವು ಪರಿಪೂರ್ಣ ನಿಶ್ಚಿತತೆಯ ಅನಂತ ಸಂತೋಷದ ಸ್ವಾದವನ್ನು ಅನುಭವಕ್ಕೆ ತಂದುಕೊಳ್ಳುತ್ತವೆ.

ಜಗತ್ತಿನಲ್ಲೆಲ್ಲ ಶಾಂತಿಯಿರಲಿ,
ಯುದ್ಧ ಒಂದು ತೋರಿಕೆ,
ಗಲಭೆ ಒಂದು ಭ್ರಮೆ,
ಶಾಂತಿ ಅಲ್ಲಿದೆ, ಬದಲಾಗದ ಶಾಂತಿಯಿದೆ

ದೈವೀ ಮಾತೆಯೆ, ನಾನೇ ಆಗಿರುವ ದೈವೀ ಮಾತೆಯೆ, ನೀನು ಒಂದೇ ವೇಳೆಗೆ ವಿನಾಶಕಾರಿ ಹಾಗೂ ನಿರ್ಮಾಣ ಮಾಡುವವಳು ಆಗಿರುವೆ.

ಇಡೀ ವಿಶ್ವ ನಿನ್ನ ಎದೆಯಲ್ಲಿ ವಾಸಿಸುತ್ತದೆ, ತನ್ನ ಅಸಂಖ್ಯ ಜೀವರಾಶಿ–ಯೊಡನೆ ಜೀವಿಸುತ್ತದೆ, ನೀನು ನಿನ್ನ ಭವ್ಯತೆಯಲ್ಲಿ ಅದರ ಕನಿಷ್ಠ ಮಟ್ಟದ ಅಣುಗಳಲ್ಲಿಯೂ ಜೀವಿಸುತ್ತೀ.

ನಿನ್ನ ಅನಂತತೆಯ ಅಭೀಪ್ಸೆಯು ಪ್ರಕಟವಾಗಿರದೆ ಇರುವುದರತ್ತ ಹೊರಳುತ್ತದೆ ಮತ್ತು ಎಂದೆಂದಿಗೂ ಹೆಚ್ಚು ಹೆಚ್ಚಾಗಿರುವ ಸಂಪೂರ್ಣ ಹಾಗೂ ಪರಿಪೂರ್ಣ ಪ್ರಕಟಣೆ ಮಾಡುವಂತೆ ಕೂಗಿ ಹೇಳುತ್ತದೆ.

ಏಕಕಾಲಕ್ಕೆ ಎಲ್ಲವೂ ಇದೆ, ವ್ಯಕ್ತಿ ವಿಶಿಷ್ಟತೆ, ವಿಶ್ವಂಭರತೆ ಹಾಗೂ ಅನಂತತೆ ಇವುಗಳ ತ್ರಿವಿಧ ಅಸಾಧಾರಣ, ಇಡಿಯಾದ ಪ್ರಜ್ಞೆಯಲ್ಲಿ ಅದು ಇದೆ.

**ಅಗಸ್ಟ 31, 1914**

*

## ನಿನ್ನ ದೈವೀ ಪ್ರೇಮದ ಆವಶ್ಯಕತೆ ಇದ್ದವರತ್ತ ಹೊರಳು

ಓ ದೈವೀ ಮಾತೆಯೆ, ಎಂತಹ ಉತ್ಕಟ ಆಸಕ್ತಿಯಿಂದ, ಎಂತಹ ಅತ್ಯುತ್ಸಾಹದ ಪ್ರೇಮದಿಂದ ನಿನ್ನ ಆಳಾತಿ ಆಳದ ಪ್ರಜ್ಞೆಯಲ್ಲಿ, ನಿನ್ನ ಘನತೆವೆತ್ತ ಪ್ರೇಮ ಹಾಗೂ ಪರಿಪೂರ್ಣ ಸೌಖ್ಯ ಇವುಗಳ ಗಣ್ಯತೆಯಲ್ಲಿ ನಿನ್ನ ಬಳಿ ಬಂದೆ ಮತ್ತು ನಾನು ನಿನ್ನ ತೋಳುಗಳಲ್ಲಿ ಎಷ್ಟೊಂದು ಹತ್ತಿರವಾಗಿ ಎಷ್ಟೊಂದು ಗಾಢ ಪ್ರೇಮದಿಂದ ನುಸುಳಿಕೊಂಡೆ ಎಂದರೆ ಒಟ್ಟಿನಲ್ಲಿ ನೀನೇ ಆಗಿಬಿಟ್ಟೆ. ಆಗ ನಮ್ಮ ನಿಶ್ಚಲನೀರವತೆ–ಯಲ್ಲಿದ್ದ ದಿವ್ಯಾನಂದದಲ್ಲಿ ಇನ್ನೂ ಹೆಚ್ಚು ಗಂಭೀರವಾದ ಆಳಗಳಿಂದ ಒಂದು ಧ್ವನಿ ಮೇಲೆದ್ದು ಬಂದಿತು ಮತ್ತು ಆ ಧ್ವನಿ "ನಿನ್ನ ಪ್ರೇಮದ ಆವಶ್ಯಕತೆ ಇದ್ದವರತ್ತ ಹೊರಳು" ಎಂದು ಹೇಳಿತು. ಪ್ರಜ್ಞೆಯ ಎಲ್ಲ ಅಂತಸ್ತುಗಳು, ಒಂದರ ನಂತರ ಒಂದರಂತೆ ಬರುವ ಲೋಕಗಳು ತೋರಿಬಂದವು. ಅವುಗಳಲ್ಲಿ ಕೆಲವು ವೈಭವ–ದಿಂದ ಕೂಡಿಕೊಂಡಿದ್ದವು, ಪ್ರಕಾಶಮಯವಾಗಿದ್ದವು, ಸರಿಯಾದ ಕ್ರಮಬದ್ಧತೆ–ಯಿಂದ ಇದ್ದವು ಮತ್ತು ಸ್ಪಷ್ಟವಾಗಿದ್ದವು. ಅಲ್ಲಿ ಜ್ಞಾನ ದೇದೀಪ್ಯಮಾನವಾಗಿತ್ತು, ಅಭಿವ್ಯಕ್ತಿ ಸಾಮರಸ್ಯದಿಂದ ಕೂಡಿತ್ತು ಮತ್ತು ವಿಸ್ತಾರವಾಗಿತ್ತು, ಸಂಕಲ್ಪ ಪ್ರಬಲ–ವಾಗಿತ್ತು ಹಾಗೂ ಅಜೇಯವಾಗಿತ್ತು. ನಂತರ ಲೋಕಗಳು ಅಂಧಕಾರ–ಮಯವಾಗತೊಡಗಿದವು, ಅನೇಕತೆಯಲ್ಲಿ ಹೆಚ್ಚು ಹೆಚ್ಚಾಗಿ ಅಸ್ತವ್ಯಸ್ತವಾಗ ತೊಡಗಿದವು, ದೈವೀ ಚೈತನ್ಯ ಹಿಂಸಾತ್ಮಕವಾಗತೊಡಗಿತು ಮತ್ತು ಭೌತಿಕ ಜಗತ್ತು ಮಬ್ಬಾದದ್ದು ಹಾಗೂ ವೇದನಾಪೂರ್ಣವಾದದ್ದು ಆಗತೊಡಗಿತು. ನಮ್ಮ ಅನಂತ ಪ್ರೇಮದಲ್ಲಿ, ದುಃಸ್ಥಿತಿ ಹಾಗೂ ಅಜ್ಞಾನವಿರುವ ಜಗತ್ತಿನ ಘೋರ ವೇದನೆಯನ್ನು ಅದರ ಸಮಗ್ರತೆಯಲ್ಲಿ ಗ್ರಹಿಸಿದಾಗ, ನಮ್ಮ ಮಕ್ಕಳು ಅಂಧಕಾರಮಯ ಹೋರಾಟದಲ್ಲಿ ಸಿಕ್ಕಿಹಾಕಿಕೊಂಡಿದ್ದನ್ನು, ತಮ್ಮ ಗುರಿಯಿಂದ ದಾರಿ ತಪ್ಪಿಸಿಕೊಂಡ ಚೈತನ್ಯಗಳಿಂದ ಒಬ್ಬರ ಮೇಲೊಬ್ಬರು ಎಸೆದುಕೊಂಡದ್ದನ್ನು ನೋಡಿದಾಗ ನಾವು ಕಟ್ಟಕ್ಕರತೆಯಿಂದ ದೈವೀ ಪ್ರೇಮದ ಪ್ರಕಾಶ ಪ್ರಕಟವಾಗಬೇಕು, ದಿಗ್ಭ್ರಮೆಗೊಳಗಾದ ಈ ಅಂಶಗಳ ಕೇಂದ್ರದಲ್ಲಿ ರೂಪಪರಿವರ್ತನೆ ಮಾಡುವ ಶಕ್ತಿಯಿರಬೇಕು ಎಂದು ಸಂಕಲ್ಪ ಮಾಡಿದೆವು. ನಂತರ ಈ ಸಂಕಲ್ಪ ಇನ್ನೂ ಹೆಚ್ಚು ಸಾಮರ್ಥ್ಯ–ಪೂರ್ಣವಾಗಲಿ, ಪರಿಣಾಮಕಾರಿಯಾಗಲಿ ಎಂದು ಓ, ಯೋಚನೆಗೆ ಅತೀತನಾದ ಪರಮೋಚ್ಚನೆ ನಿನ್ನತ್ತ ಹೊರಳಿದೆವು ಮತ್ತು ನಿನ್ನ ಸಹಾಯಕ್ಕಾಗಿ ಮೊರೆಯಿಟ್ಟೆವು ಮತ್ತು ದೈವೀ ಅಜ್ಞಾತವಾದವನ ಇಂಗಿತ ತಿಳಿಯದ ಆಳಗಳಿಂದ ಘನತೆವೆತ್ತ ಹಾಗೂ ಪ್ರಬಲವಾದ ಉತ್ತರ ಬಂದಿತು, ಪೃಥ್ವಿಗೆ ರಕ್ಷಣೆ ದೊರೆಯಿತೆಂದು ನಾವು ತಿಳಿದುಕೊಂಡೆವು.

**ಸಪ್ಟಂಬರ 1, 1914**

*

## ಸಂಪೂರ್ಣಾಹುತಿಯಿಂದ ಜನ್ಮತಾಳಿದ ದೈವೀ ಅಗ್ನಿಪ್ಷಿಕೆ

ಪೃಥ್ವಿಯ ಮೇಲೆ ಅಂಧಕಾರ ಅವರೋಹಣ ಮಾಡಿದೆ, ಅದು ದಟ್ಟವಾದದ್ದು, ಹಿಂಸಾತ್ಮಕವಾದದ್ದು ಹಾಗೂ ವಿಜಯೋನ್ಮಾದದ್ದೂ ಆಗಿದೆ. ಭೌತಿಕ ಜಗತ್ತಿನಲ್ಲಿ ಎಲ್ಲವೂ ದುಃಖಮಯವಾಗಿದೆ, ಭಯ, ವಿನಾಶಗಳಿಂದ ಕೂಡಿದೆ ಮತ್ತು ನಿನ್ನ

ದೈವೀ ಪ್ರೇಮದ ಪ್ರಕಾಶದ ಭವ್ಯತೆ ಗೋಳಾಟದ ಪರದೆಯಿಂದಾಗಿ ಕತ್ತಲೆ–ಯಲ್ಲಿರುವ ಹಾಗೆ ತೋರಿಬರುತ್ತಿದೆ.

ಓ ಮಧುರ ದೈವೀಮಾತೆಯೆ, ನಾನು ನಿನ್ನಲ್ಲಿ ಗಾಢ ಪ್ರೇಮದೊಂದಿಗೆ ಹಾಗೂ ಎಲ್ಲ ವಸ್ತು–ವಿಷಯಗಳ ಪ್ರಭುವಿಗೆ ದೈನ್ಯ ಬೇಡಿಕೆಯೊಂದಿಗೆ ಮುಳುಗು ಹಾಕುತ್ತೇನೆ, ಅವನು ನಮಗೆ ದಾರಿಯನ್ನು ತೋರಿಸಲಿ, ಅವನ ಕಾರ್ಯಕ್ಕಾಗಿ ಇರುವ ಮಾರ್ಗವನ್ನು ನಮಗೆ ಗುರುತಿಸಿ ತೋರಿಸಲಿ, ಅದರಿಂದಾಗಿ ಆ ಮಾರ್ಗದ ಮೇಲೆ ದಿಟ್ಟತನದಿಂದ ಹೆಜ್ಜೆ ಇರಿಸುವಂತಾಗುವುದು.

ಕಾಲ ಒತ್ತಡ ತರುತ್ತದೆ: ದುಃಖಪೀಡಿತ ಪೃಥ್ವಿಗೆ ಸಹಾಯಮಾಡಲು ದೈವೀ ಸಾಮರ್ಥ್ಯಗಳು ಬರಲೇಬೇಕಾಗಿದೆ.

ಓ ಮಧುರ ದೈವೀ ಮಾತೆಯೆ, ನಿನ್ನ ಎಲ್ಲ ಮಕ್ಕಳನ್ನು ನಿನ್ನ ವಿಶಾಲ ವಕ್ಷಸ್ಥಳದ ಮೇಲೆ ಗಟ್ಟಿಯಾಗಿ ಅಪ್ಪಿ ಹಿಡಿದುಕೊಂಡಿರುವಿ, ನಿನ್ನ ಪ್ರೇಮ ಎಲ್ಲರನ್ನೂ ಒಂದೇ ರೀತಿಯಲ್ಲಿ ಸುತ್ತುವರಿದಿದೆ.

ನಾನು ನಿನ್ನ ದೈವೀ ಪ್ರೇಮದ ಪರಿಶುದ್ಧಗೊಳಿಸುವ ಅಗ್ನಿಯಾಗಿದ್ದೇನೆ, ಓ ದೈವೀ ಪ್ರಭು, ನಿಶ್ಚಲನೀರವತೆಯಲ್ಲಿರುವ, ಯೋಚಿಸಲು ಸಾಧ್ಯವಾಗದಂತಿರುವ ಏಕೈಕನಾದವನೆ, ಈ ಪ್ರೇಮದ ಅಗ್ನಿಷ್ಟಿಕೆಯ ಸಂಪೂರ್ಣಾಹುತಿಯನ್ನು ಸ್ವೀಕರಿಸು, ಅದರಿಂದಾಗಿ ನಿನ್ನ ಆಳಿಕೆ ಬರುವಂತಾಗಲಿ, ನಿನ್ನ ದೈವೀ ಪ್ರಕಾಶ ಅಂಧಕಾರ ಹಾಗೂ ಮೃತ್ಯುಗಳ ಮೇಲೆ ಜಯ ಸಾಧಿಸುವಂತಾಗಲಿ.

ನಿನ್ನ ದೈವೀ ಸಾಮರ್ಥ್ಯವನ್ನು ಪ್ರಕಟಗೊಳಿಸು, ದಿನದಿಂದ ದಿನಕ್ಕೆ, ಗಳಿಗೆ–ಯಿಂದ ಗಳಿಗೆಗೆ: "ಓ ದೈವೀ ಪ್ರಭು, ನಿನ್ನ ದೈವೀ ಸಾಮರ್ಥ್ಯವನ್ನು ಪ್ರಕಟ–ಗೊಳಿಸು" ಎಂದು ನಾವು ನಿನ್ನಲ್ಲಿ ಮೊರೆಯಿಡುತ್ತೇವೆ.

**ಸಪ್ಟಂಬರ 4, 1914**

*

**ದೈವೀ ಗಳಿಗೆ ಬಂದಿದೆ**

ಓ ದೈವೀ ಮಾತೆಯೆ, ನಿನ್ನ ಮುನ್ನಡೆ ವಿಜಯೋತ್ಸವದ್ದಾಗಿದೆ, ಅಡೆತಡೆ–ಯಿಲ್ಲದ್ದಾಗಿದೆ. ಸಮಗ್ರ ಪ್ರೇಮದೊಂದಿಗೆ ನಿನ್ನೊಡನೆ ಏಕತೆಯಲ್ಲಿರುವವನು



ನಿಲುಗಡೆಗೆ ಒಳಗಾಗದೆ ಇನ್ನೂ ಹೆಚ್ಚು ವಿಶಾಲವಾದ ಕ್ಷಿತಿಜಗಳತ್ತ, ಇನ್ನೂ ಹೆಚ್ಚು ಸಂಪೂರ್ಣವಾದ ಸಿದ್ಧಿಯತ್ತ, ನಿನ್ನ ದೈವೀ ಪ್ರಕಾಶದ ಭವ್ಯತೆಯಲ್ಲಿ ಶಿಖರದಿಂದ ಶಿಖರಕ್ಕೆ ಜಿಗಿಯುತ್ತ, ದೈವೀ ಅಜ್ಞಾತವಾದವನ ರಹಸ್ಯಗಳನ್ನು ಗೆದ್ದುಕೊಳ್ಳುವತ್ತ ಮತ್ತು ಅವುಗಳ ಸಮಗ್ರ ಪ್ರಕಟಣೆಯತ್ತ ಪ್ರಯಾಣ ಮಾಡುತ್ತಾನೆ.

ಓ ದೈವೀ ವಿಜಯಿಯೇ, ಇಡೀ ಪೃಥ್ವಿ ನಿನ್ನನ್ನು ಹೊಗಳುತ್ತದೆ ಮತ್ತು ಎಲ್ಲ ಶಕ್ತಿಗಳು ನಿನಗೆ ವಿಧೇಯವಾಗಿರುತ್ತವೆ ಏಕೆಂದರೆ: "ದೈವೀ ಗಳಿಗೆ ಬಂದಿದೆ" ಎಂದು ದೈವೀ ಪ್ರಭು ಹೇಳಿದ್ದಾನೆ. ಎಲ್ಲ ಅಡೆತಡೆಗಳ ಮೇಲೆ ವಿಜಯ ಸಾಧಿಸ–ಲಾಗುವುದು.

**ಸಪ್ಟಂಬರ 6, 1914**

*

**ನಿನ್ನ ದೈವೀ ಪ್ರೇಮದ, ದೈವೀ ಪ್ರಕಾಶದ ಹಾಗೂ ದೈವೀ ಶಕ್ತಿಯ ಮೇಲಕ್ಕೇರುತ್ತಿರುವ ತೆರೆ**

ನಿನ್ನ ದೈವೀ ಪ್ರೇಮ ಮೇಲಕ್ಕೇರುತ್ತಿರುವ ತೆರೆಯ ಹಾಗಿದೆ, ಇಡೀ ಸತ್ತೆಯ ಮೇಲೆ ಮುತ್ತಿಗೆ ಹಾಕುತ್ತದೆ ಮತ್ತು ಎಲ್ಲ ವಸ್ತು–ವಿಷಯಗಳ ಮಧ್ಯೆ ಪ್ರವೇಶಿಸುತ್ತದೆ. ದೈವೀ ಪ್ರಭು, ನಿನ್ನ ಪ್ರೇಮ ಎಲ್ಲ ಹೃದಯಗಳಲ್ಲಿ ಒಳನುಗ್ಗುವುದು ಮತ್ತು ಅವುಗಳಲ್ಲಿ ಎಂದೂ ನಂದಿ ಹೋಗದ ದೈವೀ ಜ್ವಾಲೆಯನ್ನು, ಮಾಸಿಹೋಗದ ದೈವೀ ಸೌಂದರ್ಯವನ್ನು ಬೆಳಗುವುದು ಮತ್ತು ಪ್ರತಿಯೊಂದು ವ್ಯತ್ಯಾಸ ಮತ್ತು ವೈರುಧ್ಯದ ಮೇಲೆ ಪರಮೋಚ್ಚ ಒಳ್ಳೆಯದಾದ ಬದಲಾಗದ ದಿವ್ಯಾನಂದವನ್ನು ಸ್ಥಾಪಿಸುವುದು.

ನಿನ್ನ ಪ್ರಕಾಶ ಮೇಲಕ್ಕೇರುತ್ತಿರುವ ತೆರೆ ಇದ್ದ ಹಾಗಿದೆ, ಇಡೀ ಸತ್ತೆಯ ಮೇಲೆ ಮುತ್ತಿಗೆ ಹಾಕುತ್ತದೆ, ಮತ್ತು ಎಲ್ಲ ವಸ್ತು–ವಿಷಯಗಳ ಮಧ್ಯೆ ಪ್ರವೇಶಿಸುತ್ತದೆ. ದೈವೀ ಪ್ರಭು, ನಿನ್ನ ಪ್ರಕಾಶ ಎಲ್ಲ ಯೋಚನೆಗಳಲ್ಲಿ ಒಳನುಗ್ಗುತ್ತದೆ ಮತ್ತು ಅವುಗಳಲ್ಲಿ ಸಾರ್ವಭೌಮ, ಹೊಯ್ದಾಡದ ಸ್ಪಷ್ಟತೆಯನ್ನು ಸೃಷ್ಟಿಸುತ್ತದೆ, ಎಂದೂ ತಪ್ಪು ಮಾಡದ ಸ್ಪಷ್ಟ ದರ್ಶನವನ್ನು ಕೊಡುತ್ತದೆ ಮತ್ತು ಪ್ರತಿಯೊಂದು ವ್ಯತ್ಯಾಸ ಮತ್ತು ವೈರುಧ್ಯದ ಮೇಲೆ ನಿನ್ನ ಜ್ಞಾನದ ಎಲ್ಲ ವೈಭವದಿಂದ ಪರಮೋಚ್ಚ ವಿವೇಕವಿರುವ ಜ್ಞಾನವನ್ನು ಸ್ಥಾಪಿಸುವುದು.

ಶಕ್ತಿ ಮೇಲಕ್ಕೇರುತ್ತಿರುವ ತೆರೆ ಇದ್ದ ಹಾಗಿದೆ, ಇಡೀ ಸತ್ತೆಯ ಮೇಲೆ ಮುತ್ತಿಗೆ ಹಾಕುತ್ತದೆ ಮತ್ತು ಎಲ್ಲ ವಸ್ತು–ವಿಷಯಗಳ ಮಧ್ಯೆ ಪ್ರವೇಶಿಸುತ್ತದೆ. ದೈವೀ ಪ್ರಭು, ನಿನ್ನ ಶಕ್ತಿ ಎಲ್ಲ ಜೀವನದಲ್ಲಿ ಒಳನುಗ್ಗುತ್ತದೆ ಮತ್ತು ಅದರಲ್ಲಿ ಎಂದೂ ವಿಫಲವಾಗದ ಪರಿಣಾಮಕಾರಿ ಬಲವನ್ನು ಕೊಡುತ್ತದೆ, ಜಯಿಸಲಾಗದ ದೈವೀ ಸಾಮರ್ಥ್ಯವಿರುತ್ತದೆ, ಮತ್ತು ಪ್ರತಿಯೊಂದು ವ್ಯತ್ಯಾಸ ಹಾಗೂ ವೈರುಧ್ಯದ ಮೇಲೆ ಪರಮೋಚ್ಚ ಸಂಕಲ್ಪವಿರುವ, ಪ್ರಭುತ್ವ ಪಡೆಯುವ ಚೈತನ್ಯವನ್ನು ಸ್ಥಾಪಿಸುವುದು.

**ಸಪ್ಟಂಬರ 10, 1914**

*

ಓ ಆರಾಧನೀಯಳಾದ ದೈವೀ ಮಾತೆಯೆ, ನಿನ್ನ ನೆರವಿದ್ದಾಗ ಅಸಾಧ್ಯ–ವಾದಂತಹದು ಏನಿರುತ್ತದೆ? ಸಿದ್ಧಿ ಪಡೆಯುವ ಗಳಿಗೆ ಸಮೀಪಿಸಿದೆ, ನೆರವು ನೀಡುವುದನ್ನು ಕುರಿತು ನೀನು ಆಶ್ವಾಸನೆ ನೀಡಿರುವಿ, ಅದರಿಂದಾಗಿ ನಾವು ಪರಮೋಚ್ಚ ಸಂಕಲ್ಪವನ್ನು ಸಮಗ್ರವಾಗಿ ನಡೆಸಿಕೊಡುವಂತಾಗುವುದು.

ಯೋಚಿಸಲು ಸಾಧ್ಯವಾಗದ ನೈಜತೆಗಳು ಮತ್ತು ಭೌತಿಕ ಜಗತ್ತಿನ ಸಾಪೇಕ್ಷತೆ–ಗಳು ಇವುಗಳ ನಡುವೆ ನಾವು ಯೋಗ್ಯ ಮಧ್ಯಸ್ಥರೆಂದು ನಮ್ಮನ್ನು ಒಪ್ಪಿಕೊಂ–ಡಿರುವಿ, ಮತ್ತು ನಮ್ಮ ನಡುವೆ ಇರುವ ನಿನ್ನ ಸತತ ಸಾನ್ನಿಧ್ಯ ನಿನ್ನ ಕ್ರಿಯಾಶೀಲ ಸಹಕಾರದ ಸಂಕೇತವಾಗಿದೆ.

ದೈವೀ ಪ್ರಭು ಸಂಕಲ್ಪಿಸಿದ್ದಾನೆ, ಮತ್ತು ನೀನು ನಿರ್ವಹಿಸುತ್ತಿರುವಿ
ಪೃಥ್ವಿಯ ಮೇಲೆ ಹೊಸ ದೈವೀ ಬೆಳಕು ಪ್ರಕಾಶಿಸುವುದು
ಹೊಸ ಜಗತ್ತೊಂದು ಜನ್ಮ ತಾಳುವುದು,
ಮತ್ತು ವಚನ ನೀಡಲಾಗಿದ್ದ ಎಲ್ಲ ಸಂಗತಿಗಳು ನೆರವೇರುವವು

**ಸಪ್ಟಂಬರ 25, 1914**

*

* ಫೆಬ್ರುವರಿ 29, 1956 ರಂದು ಅತಿಮಾನಸದ ಪ್ರಕಟಣೆಯಾದ ನಂತರ ಶ್ರೀಮಾತೆಯವರು ಈ ಹೇಳಿಕೆಯನ್ನು ಕೆಳಗೆ ಹೇಳಿದ ರೀತಿಯಲ್ಲಿ ತಿದ್ದಿ ಬರೆದರು.



ದೈವೀ ಪ್ರಭು ನೀನು ಸಂಕಲ್ಪಿಸಿರುವಿ, ಮತ್ತು ನಾನು ನಿರ್ವಹಿಸುತ್ತೇನೆ
ಪೃಥ್ವಿಯ ಮೇಲೆ ಹೊಸ ಬೆಳಕು ಪ್ರಕಾಶಿಸುವುದು,
ಹೊಸ ಜಗತ್ತು ಜನ್ಮ ತಾಳಿದೆ
ವಚನ ನೀಡಲಾಗಿದ್ದ ಸಂಗತಿಗಳು ನೆರವೇರಿಕೆ ಕಂಡುಕೊಂಡಿವೆ.

**CWM 15/95**

*

## ಎಪ್ರಿಲ್ 24, 1956

ಅತಿಮಾನಸದ ಪ್ರಕಟಣೆ, ಇನ್ನು ಮುಂದೆ, ವಾಗ್ದಾನವಾಗಿ ಉಳಿದು–ಕೊಳ್ಳುವುದಿಲ್ಲ, ಆದರೆ ಅದು ಜೀವಂತ ವಾಸ್ತವತೆ, ಒಂದು ನೈಜತೆಯಾಗಿದೆ.

ಅದು ಇಲ್ಲಿ ಕಾರ್ಯ ಮಾಡುತ್ತಿದೆ, ಒಂದು ದಿನ ಬರಲಿದೆ ಆಗ ಅತ್ಯಂತ ಕುರುಡಾದವನು, ಅತ್ಯಂತ ಅಪ್ರಜ್ಞೆಯುಳ್ಳವನು, ಒಪ್ಪಿಕೊಳ್ಳಲು ಎಳ್ಳಷ್ಟೂ ಇಷ್ಟವಿಲ್ಲ–ದವನು ಅದನ್ನು ಗುರುತಿಸುವ ನಿಬಂಧನೆಗೆ ಒಳಗಾಗುತ್ತಾನೆ.

**CWM 15/96**

*

**ದೇವತೆಗಳ ಮಾತೆಯಾದ ಅದಿತಿ**

ನಮ್ಮ ದೈವೀ ಮಾತೆ ನಮ್ಮೊಂದಿಗಿದ್ದಾಳೆ ಮತ್ತು ಆಳ ತಿಳಿಯದ ಆಳಗಳಿಂದ ಇಂದ್ರಿಯಗಳ ಅತ್ಯಂತ ಬಾಹ್ಯ ಜಗತ್ತಿನವರೆಗೆ ಪರಮೋಚ್ಚನೊಂದಿಗೆ ಮತ್ತು ಇಡಿಯಾದ ಪ್ರಜ್ಞೆಯೊಂದಿಗೆ ತನ್ನನ್ನು ಗುರುತಿಸಿಕೊಳ್ಳುವುದರ ಬಗ್ಗೆ ವಚನ ನೀಡಿದ್ದಾಳೆ. ಈ ಎಲ್ಲ ಪ್ರಾಂತಗಳಲ್ಲಿ ಅಗ್ನಿ ತನ್ನ ಪರಿಶುದ್ಧಗೊಳಿಸುವ ಜ್ವಾಲೆಯೊಂ–ದಿಗೆ ಎಲ್ಲ ಅಡೆತಡೆಗಳನ್ನು ನಾಶಮಾಡುವುದಕ್ಕೆ, ಚೈತನ್ಯಗಳನ್ನು ಉದ್ದೀಪನ–ಗೊಳಿಸುವುದಕ್ಕೆ, ಸಂಕಲ್ಪವನ್ನು ಉತ್ತೇಜನಗೊಳಿಸುವುದಕ್ಕೆ ತನ್ನ ಸಹಾಯ ನೀಡುವುದರ ಬಗ್ಗೆ ಭರವಸೆ ನೀಡಿದ್ದಾನೆ, ಅದರಿಂದಾಗಿ ಸಿದ್ಧಿಯನ್ನು ತೀವ್ರ–ಗತಿಯಿಂದ ದೊರಕಿಸಲು ಸಾಧ್ಯವಾಗುವುದು. ನಮ್ಮ ಜ್ಞಾನದಲ್ಲಿ ಜ್ಞಾನೋದಯದ ಪರಿಪೂರ್ಣತೆಗಾಗಿ ಇಂದ್ರನಿದ್ದಾನೆ, ಪರಮೋಚ್ಚ ದಿವ್ಯಾನಂದಗಳನ್ನು ತಂದು–ಕೊಡುವವನಾದ ಸೋಮ ತನ್ನ ಅನಂತ, ಸಾರ್ವಭೌಮ, ಅದ್ಭುತ ಪ್ರೇಮದಲ್ಲಿ ನಮ್ಮನ್ನು ಪರಿವರ್ತನೆಗೊಳಪಡಿಸಿದ್ದಾನೆ...

ಓ ದೈವೀ ಮಧುರ ಮಾತೆಯೆ, ತಲ್ಲೀನವಾದ, ವರ್ಣನಾತೀತ ಕೋಮಲತೆ–ಯಿಂದ ಹಾಗೂ ಅನಂತ ವಿಶ್ವಾಸದಿಂದ ನಾನು ನಿನಗೆ ತಲೆ ಬಾಗಿ ನಮಿಸುತ್ತೇನೆ.

ನನ್ನಲ್ಲಿ ಇಷ್ಟೊಂದು ಜೀವಂತವಿರುವ ಓ ಭವ್ಯ ಅಗ್ನಿಯೆ, ನಾನು ನಿನಗೆ ಕರೆ ಕೊಡುತ್ತೇನೆ. ನನ್ನಲ್ಲಿ ಇನ್ನೂ ಹೆಚ್ಚಾಗಿ ಜೀವಿಸೆಂದು ನಿನ್ನನ್ನು ಆಹ್ವಾನಿಸುತ್ತೇನೆ, ಅದರಿಂದಾಗಿ ಅಗ್ನಿಸ್ಪಿಕೆ ಇನ್ನೂ ಹೆಚ್ಚು ಭವ್ಯವಾದದ್ದಾಗಲಿ, ನಿನ್ನ ಜ್ವಾಲೆಗಳು ಹೆಚ್ಚು ಸಾಮರ್ಥ್ಯಪೂರ್ಣವಾಗಿ ಇನ್ನೂ ಹೆಚ್ಚು ಎತ್ತರಕ್ಕೇರಲಿ, ಅದರಿಂದಾಗಿ ಇಡೀ ಸತ್ತೆ ಈಗ ಕೇವಲ ಉತ್ಸಾಹದಿಂದ ಕೂಡಿದ ಜ್ವಾಲೆಯಾಗಲಿ, ಪರಿಶುದ್ಧಗೊಳಿಸುವ ಚಿತೆಯಾಗಲಿ.

ಓ ಇಂದ್ರ, ನೀನು ಪೂಜ್ಯನೆಂದು ಗೌರವಿಸುತ್ತೇನೆ ಹಾಗೂ ನಿನ್ನನ್ನು ಮೆಚ್ಚಿಕೊಳ್ಳುತ್ತೇನೆ, ನೀನು ನನ್ನೊಂದಿಗೆ ಏಕವಾಗು ಎಂದು ಮೊರೆಯಿಡುತ್ತೇನೆ, ಅದರಿಂದಾಗಿ ಯೋಚನೆಯ ಎಲ್ಲ ಅಡೆತಡೆಗಳು ಮುರಿದು ಹೋಗುವಂತಾಗುತ್ತದೆ ಮತ್ತು ನನಗೆ ನೀನು ದೈವೀ ಜ್ಞಾನವನ್ನು ದಯಪಾಲಿಸುವಂತಾಗುತ್ತದೆ.

ಓ ದೈವೀ ಪ್ರಭು, ಘನತೆವೆತ್ತ ದೈವೀ ಪ್ರೇಮ ಸ್ವರೂಪನಾದವನೆ, ನಿನಗೆ ನಾನು ಬೇರೆ ಯಾವ ಹೆಸರನ್ನು ಎಂದಿಗೂ ಕೊಟ್ಟಿಲ್ಲ, ನೀನು ಇಡಿಯಾಗಿ ನನ್ನ ದೇಹದ ದ್ರವ್ಯವೇ ಆಗಿರುವಿ, ಅನಂತ ವಿಶ್ವ ಮತ್ತು ಅದರಾಚೆಗಿರುವುದರಲ್ಲಿ ನಾನು ಕಂಡು–ಕೊಳ್ಳುತ್ತಿರುವ ಹಾಗೆ, ನನ್ನ ದೇಹದ ಕನಿಷ್ಠಮಟ್ಟದ ಅಣುಗಳಲ್ಲಿಯೂ ಕೂಡ ನೀನು ಸ್ಪಂದಿಸುತ್ತಿರುವಿ, ನನ್ನ ಉಸಿರಿನಲ್ಲಿ ಉಸಿರಾಡಿಸುತ್ತಿರುವ, ನನ್ನ ಎಲ್ಲ ಚಟುವಟಿಕೆಗಳಲ್ಲಿ ಚಲಿಸುತ್ತಿರುವ ನೀನು ಸದ್ಭಾವನೆ ಇರುವ ಹಾಗೂ ಎಲ್ಲ ವೇದನೆಗಳ ಹಿಂದೆ ಅಡಗಿರುವ ಎಲ್ಲದರಾದ್ಯಂತ ಪ್ರಭಾಮಯವಾಗಿರುವಿ. ನಿನಗಾಗಿ ಎಂದೆಂದಿಗೂ ಗಾಢವಾಗಿ ಹೆಚ್ಚುತ್ತಿರುವ ಆರಾಧನೆಯೊಂದನ್ನು ನೆಚ್ಚಿಕೊಂಡಿರುವ ನನಗೆ, ಇನ್ನೂ ಹೆಚ್ಚಿನ ಕಾರಣದೊಂದಿಗೆ ನೀನು ನಾನೇ ಎಂಬ ಭಾವನೆಯನ್ನು ಇಡಿಯಾಗಿ ಭಾವಿಸಿಕೊಳ್ಳುವುದಕ್ಕೆ ಅನುಮತಿ ನೀಡು.

ಈ ಎಲ್ಲವನ್ನೂ ಏಕೈಕವಾದದ್ದನ್ನಾಗಿ ಮಾಡಿರುವ, ಅದಕ್ಕೂ ಹೆಚ್ಚಿನದಾಗಿ–ರುವ ದೈವೀ ಪ್ರಭು, ಸಾರ್ವಭೌಮ ಸ್ವಾಮಿ, ನೀನು, ನಮ್ಮ ಯೋಚನೆಯ ಕಟ್ಟಕಡೆಯ ಮಿತಿಯಾಗಿರುವಿ, ದೈವೀ ಅಜ್ಞಾತವಾದುದರ ಹೊಸ್ತಿಲದ ಹತ್ತಿರ ನಮಗಾಗಿ ನಿಂತಿರುವಿ, ಆ ಯೋಚನಾತೀತವಾದುದರಿಂದಲೂ ಹೆಚ್ಚು ಉಚ್ಚ–ವಾಗಿರುವ ಮತ್ತು ಹೆಚ್ಚು ಸಮಗ್ರವಾಗಿರುವ ಸಿದ್ಧಿ ಮೇಲೆದ್ದು ಬರುವಂತೆ ಮಾಡು, ಅದರಿಂದಾಗಿ ನಿನ್ನ ಕಾರ್ಯ ಸಿದ್ಧಿಸಿಕೊಳ್ಳುವಂತಾಗಲಿ, ಮತ್ತು ವಿಶ್ವ ಘನತೆವೆತ್ತ ತಾದಾತ್ಮ್ಯದತ್ತ ಮತ್ತು ಪರಮೋಚ್ಚ ದೈವೀ ಪ್ರಕಟಣೆಯತ್ತ ದೂರದಲ್ಲಿರುವ ಒಂದು ಹೆಜ್ಜೆಯತ್ತ ಸಾಗುವಂತಾಗಲಿ.



ಮತ್ತು ಈಗ ನನ್ನ ಲೆಕ್ಕಣಿಕೆ ಮೌನವಾಗಿದ್ದುಕೊಂಡಿದೆ, ನಾನು ನಿನ್ನನ್ನು ನಿಶ್ಚಲನೀರವತೆಯಲ್ಲಿ ಆರಾಧಿಸುವೆ.

**ಸಪ್ಟಂಬರ 30, 1914**

*

**ದೈವೀ ಪರಾಮಾತೆಯ ಭರವಸೆ**

ದೈವೀ ಪರಾಮಾತೆಯೆ, ನೀನು ನಮ್ಮೊಂದಿಗಿರುವಿ, ಪ್ರತಿದಿನ ನೀನು ನನಗೆ ನೆಚ್ಚಿಗೆ ನೀಡುತ್ತಿರುವಿ, ನಿನ್ನೊಡನೆ ನನ್ನನ್ನು ಹತ್ತಿರದಿಂದ ಗುರುತಿಸಿಕೊಳ್ಳುವಿಕೆ ಹೆಚ್ಚು ಹೆಚ್ಚಾಗಿ ಇಡಿಯಾಗಿರುವಂತೆ ಹಾಗೂ ಸತತವಿರುವಂತೆ ಬೆಳೆಯತೊಡಗಿದೆ, ಈ ಏಕತೆಯಿಂದ ನಾವು ವಿಶ್ವದ ದೈವೀ ಪ್ರಭುವಿನತ್ತ, ವಿಶ್ವದಾಚೆಗಿರುವ 'ತತ್'ದತ್ತ, ಹೊಸ ಪ್ರಕಾಶದತ್ತ ಭವ್ಯ ಅಭೀಪ್ಸೆಯೊಂದಿಗೆ ಹೊರಳುತ್ತೇವೆ. ಇಡೀ ಪೃಥ್ವಿ ರೋಗಗ್ರಸ್ತ ಮಗುವಿನ ಹಾಗೆ ನಮ್ಮ ತೋಳುಗಳಲ್ಲಿದೆ, ಅದಕ್ಕೆ ನಾವು ಚಿಕಿತ್ಸೆ ಒದಗಿಸಬೇಕಾಗಿದೆ, ಅದರ ದೌರ್ಬಲ್ಯದಿಂದಾಗಿಯೇ ಅದರ ಬಗ್ಗೆ ನಮ್ಮ ವಿಶೇಷ ಮಮತೆ ಇದೆ. ಸನಾತನ ಸಂಭೂತಿಗಳ (becomings) ತೊಟ್ಟಿಲಲ್ಲಿ ತೂಗುವಿಕೆಗೆ ಒಳಗಾದ ನಾವು ಆ ಸಂಭೂತಿಗಳೇ ಆಗಿದ್ದೇವೆ, ನಿಶ್ಚಲ ನೀರವತೆಯಲ್ಲಿರುವ ಸದ್ದಡಗಿದ ಹಾಗೂ ಸಂತೋಷವಿರುವ ಶಾಶ್ವತತೆ ಕುರಿತು ಚಿಂತನ ಮಾಡುತ್ತೇವೆ, ಅಲ್ಲಿ ಪರಿಪೂರ್ಣ ದೈವೀ ಪ್ರಜ್ಞೆ ಮತ್ತು ಬದಲಾಗದ ಅಸ್ತಿತ್ವ, ಆಚೆಗಿರುವ ಅಜ್ಞಾತ–ವಾದುದಕ್ಕೆ ಅದ್ಭುತ ದ್ವಾರ ಇವುಗಳಲ್ಲಿರುವ ಎಲ್ಲವನ್ನೂ ಸಿದ್ಧಿಸಿಕೊಳ್ಳಲಾಗಿದೆ.

ಆಗ ಪರದೆ ಹರಿಯುತ್ತದೆ, ಅಭಿವ್ಯಕ್ತಪಡಿಸಲಾಗದ ಮಹಿಮೆ ಅನಾವರಣ–ಗೊಳ್ಳುತ್ತದೆ, ಮತ್ತು ವರ್ಣನಾತೀತ ಭವ್ಯತೆಯೊಂದಿಗೆ ವ್ಯಾಪಿಸಿಕೊಳ್ಳುತ್ತದೆ, ಸಂತೋಷಕರ ವಾರ್ತೆಯನ್ನು ಜಗತ್ತಿಗೆ ತಂದುಕೊಡುವುದಕ್ಕಾಗಿ ಅದರತ್ತ ಹೊರಳುತ್ತೇವೆ.

**ಅಕ್ಟೋಬರ 14, 1914**

ಓ ದೈವೀ ಮಾತೆಯೆ, ಅಡೆತಡೆಗಳ ಮೇಲೆ ಜಯ ಸಾಧಿಸಲಾಗುವುದು, ಶತ್ರುಗಳನ್ನು ಸಮಾಧಾನ ಮಾಡಲಾಗುವುದು, ನಿನ್ನ ಸಾರ್ವಭೌಮ ಪ್ರೇಮ-ದೊಂದಿಗೆ ಇಡೀ ಪೃಥ್ವಿಯ ಮೇಲೆ ಪ್ರಾಬಲ್ಯ ಮೆರೆಸುವಿ ಮತ್ತು ನಿನ್ನ ಪ್ರಶಾಂತತೆ-ಯಿಂದ ಪ್ರತಿಯೊಂದು ಪ್ರಜ್ಞೆಯನ್ನು ಪ್ರಕಾಶಿತಗೊಳಿಸಲಾಗುವುದು.

ಇದು ನೀನಿತ್ತ ಭರವಸೆ.

**ಅಕ್ಟೋಬರ 17, 1914**

*

**ದೇಹದ ಪ್ರತಿಯೊಂದು ಅಣುವಿನಲ್ಲಿ ನೀನು ಮಾತ್ರ ಜೀವಿಸುತ್ತೀ**

ಬಹಳ ದೀರ್ಘಕಾಲದಿಂದ ನನ್ನ ಲೆಕ್ಕಣಿಕೆ (pen) ಮೌನದಿಂದ ಉಳಿದು-ಕೊಂಡಿದೆ... ಆದಾಗ್ಯೂ ನೀನು ನನಗೆ ಮರೆಯಲಾಗದ ಜ್ಞಾನೋದಯದ ಗಳಿಗೆಗಳನ್ನು ನೀಡಿರುವಿ, ಆ ಗಳಿಗೆಗಳಲ್ಲಿ ಅತ್ಯಂತ ದೈವಿಕವಾದ ಪ್ರಜ್ಞೆ ಮತ್ತು ಅತ್ಯಂತ ಪ್ರಾಪಂಚಿಕವಾದ ಪ್ರಜ್ಞೆ ಇವುಗಳ ನಡುವೆ ಏಕತೆ ಪರಿಪೂರ್ಣವಾಗಿ ಬೆಳೆಯಿತು, ಆ ಗಳಿಗೆಗಳಿದ್ದಾಗ ವಿಶ್ವಂಭರ ದೈವೀ ಮಾತೆಯೊಂದಿಗೆ ವ್ಯಕ್ತಿಗತ ಸತ್ತೆಯ ಗುರುತಿಸಿಕೊಳ್ಳುವಿಕೆ ಮತ್ತು ದೈವೀ ಪ್ರಭು, ನಿನ್ನೊಂದಿಗೆ ವಿಶ್ವಂಭರ ಮಾತೆಯ ಗುರುತಿಸಿಕೊಳ್ಳುವಿಕೆ ಎಷ್ಟೊಂದು ಸಂಪೂರ್ಣವಾಗಿತ್ತೆಂದರೆ ವ್ಯಕ್ತಿಗತ ಪ್ರಜ್ಞೆ ತನ್ನದೇ ಅಸ್ತಿತ್ವ, ಇಡೀ ವಿಶ್ವದ ಜೀವನ ಮತ್ತು ಎಲ್ಲ ಬದಲಾವಣೆಯಾಚೆಗೆ ಇರುವ ಶಾಶ್ವತತೆ ಇವೆಲ್ಲವುಗಳನ್ನು ಏಕಕಾಲಕ್ಕೆ ಗ್ರಹಿಸಿಕೊಳ್ಳಲು ಶಕ್ತವಾಯಿತು. ವರ್ಣನಾತೀತ ಮತ್ತು ಅನಂತ ಶಾಂತಿಯಲ್ಲಿ ಪರಮ ಸೌಖ್ಯ ತನ್ನ ಎತ್ತರದ ಮೇಲಿತ್ತು, ಪ್ರಜ್ಞೆ ಪ್ರಕಾಶಮಯವಾಗಿತ್ತು ಮತ್ತು ಅಳತೆ ಮೀರಿದ್ದಾಗಿತ್ತು, ಸಂಕೀರ್ಣ-ವಾಗಿತ್ತು, ಆದಾಗ್ಯೂ ಏಕೈಕವಾಗಿತ್ತು, ಅಸ್ತಿತ್ವ ಸರ್ವಸಮರ್ಥ ಹಾಗೂ ಮೃತ್ಯುವಿನ ಪ್ರಭುವಾಗಿತ್ತು. ಇದು ಇನ್ನು ಮುಂದೆ ಬೇಗ ಕಳೆದು ಹೋಗುವ ಸ್ಥಿತಿ-ಯಾಗಿರುವುದಿಲ್ಲ, ದೀರ್ಘಕಾಲ ಏಕಾಗ್ರತೆ ಕೈಕೊಂಡ ನಂತರ ಸಿದ್ಧಿಸಿಕೊಳ್ಳ-ಲಾಗುವಂತಹದು, ಜನ್ಮ ತಳೆದ ತತ್ಕ್ಷಣ ಕಳೆದು ಹೋಗುವಂತಹದಲ್ಲ, ಶಾಶ್ವತೆ-ಯಿಂದ ತುಂಬಿಕೊಂಡು ದೀರ್ಘ ಗಳಿಗೆಗಳ ಕಾಲ ಉಳಿದುಕೊಳ್ಳಬಲ್ಲದಾದುದು, ಅವು ಒಮ್ಮೆಗೆ ತತ್ಕ್ಷಣದವು ಹಾಗೂ ಕೊನೆಯಿಲ್ಲದವು ಆದ ಗಳಿಗೆಗಳು, ಸಂಕಲ್ಪಿಸಿದಾಗ ತಂದುಕೊಳ್ಳಬಹುದಾದ ಸ್ಥಿತಿ, ಎಂದರೆ ಅದು ಶಾಶ್ವತವಾದದ್ದು, ಅವಕಾಶ ಅನುವು ಮಾಡಿಕೊಟ್ಟ ತತ್ಕ್ಷಣ ಅತ್ಯಂತ ಬಾಹ್ಯ ಪ್ರಜ್ಞೆಯೊಂದಿಗೆ



ಸಂಪರ್ಕದಲ್ಲಿ ಬರುವಂತಹದು, ಅದು ಬಾಹ್ಯ ಪ್ರಜ್ಞೆ ಒಂದು ನಿಶ್ಚಿತ ಬೌದ್ಧಿಕ ಇಲ್ಲವೆ ಭೌತಿಕ ಕ್ರಿಯೆಯಲ್ಲಿ ಮಗ್ನವಾಗಿರದೆ ಇದ್ದಾಗ ಬರುವಂತಹ ಸ್ಥಿತಿ. ಎಲ್ಲ ಕಾರ್ಯದಲ್ಲಿ ಸತತ ನಿನ್ನ ಸ್ಥಿರ ಸ್ವರೂಪವಿರುವ ಸಾನ್ನಿಧ್ಯದ ಗ್ರಹಿಕೆಯಿರುತ್ತದೆ, ಆ ಸಾನ್ನಿಧ್ಯ ನಿನ್ನ ನಿರ್ವಾಣದ ಸ್ಥಿತಿ ಮತ್ತು ಸತ್ತೆಯಿರುವ ಸ್ಥಿತಿ ಇವೆರಡರ ದ್ವಿವಿಧ ರೂಪದಲ್ಲಿರುತ್ತದೆ, ಆದರೆ ಆ ಸಾನ್ನಿಧ್ಯ ಸೂಕ್ಷ್ಮ ಪರದೆಯೊಂದರ ಹಿಂದೆ ಇರುವ ಹಾಗಿರುತ್ತದೆ, ಆ ಪರದೆಯನ್ನು ಕೈಕೊಂಡ ಕಾರ್ಯದ ಮೇಲೆ ಅತ್ಯಗತ್ಯವಾದ ಏಕಾಗ್ರತೆಯಿಂದ ನೇಯ್ದು ಹಾಗಿರುತ್ತದೆ, ಅದು ಹಾಗಿರುವಾಗ ಏಕಾಂತವಿರುವ ಗಳಿಗೆಗಳಲ್ಲಿ ಸತ್ತೆ ಕೂಡಲೆ ಅದ್ಭುತವಾಗಿ ಸಾಮರ್ಥ್ಯಪೂರ್ಣವಾಗಿರುವ ವಾತಾವರಣದಿಂದ ಆವರಿಸಿಕೊಂಡಿರುತ್ತದೆ, ಆ ವಾತಾವರಣ ನಿರ್ಮಲ, ಸ್ಥಿರ ಹಾಗೂ ದೈವಿಕವಾಗಿರುತ್ತದೆ, ಸತ್ತೆ ಅದರಲ್ಲಿ ಮಗ್ನವಾಗಿ ಒರಗಿಕೊಂಡಿರುತ್ತದೆ, ಮತ್ತು ನಂತರ ಭವ್ಯತೆ ಇರುವ ಜೀವನ ತನ್ನ ಎಲ್ಲ ವೈಶಾಲ್ಯ, ಸಂಕೀರ್ಣತೆ ಹಾಗೂ ಘನತೆಗಳೊಂದಿಗೆ ಮತ್ತೆ ಪ್ರಾರಂಭವಾಗುತ್ತದೆ; ಭೌತಿಕ ದೇಹ ವೈಭವೋಪೇತ ಹಾಗೂ ನಮ್ಯವಾಗಿರುತ್ತದೆ, ಉತ್ಸಾಹ ಹಾಗೂ ಚೈತನ್ಯಗಳಿಂದ ಕೂಡಿರುತ್ತದೆ; ಮನಸ್ಸು ತನ್ನ ಸ್ಥಿರ ಸ್ಪಷ್ಟತೆಯಲ್ಲಿ ಅತ್ಯದ್ಭುತವಾಗಿ ಕ್ರಿಯಾಶೀಲವಾಗಿರುತ್ತದೆ, ಮಾರ್ಗದರ್ಶನ ಮಾಡುತ್ತಿರುತ್ತದೆ, ನಿನ್ನ ದೈವೀ ಸಂಕಲ್ಪದ ಶಕ್ತಿಗಳನ್ನು ಕಳಿಸಿ ಕೊಡುತ್ತಿರುತ್ತದೆ, ಮತ್ತು ಇಡೀ ಸತ್ತೆ ಕೊನೆರಹಿತ ಪರಮ ಸೌಖ್ಯದಲ್ಲಿ, ಮಿತಿರಹಿತ ಪ್ರೇಮದಲ್ಲಿ, ಸಾರ್ವಭೌಮ ಸಾಮರ್ಥ್ಯ ಹಾಗೂ ಪರಿಪೂರ್ಣ ಜ್ಞಾನ ಹಾಗೂ ಅನಂತ ಪ್ರಜ್ಞೆ ಇವೆಲ್ಲವುಗಳಲ್ಲಿ ಪರಮಾನಂದ ಪಡೆಯುತ್ತದೆ. ಅದು ನೀನೇ, ದೇಹದ್ರವ್ಯದ ಕನಿಷ್ಠ ಅಣುವಿನಲ್ಲಿಯೂ ಕೂಡ ನೀನೇ ಜೀವಿಸುತ್ತಿರುವಿ. ಹೀಗೆ ಪೃಥ್ವಿಯ ಮೇಲೆ ನೀನು ಕೈಕೊಳ್ಳಬೇಕಾದ ಕಾರ್ಯದ ಸುಭದ್ರ ತಳಹದಿಗಳನ್ನು ತಯಾರುಮಾಡಲಾಗಿದೆ, ಭವ್ಯ ಭವನದ ಅಡಿಕಟ್ಟಡದ ನಿರ್ಮಾಣವಾಗಿದೆ, ಜಗತ್ತಿನ ಪ್ರತಿಯೊಂದು ಮೂಲೆಯಲ್ಲಿ, ಪ್ರಜ್ಞಾಪೂರ್ಣ ಹಾಗೂ ರಚಿಸಲು ಸಹಾಯಕ-ವಾಗುವ ಯೋಚನೆಯ ಸಾಮರ್ಥ್ಯದಿಂದ, ದೈವೀ ಶಿಲೆಗಳಲ್ಲಿ ಒಂದನ್ನು ಇರಿಸ-ಲಾಗಿದೆ ಮತ್ತು ಈ ರೀತಿ ತಯಾರಾದ ಪೃಥ್ವಿ ನಿನ್ನ ಹೊಸ ಮತ್ತು ಹೆಚ್ಚು ಸಂಪೂರ್ಣವಾಗಿರುವ ಪ್ರಕಟಣೆಯ ಘನತೆವೆತ್ತ ದೇಗುಲವನ್ನು ಸ್ವೀಕರಿಸಲು ಸಿದ್ಧ-ವಾಗುವುದು.

**ನವ್ಹೆಂಬರ 3, 1914**

*

**ನೀನು ಎಲ್ಲ ಪ್ರತಿರೋಧದ ಮೇಲೆ ಜಯ ಸಾಧಿಸುವಿ**

ತಲುಪಬೇಕಾದ ಗುರಿ ಮಹತ್ವದ್ದಾದ ಒಂದು ಸಂಗತಿಯಾಗಿದೆ. ಅನುಸರಿ–ಸಬೇಕಾದ ಮಾರ್ಗ ಮಹತ್ವದ್ದಲ್ಲ, ಬಹಳಷ್ಟು ಸಲ ಅದನ್ನು ಮೊದಲೇ ತಿಳಿದುಕೊಳ್ಳದೆ ಇರುವುದು ಹೆಚ್ಚು ಯೋಗ್ಯವಾದದ್ದು. ಆದರೆ ಪೃಥ್ವಿಯ ಮೇಲೆ ದೈವೀ ಕ್ರಿಯೆಗೆ ಕಾಲ ನಿಜವಾಗಿ ಸನ್ನಿಹಿತವಾಗಿದೆಯೇ ಹಾಗೂ ಆಳಗಳಲ್ಲಿ ಕಲ್ಪನೆ ಮಾಡಿಕೊಂಡ ಕಾರ್ಯವನ್ನು ಸಿದ್ಧಿಸಿಕೊಳ್ಳಲಾಗುವುದೇ ಎಂಬುದನ್ನು ನಾವು ಅವಶ್ಯವಾಗಿ ತಿಳಿದುಕೊಳ್ಳಬೇಕು.

ಓ ದೈವೀ ಪ್ರಭು, ಇದನ್ನು ಕುರಿತು ನೀನು ಭರವಸೆ ನೀಡಿರುವಿ, ಆ ಭರವಸೆಯ ಜೊತೆಗೆ ಪ್ರಕೃತಿಯ ವಿಶ್ವಂಭರ ದೈವೀ ಪ್ರಜ್ಞೆ ಕೊಡಬಹುದಾದ ಅತ್ಯಂತ ಸಾಮರ್ಥ್ಯಪೂರ್ಣ ಭರವಸೆ ಇದೆ... ಹೀಗೆ ಕೈಕೊಳ್ಳಲೇಬೇಕಾದುದನ್ನು ಕೈಕೊಳ್ಳಲಾಗುವುದು ಮತ್ತು ನೈಜತೆಯಲ್ಲಿ, ಈ ವೈಭವೋಪೇತ ವಿಜಯದಲ್ಲಿ, ಈ ಹೊಸ ಪ್ರಕಟಣೆಯಲ್ಲಿ ಸಹಕರಿಸಲು ನಮ್ಮ ಸದ್ಯದ ವ್ಯಕ್ತಿಗತ ಸತ್ತೆಗಳಿಗೆ, ಕರೆಕೊಡ–ಲಾಗಿದೆ. ಇನ್ನೂ ಹೆಚ್ಚಿನದೇನನ್ನು ನಾವು ತಿಳಿದುಕೊಳ್ಳುವ ಆವಶ್ಯಕತೆ ಇದೆ? ಏನೂ ಇಲ್ಲ. ಹಾಗಾಗಿ ಭಯಾನಕ ಹೋರಾಟ, ವಿರೋಧಿ ಶಕ್ತಿಗಳ ಆಕ್ರಮಣ, ಇವು–ಗಳನ್ನು ಅತ್ಯಂತ ಗಾಢನಂಬಿಕೆಯಿಂದ ಸಾಕ್ಷಿಯಾಗಿ ನೋಡಬಹುದು, ಅವು, ತಿಳಿದುಕೊಳ್ಳದೆಯೇ, ಕೊನೆಗೆ ನಿನ್ನ ದೈವೀ ಯೋಜನೆಯ ಸಿದ್ಧಿಗೆ ಸೇವೆ ಸಲ್ಲಿಸು–ವವು. ತಳಮಳದ ಭಾವನೆಯನ್ನು ತಂದುಕೊಂಡರೆ ನಾವು ತಪ್ಪು ಮಾಡುವೆವು, ಏಕೆಂದರೆ ಅವು ನಿನ್ನ ಯೋಜನೆಗೆ ಹೇಗೆ ಸಹಾಯ ಸಲ್ಲಿಸುವವು, ಹಾಗೂ ಯಾವ ಸಾಧನದ ಮೂಲಕ ನೀನು ಅವುಗಳ ಪ್ರತಿರೋಧದ ಮೇಲೆ ಜಯಸಾಧಿಸುವಿ ಎಂಬುದರ ಬಗ್ಗೆ ತಿಳಿವಳಿಕೆಯನ್ನು ನಮಗೆ ಕೊಡಲಾಗಿಲ್ಲ, ಏಕೆಂದರೆ ನಿನ್ನ ವಿರುದ್ಧ ಮೇಲೆದ್ದು ಬಂದ ಪ್ರತಿಯೊಂದು ಅಡೆತಡೆಯ ಮೇಲೆ, ಪ್ರತಿಯೊಂದು ಕೆಟ್ಟ ಭಾವನೆಯ ಮೇಲೆ, ಪ್ರತಿಯೊಂದು ಹಗೆತನದ ಮೇಲೆ ನಿನ್ನ ವಿಜಯ ಎಷ್ಟೊಂದು ಪರಿಪೂರ್ಣವಾಗಿರುತ್ತದೆಂದರೆ, ಅದು ಇನ್ನೂ ಹೆಚ್ಚು ವಿಸ್ತಾರವಾದ ಮತ್ತು ಹೆಚ್ಚು ಸಂಪೂರ್ಣವಾದ ಜಯ ತಂದು ಕೊಡುವ ಭರವಸೆ ನೀಡುತ್ತದೆ. ನಿನ್ನ ಪರಿಶುದ್ಧ ಶಕ್ತಿಗಳ ಮಧ್ಯದಿಂದ ಬರುವ ಯಾವುದಕ್ಕೆ ಪೃಥ್ವಿಯ ಮೇಲೆ ಪ್ರಕಟಣೆಗಾಗಿ ಬರಲಿರುವ ಕ್ರಿಯೆಗೆ ನೀನು ಆಸ್ಪದ ಕೊಡಲಿರುವೆಯೋ ಅದನ್ನು ಪ್ರತಿರೋಧಗಳ ಮೊತ್ತದಿಂದ ಮನುಷ್ಯ ಕಂಡುಹಿಡಿಯಬಹುದು. ಯಾವುದರ ಮೇಲೆ ಕ್ರಿಯೆ



ಕೈಕೊಳ್ಳುವ ಶಕ್ತಿಗಳ ಮಣಿಹವಿರುತ್ತದೆಯೋ ಅದರ ಮೇಲೆ ವಿರೋಧವಿರುತ್ತದೆ, ಅದು ಅಂಧಕಾರವಿರುವ ದ್ವೇಷವಾಗಿದ್ದು ಅದನ್ನು ಸ್ಪರ್ಶಿಸಬೇಕಾಗುತ್ತದೆ ಮತ್ತು ಪ್ರಕಾಶಮಯ ಶಾಂತಿಯಾಗುವಂತೆ ಪರಿವರ್ತನೆಗೆ ಒಳಪಡಿಸಬೇಕಾಗುತ್ತದೆ.

ನಿನ್ನ ಕ್ರಿಯೆಯ ಕೇಂದ್ರವೆಂದು ಮತ್ತು ನಿನ್ನ ಮಧ್ಯವರ್ತಿಯೆಂದು ನೀನು ಆಯ್ದುಕೊಂಡ ಮಾನವ ವ್ಯಕ್ತಿ ಕೆಲವೇ ಅಡೆತಡೆಗಳನ್ನು, ತಪ್ಪುತಿಳಿವಳಿಕೆಗಳನ್ನು, ಚಿಕ್ಕ ದ್ವೇಷವನ್ನು ಎದುರಿಸಿದರೆ ಅದರರ್ಥ ನೀನು ಅವನಿಗೆ ಗಾಢವಾಗಿರದ ಸೀಮಿತ ಮಣಿಹವನ್ನು ಒಪ್ಪಿಸಿರುವಿ ಎಂದಾಗುತ್ತದೆ. ಅವನು ಈಗಾಗಲೆ ತಯಾರು ಮಾಡಲಾದ ಸದ್ಭಾವನೆಯುಳ್ಳ ಜನರ ಚಿಕ್ಕ ವೃತ್ತದಲ್ಲಿ ಕಾರ್ಯಕೈಕೊಳ್ಳುತ್ತಾನೆ, ಪೃಥ್ವಿಯ ಮೇಲಿನ ದ್ರವ್ಯದಿಂದ ಅಸ್ತವ್ಯಸ್ತತೆಗೊಳಗಾದ ಮತ್ತು ಗೊಂದಲಕ್ಕೀಡಾದ ಜನರ ಗುಂಪಿನ ಮೇಲಲ್ಲ.

ಓ ದೈವೀ ಪ್ರಭು, ನೀನು ನನಗೆ ಕೊಟ್ಟಿರುವ ಈ ಜ್ಞಾನವನ್ನು ಎಲ್ಲರೂ ಹಂಚಿಕೊಳ್ಳುವಂತಾಗಲಿ, ಅದರಿಂದಾಗಿ ನಮ್ಮ ಹೃದಯಗಳಲ್ಲಿ ಮನವರಿಕೆಯಿಂ–ದಾದ ಶಾಂತಿ ಆಳಿಕೆ ನಡೆಸುವಂತಾಗಲಿ ಮತ್ತು ನಿನ್ನ ಸಾರ್ವಭೌಮ ನಿಶ್ಚಿತತೆಯ ಸ್ಥಿರತೆಯಲ್ಲಿ, ತಲೆಯನ್ನು ಎತ್ತಿ ಹಿಡಿದು, ರೂಪಪರಿವರ್ತನೆಗೆ ಅಪ್ರಜ್ಞೆಯಿಂದ ಆಕರ್ಷಿತವಾಗಿ, ರೂಪಪರಿವರ್ತನೆಗೊಳಿಸುವ ದೈವೀ ಪ್ರೇಮವನ್ನು ನಾಶಮಾಡು–ವೆನೆಂದು ನಂಬಿ ಕುರುಡು ಅಜ್ಞಾನದಲ್ಲಿ ಅವಿಚಾರದಿಂದ ಮುಳುಗು ಹಾಕುತ್ತಿರು–ವುದನ್ನು ಎದುರಿಸೋಣ.

**ನವ್ಹೆಂಬರ 15, 1914**

*

**ಘನತೆವೆತ್ತ ಪರಾಮಾತೆಯೆ, ನಿನ್ನ ತಾಳ್ಮೆ ಅದೆಷ್ಟು ಭವ್ಯವಾಗಿದೆ**

ಅಯ್ಯೋ, ಘನತೆವೆತ್ತ ಪರಾಮಾತೆಯೆ, ನಿನ್ನ ತಾಳ್ಮೆ ಅದೆಷ್ಟು ಭವ್ಯ–ವಾಗಿರಬೇಕು?

ದೋಷಗಳನ್ನು ಸರಿಪಡಿಸಲು, ತನ್ನದೇ ಜ್ಞಾನದ ಭ್ರಮೆಯಿಂದ ತಪ್ಪು ದಾರಿ ಹಿಡಿದ ವ್ಯಕ್ತಿಯ ಪ್ರಗತಿಯನ್ನು ತ್ವರಿತಗೊಳಿಸುವುದಕ್ಕೆ, ಅವನಿಗಾಗಿ ನಿಶ್ಚಿತ ಮಾರ್ಗ–ವನ್ನು ಗುರುತಿಸಿ ಅದರ ಮೇಲೆ ಎಡವದೆ ಏಕಪ್ರಕಾರವಾಗಿ ನಡೆಯುವಂತೆ ಬಲ

ನೀಡಲು ನಿನ್ನ ದೈವೀ ಪ್ರಜ್ಞಾಪೂರ್ಣ ಸಂಕಲ್ಪ ಪ್ರಯತ್ನ ಮಾಡಿದ ಪ್ರತಿಸಲ, ಅವನು, ಯಾವಾಗಲೂ, ನಿನ್ನನ್ನು ದಣಿವನ್ನುಂಟು ಮಾಡುವ ಹಾಗೂ ಸಮೀಪ ದೃಷ್ಟಿಯ ಬೋಧಕಳೆಂದು ದೂರ ಸರಿಸುತ್ತಾನೆ. ಸೈದ್ಧಾಂತಿಕವಾಗಿ ನಿನಗೆ ಅವನು ತನ್ನ ಪ್ರೇಮವನ್ನು ತೋರಿಸುತ್ತಾನೆ, ಆ ಪ್ರೇಮ ಅಸ್ಪಷ್ಟ ಹಾಗೂ ಅಸಂಮಜಸ–ವಾಗಿರುತ್ತದೆ, ಆದರೆ ಗರ್ವದಿಂದ ಕೂಡಿದ ಮನಸ್ಸು ನಿನ್ನಲ್ಲಿ ಗಾಢನಂಬಿಕೆ ಇರಿಸುವುದನ್ನು ತಿರಸ್ಕರಿಸುತ್ತದೆ, ನಿನ್ನಿಂದ ಮಾರ್ಗದರ್ಶನ ಪಡೆದು ಮುನ್ನಡೆ ಸಾಧಿಸುವುದಕ್ಕಿಂತ ಹೆಚ್ಚಾಗಿ ತಾನೇ ಅಲ್ಲಲ್ಲಿ ಅಲೆದಾಡುವುದನ್ನು ಇಷ್ಟಪಡುತ್ತದೆ.

ಎಂದೆಂದಿಗೂ ಮುಗುಳ್ನಗುತ್ತಿರುವ ನೀನು ನಿನ್ನ ದಣಿವರಿಯದ ದಯಾ–ಪರತೆಯಿಂದ ಉತ್ತರ ನೀಡುತ್ತೀ: "ಮನುಷ್ಯನನ್ನು ಗರ್ವಿಷ್ಠನನ್ನಾಗಿ ಮಾಡುವ ಮತ್ತು ದೋಷಪೂರಿತವಾದುದರಲ್ಲಿ ಕರೆದೊಯ್ಯುವ ಈ ಬೌದ್ಧಿಕ ಸಾಮರ್ಥ್ಯವೇ ಒಮ್ಮೆ ಜ್ಞಾನೋದಯ ಪಡೆದಾಗ ಹಾಗೂ ಪರಿಶುದ್ಧವಾದಾಗ ವಿಶ್ವಂಭರ ಪ್ರಕೃತಿ–ಗಿಂತ ಹೆಚ್ಚು ದೂರ, ದೈವೀ ಪ್ರಭುವಿನೊಂದಿಗೆ ನೇರ ಹಾಗೂ ಪ್ರಜ್ಞಾಪೂರ್ಣ ಸಂಸರ್ಗದತ್ತ, ಎಲ್ಲ ಪ್ರಕಟಣೆಯಾಚೆಗೆ ಇರುವುದರತ್ತ ಕರೆದೊಯ್ಯಬಲ್ಲದು. ನನ್ನಿಂದ ಬೇರೆಯಾಗಿ ನಿಲ್ಲುವಂತೆ ಮಾಡುವ ಈ ವಿಭಜನೆಗೆ ಒಳಪಡಿಸುವ ಬುದ್ಧಿ ಮತ್ತೆಯೇ ಅವನು ಏರಿಹೋಗಬೇಕಾದ ಎತ್ತರಗಳ ಮೇಲೆ ಏರಿಹೋಗಲು ಶಕ್ತ–ನಾಗುವಂತೆ ಮಾಡುವುದು, ಅದು ವಿಶ್ವದ ಇಡಿಯಾಗಿರುವಿಕೆಯಿಂದ ಸಂಕೋಲೆಗೆ ಸಿಕ್ಕಿ ಹಾಕಿಕೊಳ್ಳುವಿಕೆಗೆ ಹಾಗೂ ತಡೆಗೆ ಒಳಗಾಗುವಿಕೆಗೆ ಅನುವು ಮಾಡಿಕೊಡು–ವುದಿಲ್ಲ, ವಿಶ್ವ ಅದರ ಭವ್ಯತೆ ಮತ್ತು ಸಂಕೀರ್ಣತೆಗಳಿಂದಾಗಿ ಅಷ್ಟು ತೀವ್ರಗತಿಯ ಆರೋಹಣ ಪರಿಣಾಮಕಾರಿಯಾಗುವಂತೆ ಮಾಡುವುದಿಲ್ಲ."

ಓ ದೈವೀ ಪರಾಮಾತೆಯೆ, ಯಾವಾಗಲೂ ನಿನ್ನ ದೈವೀ ಶಬ್ದ ಸಮಾಧಾನ ನೀಡುತ್ತದೆ, ಆಶೀರ್ವದಿಸುತ್ತದೆ, ಸ್ಥಿರಗೊಳಿಸುತ್ತದೆ ಮತ್ತು ಪ್ರಕಾಶ ನೀಡುತ್ತದೆ, ಮತ್ತು ನಿನ್ನ ಉದಾರ ಹಸ್ತ ಅನಂತ ಜ್ಞಾನವನ್ನು ಅಡಗಿಸಿಟ್ಟಿರುವ ಪರದೆಯ ಪದರೊಂದನ್ನು ಮೇಲಕ್ಕೆತ್ತುತ್ತದೆ.

ನಿನ್ನನ್ನು ಕುರಿತಾದ ಪರಿಪೂರ್ಣ ಚಿಂತನದ ಭವ್ಯತೆ ಎಷ್ಟೊಂದು ಸ್ಥಿರ, ಉದಾರ ಮತ್ತು ಪರಿಶುದ್ಧವಾಗಿದೆ!

**ನವ್ಹೆಂಬರ 17, 1914**

*



**ದೈವೀ ಪ್ರಭುವಿನ ಮುಂದೆ ಸಂಪೂರ್ಣ ಖಾಲಿ ಪುಟದಂತಾಗುವುದು**

ಓಹ್, ದೈವೀ ಪ್ರಭು, ನಾನು ಯಾವಾಗಲೂ ನಿನ್ನೆದುರು ಸಂಪೂರ್ಣವಾಗಿ ಖಾಲಿ ಪುಟದಂತಾಗುವೆ, ಅದರಿಂದಾಗಿ ನನ್ನಲ್ಲಿ ನಿನ್ನ ಸಂಕಲ್ಪವನ್ನು ಮಿಶ್ರಣ–ಕ್ಕೊಳಪಡಿಸದೆ ಇಲ್ಲವೆ ತೊಂದರೆಯನ್ನುಂಟು ಮಾಡದೆ ಬರೆದಿಡುವಂತಾಗುವುದು.

ಗತಕಾಲದ ಅನುಭವದ ನೆನಪನ್ನೇ ಯೋಚನೆಯಿಂದ ತೊಡೆದು ಹಾಕಬೇಕು, ಅದರಿಂದಾಗಿ ನಿರಂತರ ಪುನರ್ರಚನೆಯ ಕಾರ್ಯಕ್ಕೆ ಅಡೆತಡೆ ಉಂಟಾಗುವುದಿಲ್ಲ, ಆ ಪುನರ್ರಚನೆಯೇ ಸಾಪೇಕ್ಷತೆಗಳಿರುವ ಜಗತ್ತಿನಲ್ಲಿ ನಿನ್ನ ಪರಿಪೂರ್ಣ ಪ್ರಕಟಣೆಗೆ ಅನುಮತಿ ನೀಡುವುದು.

ಬಹಳಷ್ಟು ಸಲ, ಮನುಷ್ಯ ಹಿಂದೆ ಇದ್ದುದಕ್ಕೆ ಅಂಟಿಕೊಳ್ಳುತ್ತಾನೆ, ಮೌಲ್ಯವುಳ್ಳ ಅನುಭವದ ಪರಿಣಾಮವನ್ನು ಕಳೆದುಕೊಳ್ಳುವ ಭಯವಿರುತ್ತದೆ, ವಿಶಾಲ ಹಾಗೂ ಉಚ್ಚ ಮಟ್ಟದ ಪ್ರಜ್ಞೆಯನ್ನು ಬಿಟ್ಟುಕೊಡುವುದಿರುತ್ತದೆ, ನಿಮ್ನ ಸ್ಥಿತಿಯಲ್ಲಿ ಹಿಂದೆ ಬಿದ್ದು ಬಿಡುವುದಿರುತ್ತದೆ.

ಆದಾಗ್ಯೂ ನಿನ್ನವನಾದ ಅವನು ಯಾವುದಕ್ಕಾಗಿ ಭಯಪಡಬೇಕು? ನೀನು ಅವನಿಗಾಗಿ ಗುರುತಿಸಿಕೊಟ್ಟ ಮಾರ್ಗ(ಅದೇನೇ ಇರಲಿ)ದ ಮೇಲೆ ಸಂತೋಷ–ವಿರುವ ಆತ್ಮ ಮತ್ತು ಪ್ರಕಾಶಿತ ಹುಬ್ಬುಗಳು ಇವುಗಳೊಡನೆ ನಡೆದುಹೋಗಬಲ್ಲ–ನಲ್ಲವೆ?, ಆ ಮಾರ್ಗ ಅವನ ಸೀಮಿತ ತರ್ಕಕ್ಕೆ ಗ್ರಹಿಸಲಾರದಂತಹದು ಆಗಿರಬಹುದು.

ಓ ದೈವೀ ಪ್ರಭು, ಯೋಚನೆಯ ಹಳೆಯ ಚೌಕಟ್ಟುಗಳನ್ನು ಮುರಿದು ಹಾಕು, ಗತಕಾಲದ ಅನುಭವಗಳನ್ನು ಅಳಿಸಿಹಾಕು, ನಿನಗೆ ಅವಶ್ಯವೆನಿಸಿದರೆ ಪ್ರಜ್ಞಾಪೂರ್ಣ ಸಮನ್ವಯವನ್ನು ಕರಗಿಸಿಬಿಡು, ಅದರಿಂದಾಗಿ ನಿನ್ನ ಕಾರ್ಯ ಹೆಚ್ಚು ಒಳ್ಳೆಯ ರೀತಿಯಲ್ಲಿ ಸಿದ್ಧಿಯನ್ನು ಕಂಡುಕೊಳ್ಳುವಂತಾಗುವುದು ಪೃಥ್ವಿಯ ಮೇಲಿನ ನಿನ್ನ ಸೇವೆ ಪರಿಪೂರ್ಣವಾಗುವುದು.

**ನವ್ಹೆಂಬರ 20, 1914**

*

## ಆಶೀರ್ವಾದ ನೀಡುವ ಮುದ್ರೆಯಲ್ಲಿರುವ ಶ್ರೀಮಾತೆಯವರ ಫೋಟೋ



*

ಓ ದೈವೀ ಪ್ರಭು, ನೀನು ನನಗೆ ದೈವೀ ಸಾಮರ್ಥ್ಯವನ್ನು ನೀಡಿರುವಿ, ಅದರಿಂದಾಗಿ ನಿನ್ನ ದೈವೀ ಶಾಂತಿ ಮತ್ತು ದೈವೀ ಸಂತೋಷ ಜಗತ್ತಿನ ಮೇಲೆ ಆಳಿಕೆ ನಡೆಸುವಂತಾಗುವುದು.

ಮತ್ತು ಈ ಸತ್ತೆ ಈಗ ಇಡೀ ಪೃಥ್ವಿಯನ್ನು ಆವರಿಸಿಕೊಂಡಿರುವ ಶಾಂತಿಯ ಅಪ್ಪುಗೆ, ಎಲ್ಲ ವಸ್ತು–ವಿಷಯಗಳ ಮಧ್ಯೆ ನುಗ್ಗುವ ಸಂತೋಷದ ಸಮುದ್ರ.

ಓ ದ್ವೇಷದಿಂದ ತುಂಬಿಕೊಂಡಿರುವ ಓ ನೀವು, ಉಸುಕಿನ ಮೇಲಿರುವ ಗುರುತನ್ನು ಸಮುದ್ರ ಅಳಿಸಿ ಹಾಕುವ ಹಾಗೆ ನಿಮ್ಮ ಹೃದಯಗಳಿಂದ ದ್ವೇಷ ಸಾಧನೆಯನ್ನು ಅಳಿಸಿಹಾಕಲಾಗುವುದು. ಸೇಡಿನಿಂದ ಪೋಷಿತರಾದ ಓ ನೀವು, ತಾಯಿ ತೂಗಿದ ಮಗುವಿನ ಆತ್ಮದಲ್ಲಿ ಶಾಂತಿ ಸಾಗಿ ಹೋಗುವ ಹಾಗೆ, ನಿಮ್ಮ ಹೃದಯಗಳಲ್ಲಿ ಶಾಂತಿ ಸಾಗಿ ಹೋಗುವುದು.

ಏಕೆಂದರೆ ದೈವೀ ಮತ್ತು ವಿಶ್ವಂಭರ ಮಾತೆ ತನ್ನ ನೆಟ್ಟನೋಟವನ್ನು ಪೃಥ್ವಿಯ ಮೇಲೆ ಹೊರಳಿಸಿದ್ದಾಳೆ ಮತ್ತು ಅದನ್ನು ಆಶೀರ್ವದಿಸಿದ್ದಾಳೆ.

**ನವ್ಹೆಂಬರ 21, 1914**

*



## ದೈವೀ ಪರಾಮಾತೆಯ ತ್ಯಾಗ

... ಈ ಭಾರವಾದ ಹಾಗೂ ಮಬ್ಬಾದ ಭೌತದ್ರವ್ಯದ ಹೃದಯದಿಂದ ದೈವೀ ಪ್ರೇಮ ಮತ್ತು ದೈವೀ ಪ್ರಕಾಶ ಸ್ಫೋಟಿಸಿ ಹೊರಬರುವಂತೆ ಅವುಗಳ ಜ್ವಾಲಾಮುಖಿಯನ್ನು ನಾನು ಮಾಡಲಿ ಎಂದು ನೀನು ಬಯಸಿರುವಿ. ಭಾಷೆಯ ಹಳೆಯ ಸಂಪ್ರದಾಯಗಳನ್ನೆಲ್ಲ ಮುರಿದು ಹಾಕಿ ನಿನ್ನನ್ನು ಅಭಿವ್ಯಕ್ತಗೊಳಿಸುವ, ಹಿಂದೆಂದೂ ಕೇಳಿರದ, ದೈವೀ ಶಬ್ದ ಮೇಲೆದ್ದು ಬರಲಿ ಎಂದು ನೀನು ಬಯಸಿರುವಿ. ಕೆಳಸ್ತರದಲ್ಲಿರುವ ಅತ್ಯಂತ ಚಿಕ್ಕ ವಸ್ತು–ವಿಷಯಗಳು ಮತ್ತು ಮೇಲ್ಗಡೆಗಿರುವ ಅತ್ಯಂತ ವಿಶಾಲ ಹಾಗೂ ಘನತೆವೆತ್ತ ವಸ್ತು–ವಿಷಯಗಳು ಇವುಗಳ ನಡುವೆ ಏಕತೆ ಸಮಗ್ರವಾಗಲಿ ಎಂದು ನೀನು ಸಂಕಲ್ಪಿಸಿರುವಿ, ಆ ಕಾರಣದಿಂದಾಗಿಯೆ, ಓ ದೈವೀ ಪ್ರಭು, ಎಲ್ಲ ಧಾರ್ಮಿಕ ಸಂತೋಷ, ಆಧ್ಯಾತ್ಮಿಕ ದಿವ್ಯಾನಂದ ಇವುಗಳನ್ನು ನನ್ನಿಂದ ಕಡಿದು ಹಾಕಿ, ಪ್ರತ್ಯೇಕವಾಗಿ ಕೇವಲ ನಿನ್ನ ಮೇಲೆ ಏಕಾಗ್ರತೆಯಲ್ಲಿ ಇರಬಹುದಾದ ನನ್ನ ಸ್ವಾತಂತ್ರ್ಯವನ್ನು ಕಿತ್ತುಕೊಂಡು ನನಗೆ ಹೇಳುತ್ತೀ: "ಸಾಮಾನ್ಯ ಜನರ ಮಧ್ಯದಲ್ಲಿ ಸಾಮಾನ್ಯ ಮನುಷ್ಯಳಂತೆ ಕಾರ್ಯ ಮಾಡು, ಪ್ರಕಟಪಡಿಸುತ್ತಿರುವ ಎಲ್ಲದರಲ್ಲಿ ಅವರಿಗಿಂತ ಹೆಚ್ಚಿನವಳಾಗಿರಲು ಬಯಸದೆ ಇರುವುದನ್ನು ಕಲಿತುಕೋ, ಅವರ ಜೀವನದ ಎಲ್ಲ ರೀತಿಗಳಲ್ಲಿ ಭಾಗವಹಿಸು; ಏಕೆಂದರೆ ಅವರು ತಿಳಿದುಕೊಂಡಿರುವ, ಅವರಿರುವ ಎಲ್ಲದರಾಚೆಗೆ, ಸನಾತನ ಭವ್ಯತೆಯಿರುವ, ಮಿಣುಕದ ದೀವಟಿಗೆಯೊಂದನ್ನು ನಿನ್ನಲ್ಲಿ ಕೊಂಡೊ–ಯ್ಯುತ್ತಿರುವಿ, ಮತ್ತು ಅವರೊಡನೆ ಸಹಕರಿಸುತ್ತ ಇದನ್ನೇ ನೀನು ಅವರ ಮಧ್ಯೆ ತರಲಿರುವಿ. ನಿನ್ನಿಂದ ಹೊರಸೂಸುತ್ತಿರುವ ಈ ಪ್ರಕಾಶದ ಸಂತೋಷ ಪಡೆಯುವ ಆವಶ್ಯಕತೆ ನಿನಗಿದೆಯೆ? ನನ್ನ ದೈವೀ ಪ್ರೇಮವನ್ನು ಕೊಡುತ್ತಿರುವವರೆಗೆ ನಿನ್ನಲ್ಲಿ ಆ ಪ್ರೇಮದ ಕಂಪನದ ಬಗ್ಗೆ ಭಾವನೆ ತಂದುಕೊಳ್ಳುವ ಆವಶ್ಯಕತೆ ಇದೆಯೆ? ನನ್ನ ದೈವೀ ಸಾನ್ನಿಧ್ಯದ ಅರಿವನ್ನು ಎಲ್ಲರಿಗೆ ತಂದುಕೊಡುತ್ತಿರುವವರೆಗೆ ಆ ಸಾನ್ನಿಧ್ಯದ ಸಂತೋಷದ ಸ್ವಾದವನ್ನು ನೀನು ಕಂಡುಕೊಳ್ಳಬೇಕಾಗಿದೆಯೆ?"

ಓ ದೈವೀ ಪ್ರಭು, ನಿನ್ನ ಸಂಕಲ್ಪವಿದ್ದಂತೆ ಆಗಲಿ–ಸಮಗ್ರವಾಗಿ ಕೈಗೂಡಲಿ. ಅದು ನನ್ನ ಸಂತೋಷ ಹಾಗೂ ಕಾರ್ಯ ನಡೆಸುವ ನಿಯಮ.

**ಜನವರಿ 11, 1915**

*

**ಎಲ್ಲ ವಸ್ತು–ವಿಷಯಗಳಲ್ಲಿ ಹಾಗೂ ಎಲ್ಲೆಡೆಯಲ್ಲಿ ಈ ಪ್ರೇಮವಾಗಿರು (ಕಳೆದ ದಿನ ಸಾಯಂಕಾಲ ನಾನು ನಿಶ್ಚಲನೀರವತೆಯಲ್ಲಿ ಕೇಳಿಸಿಕೊಂಡದ್ದರ ಟಿಪ್ಪಣಿ)**

“ವಿವೇಕ ಹಾಗೂ ಪ್ರಜ್ಞೆ ಇವುಗಳ ಜೊತೆಗೆ ಪ್ರತಿಯೊಂದನ್ನು ತ್ಯಾಗ ಮಾಡುವುದರ ಮೂಲಕ ನಿನ್ನ ಹೃದಯಕ್ಕೆ ಒಪ್ಪಿಸಿದ ಪಾತ್ರ ವಹಿಸಲು ನೀನು ಶಕ್ತಳಾಗಿದ್ದೀ. ತೋರಿಕೆಗೆ ಅದು ಪ್ರತಿಫಲ ನೀಡದ ಪಾತ್ರ, ಎಲ್ಲರಿಗೂ ಸಮೃದ್ಧವಾಗಿ ನೀರು ಹರಿಸಿಕೊಡುವ ಕಾರಂಜಿಯಂತಹದರ ಪಾತ್ರ, ಆ ಕಾರಂಜಿಯತ್ತ ಯಾವ ನೀರೂ ಮರಳಿ ಹರಿದು ಹೋಗುವುದಿಲ್ಲ, ಅದು ಬರಿದಾಗಿ ಹೋಗದ ಬಲವನ್ನು ಆಳಗಳಿಂದ ತೆಗೆದುಕೊಳ್ಳುತ್ತದೆ ಮತ್ತು ಹೊರಗಿನಿಂದ ಏನನ್ನೂ ನಿರೀಕ್ಷಿಸುವುದಿಲ್ಲ. ಬರಿದಾಗಿ ಹೋಗದ ಪ್ರೇಮದ ವಿಸ್ತಾರದೊಂದಿಗಿರುವ ಘನತೆವೆತ್ತ, ದಿವ್ಯಾನಂದದ ಭಾವನೆ ನಿನಗೆ ಈಗಾಗಲೆ ಬಂದಿರಬಹುದು, ಏಕೆಂದರೆ ಪ್ರೇಮಕ್ಕೆ ಪ್ರೇಮವಷ್ಟೇ ಸಾಕಾಗುತ್ತದೆ, ಅದಕ್ಕೆ ಯಾವ ಪರಸ್ಪರತೆಯ ಆವಶ್ಯಕತೆ ಇರುವುದಿಲ್ಲ; ಇದು ವ್ಯಕ್ತಿಗತ ಪ್ರೇಮಕ್ಕೂ ನಿಜವಾಗಿರುತ್ತದೆ. ಹಾಗಾಗಿ ಅನಂತವನ್ನು ಇಷ್ಟೊಂದು ಉದಾರವಾಗಿ ಪ್ರತಿಫಲಿಸುವ ದೈವೀ ಪ್ರೇಮ ಕುರಿತು ಇದು ಇನ್ನೂ ಹೆಚ್ಚು ಸತ್ಯವಾಗಿದೆಯಲ್ಲವೆ?

“ಎಲ್ಲ ವಸ್ತು–ವಿಷಯಗಳಲ್ಲಿ ಮತ್ತು ಎಲ್ಲೆಡೆಯಲ್ಲಿಯೂ ಈ ಪ್ರೇಮವಾಗಿರು, ಎಂದೆಂದಿಗೂ ಇನ್ನೂ ಹೆಚ್ಚು ವಿಸ್ತಾರವಾಗಿ, ಇನ್ನೂ ಹೆಚ್ಚು ಗಾಢವಾಗಿ ಆ ಪ್ರೇಮ ಸ್ವರೂಪಳಾಗಿರು ಮತ್ತು ಇಡೀ ಜಗತ್ತು, ಒಂದೇ ಕಾಲಕ್ಕೆ, ನಿನ್ನ ಕಾರ್ಯ–ಸ್ವರೂಪದ್ದು, ಸಂಪತ್ತಿನದು, ನಿನ್ನ ಕಾರ್ಯದ ಹಾಗೂ ವಿಜಯದ ಕ್ಷೇತ್ರದ್ದಾ–ಗುವುದು. ಕೊನೆಯ ಮಿತಿಗಳನ್ನು ಮುರಿದು ಹಾಕಲು ಪಟ್ಟುಹಿಡಿದು ಹೋರಾಡು, ಅವು ಸತ್ತೆಯ ಎದುರು ಕೇವಲ ದುರ್ಬಲ ಅಡೆತಡೆಗಳಾಗಿರುತ್ತವೆ, ಈಗಾಗಲೆ ಜ್ಞಾನೋದಯವನ್ನು ಉಂಟುಮಾಡುವ ದೈವೀ ಸಾಮರ್ಥ್ಯದಿಂದ ಪ್ರಕಾಶಿತ–ಗೊಳಿಸಲಾದ ಕೊನೆಯ ಮಬ್ಬುತನಗಳ ಮೇಲೆ ಜಯ ಸಾಧಿಸಲು ಹೋರಾಡು.

ಗೆದ್ದು ವಿಜಯಿಯಾಗಲು ಹೋರಾಡು, ಹೊಸ ದೈವೀ ಪ್ರಕಾಶ ಪುಟಿದೆದ್ದು ಮುಂದೆ ಬರಲು, ಜಗತ್ತಿಗೆ ಅವಶ್ಯವಾಗಿರುವ ಹೊಸ ಉದಾಹರಣೆ ಕೊಡುವು–ದಕ್ಕಾಗಿ ಇಂದಿನವರೆಗೆ ಇದ್ದ ಪ್ರತಿಯೊಂದರ ಮೇಲೆ ಜಯ ಸಾಧಿಸು. ಆಂತರಿಕ



ಹಾಗೂ ಬಾಹ್ಯ ಹೀಗೆ ಎಲ್ಲ ಅಡೆತಡೆಗಳ ವಿರುದ್ಧ ಮೊಂಡುತನದಿಂದ ಹೋರಾಡು. ಅದು ನಿನ್ನ ಸಿದ್ಧಿಗಾಗಿ ನೀಡಿದ ಅಮೂಲ್ಯ ಮುತ್ತು (pearl)”

**ಡಿಸೆಂಬರ 25, 1916**

*

**ಸಮಗ್ರ ಮತ್ತು ಸಂಪೂರ್ಣ ಸ್ವ–ಅರ್ಪಣೆಯ ಮಾರ್ಗ**

ಮನುಷ್ಯ ತನ್ನ ಜೀವನವನ್ನು ಹಾಗೆಯೇ ತನ್ನ ಮೃತ್ಯುವನ್ನು, ತನ್ನ ಸುಖವನ್ನು ಹಾಗೂ ವೇದನೆಯನ್ನು ಹೇಗೆ ಅರ್ಪಿಸಬೇಕೆಂಬುದನ್ನು, ಪ್ರತಿಯೊಂದಕ್ಕಾಗಿ ಮತ್ತು ಎಲ್ಲ ವಸ್ತು–ವಿಷಯಗಳಲ್ಲಿ ನಮ್ಮ ಸಿದ್ಧಿಯ ಎಲ್ಲ ಸಾಧ್ಯತೆಗಳ ದೈವೀ ವಿತರಕನ ಮೇಲೆ ಹೇಗೆ ಅವಲಂಬಿಸಿರಬೇಕು ಎಂಬುದನ್ನು ತಿಳಿದುಕೊಂಡಿರಬೇಕು, ಅವನು ಮಾತ್ರ ನಾವು ಸಂತೋಷದಿಂದ ಇರಬೇಕೋ, ಇರಬಾರದೋ, ಜೀವಿಸಬೇಕೋ ಜೀವಿಸಬಾರದೋ, ಸಿದ್ಧಿಯಲ್ಲಿ ಭಾಗವಹಿಸಬೇಕೋ ಬೇಡವೋ ಎಂಬುದನ್ನು ನಿರ್ಧರಿಸುವನು.

ಈ ಪ್ರೇಮದ ಸಮಗ್ರತೆ ಹಾಗೂ ಪರಿಪೂರ್ಣತೆ, ಈ ಸ್ವ–ಅರ್ಪಣೆ ಇವುಗಳಲ್ಲಿ ಪರಿಪೂರ್ಣ ಶಾಂತಿಯ ಸಾರಭೂತ ಷರತ್ತಿದೆ, ಸತತ ದಿವ್ಯಾನಂದವಿರುವುದಕ್ಕೆ ಅದು ಅತ್ಯಗತ್ಯದ್ದಾದ ತಳಹದಿ.

**ಮೇ 6, 1927**

*

**ಆಪದ್ರಕ್ಷಕ ದೈವೀ ಕೃಪೆ**

ಯಾವ ಅರಸನ ಆಡಳಿತವೂ ಹೊಂದಲಾಗದ ದೈವೀ ಸಾಮರ್ಥ್ಯವಿದೆ, ಯಾವ ಪ್ರಾಪಂಚಿಕ ಯಶಸ್ಸೂ ತಂದುಕೊಡಲಾಗದ ದೈವೀ ಸಂತೋಷವಿದೆ, ಯಾವ ವಿವೇಕದಿಂದಲೂ ದೊರಕಿಸಲಾಗದ ದೈವೀ ಪ್ರಕಾಶವಿದೆ. ಯಾವ ತತ್ವಜ್ಞಾನ ಇಲ್ಲವೆ ವಿಜ್ಞಾನ ಪ್ರಭುತ್ವ ಪಡೆಯಲಾಗದ ದೈವೀ ಜ್ಞಾನವಿದೆ, ಆಸೆಯನ್ನು ತೃಪ್ತಿ–ಗೊಳಿಸುವುದರಿಂದ ದೊರಕಿಸಬಹುದಾದ ಯಾವ ಸಂತೋಷವೂ ನೀಡದ ದಿವ್ಯಾನಂದವಿದೆ, ಯಾವ ಮಾನವ ಸಂಬಂಧವೂ ತಣಿಸಲಾಗದ ಪ್ರೇಮದ ದಾಹವಿದೆ, ಮೃತ್ಯುವಿನಲ್ಲೂ ಕೂಡ ಕಂಡುಕೊಳ್ಳಲಾಗದ ದೈವೀ ಶಾಂತಿಯಿದೆ.

ಅದು ದೈವೀ ಕೃಪೆಯಿಂದ ಹರಿದು ಬರುವ ಸಾಮರ್ಥ್ಯ, ಸಂತೋಷ, ಪ್ರಕಾಶ, ಜ್ಞಾನ, ದಿವ್ಯಾನಂದ, ಪ್ರೇಮ ಮತ್ತು ಶಾಂತಿ.

**ಡಿಸೆಂಬರ 28, 1928**

*

ಓ ನನ್ನ ದೈವೀ ಪ್ರಭು, ಮಧುರ ಸ್ವಾಮಿ, ನಿನ್ನ ಕಾರ್ಯವನ್ನು ಸಿದ್ಧಿಸಿಕೊಳ್ಳು–ವುದಕ್ಕಾಗಿ ನಾನು ಭೌತದ್ರವ್ಯದ ಆಳವರಿಯಲಾಗದ ಆಳಗಳಲ್ಲಿ ಮುಳುಗಿ ಹೋಗಿದ್ದೇನೆ, ಮಿಥ್ಯೆ ಮತ್ತು ಅಚೇತನದ ದಿಗಿಲನ್ನು ನನ್ನ ಬೆರಳಿನಿಂದ ಸ್ಪರ್ಶಿಸಿದ್ದೇನೆ, ವಿಸ್ಮೃತಿಯ ಮತ್ತು ಪರಮ ಮಬ್ಬುತನದ ಮೂಲ ಸ್ಥಾನವನ್ನೇ ನಾನು ತಲುಪಿದ್ದೇನೆ. ಆದರೆ ನನ್ನ ಹೃದಯದಲ್ಲಿ ದೈವಿಕವಾದ ಸ್ಮೃತಿಯಿತ್ತು, ನಿನ್ನನ್ನು ತಲುಪಬಹುದಾದ ಕರೆ ನನ್ನ ಹೃದಯದಿಂದ ನೆಗೆತ ಮಾಡಿತು: "ದೈವೀ ಪ್ರಭು ಎಲ್ಲೆಡೆಯಲ್ಲಿ ನಿನ್ನ ವೈರಿಗಳು ವಿಜಯಿಗಳಾಗುತ್ತಿರುವಂತೆ ತೋರಿ ಬರುತ್ತಿದೆ; ಮಿಥ್ಯೆ ಜಗತ್ತಿನ ಚಕ್ರವರ್ತಿಯಾಗಿರುವಂತಿದೆ; ನೀನು ಇಲ್ಲದ ಜೀವನ ಒಂದು ಮೃತ್ಯುವಿದ್ದ ಹಾಗೆ, ನಿರಂತರ ನರಕವಿದ್ದ ಹಾಗೆ; ದೈವೀ ಭರವಸೆಯ ಸ್ಥಾನವನ್ನು ಸಂಶಯ ಕಿತ್ತುಕೊಂಡಿದೆ, ಮತ್ತು ಬಂಡಾಯ ಶರಣಾಗತಿಯನ್ನು ದೂರ ಸರಿಸಿದೆ; ನಂಬಿಕೆ ವ್ಯಯವಾಗಿ ಹೋಗಿದೆ, ದೈವೀ ಕೃತಜ್ಞತೆ ಜನ್ಮ ತಾಳಿಲ್ಲ, ಪ್ರೇಮದ ನಿನ್ನ ಮಧುರ ನಿಯಮವನ್ನು ಕುರುಡು ಭಾವೋದ್ರೇಕಗಳು ಮತ್ತು ಮಾರಕ ಹುಟ್ಟುಗುಣಗಳು ಮತ್ತು ಅಪರಾಧಿ ದೌರ್ಬಲ್ಯ ಇವು ಆವರಿಸಿವೆ ಮತ್ತು ದಮನ ಮಾಡಿವೆ. ನಿನ್ನ ವೈರಿಗಳು ಪ್ರಬಲರಾಗುವುದಕ್ಕೆ, ಮಿಥ್ಯೆ ಮತ್ತು ಕುರೂಪ ಮತ್ತು ವೇದನೆಗಳು ವಿಜಯಿಯಾಗುವುದಕ್ಕೆ ಅನುಮತಿ ನೀಡುವಿಯಾ? ದೈವೀ ಪ್ರಭು ಜಯ ಸಾಧಿಸುವುದಕ್ಕೆ ಆಜ್ಞೆ ಮಾಡು ಮತ್ತು ಅಲ್ಲಿ ಜಯವಿರುತ್ತದೆ. ನಾವು ಯೋಗ್ಯರಾಗಿಲ್ಲ ಎಂಬುದು ನನಗೆ ತಿಳಿದಿದೆ, ಜಗತ್ತು ಇನ್ನೂ ತಯಾರಾಗಿಲ್ಲ ಎಂಬುದೂ ನನಗೆ ತಿಳಿದಿದೆ. ಆದರೆ ನಿನ್ನ ದೈವೀಕೃಪೆಯಲ್ಲಿ ಪರಿಪೂರ್ಣ ನಂಬಿಕೆಯನ್ನಿರಿಸಿ ನಾನು ನಿನ್ನತ್ತ ಕೂಗಿ ಹೇಳುತ್ತಿದ್ದೇನೆ ಮತ್ತು ನಿನ್ನ ದೈವೀಕೃಪೆ ರಕ್ಷಿಸಲಿದೆ ಎಂಬುದು ನನಗೆ ತಿಳಿದಿದೆ."

ಹೀಗೆ ನಿನ್ನತ್ತ ನನ್ನ ಪ್ರಾರ್ಥನೆ ರಭಸದಿಂದ ಮೇಲಕ್ಕೇರಿ ಹೋಯಿತು, ಕಂದರದ ಆಳಗಳಿಂದ ನಿನ್ನ ತೇಜಃಪೂರ್ಣ ಭವ್ಯತೆಯಲ್ಲಿ ನಿನ್ನನ್ನು ನಾನು ನೋಡಿದೆ, ನೀನು ಕಾಣಿಸಿಕೊಂಡೆ ಮತ್ತು ನನಗೆ ಹೇಳಿದೆ:



"ಧೈರ್ಯ ಕಳೆದುಕೊಳ್ಳಬೇಡ, ಸ್ಥಿರವಾಗಿರು, ದೃಢನಂಬಿಕೆಯಿಂದಿರು–ನಾನು ಬರುತ್ತೇನೆ."

**ನವ್ಹೆಂಬರ 24, 1931**

*

## ಶ್ರೀಮಾತೆಯವರನ್ನು ಕುರಿತು ಶ್ರೀ ಅರವಿಂದರು

### ಅಂಧಕಾರವನ್ನು ಪ್ರಕಾಶದತ್ತ ಹೊರಳಿಸಲು ಅದರಲ್ಲಿ ಇಳಿದು ಹೋಗುವುದು

ಪರಾಮಾತೆ ಪರಮೋಚ್ಚನ ಪ್ರಜ್ಞೆ ಹಾಗೂ ಶಕ್ತಿಯಾಗಿದ್ದಾರೆ ಮತ್ತು ಅವರು ಸೃಷ್ಟಿಸುವುದಕ್ಕಿಂತ ಬಹಳ ಎತ್ತರದ ಮೇಲಿದ್ದಾರೆ.

ವ್ಯಕ್ತಿಗತವಾಗಿಯೂ ಕೂಡ (ಶ್ರೀಮಾತೆಯವರ ರೂಪದಲ್ಲಿ) ಈ ಗಾಢಾಂಧ–ಕಾರದಲ್ಲಿ ಇಳಿದು ಅದನ್ನು ದೈವೀ ಪ್ರಕಾಶದತ್ತ ಕೊಂಡೊಯ್ಯಲು, ಮಿಥ್ಯೆ, ದೋಷ–ಗಳಲ್ಲಿಳಿದು ಅವುಗಳನ್ನು ದೈವೀ ಸತ್ಯಗಳನ್ನಾಗಿ ಪರಿವರ್ತಿಸಲು, ಮೃತ್ಯುವಿನಲ್ಲಿಳಿದು ಅದನ್ನು ದೇವ ಸದೃಶ ಜೀವನವನ್ನಾಗಿಸುವ ತಿರುವು ಕೊಡಲು, ಹಟಮಾರಿ ನೋವು ದುಃಖಗಳಿರುವ ಈ ಜಗತ್ತಿನಲ್ಲಿ ಪರಿವರ್ತನೆಗೊಳಪಡಿಸುವ ತಮ್ಮ ಘನತೆವೆತ್ತ ದಿವ್ಯಾನಂದದ ಅತ್ಯಂತ ಸಂತಸದಲ್ಲಿ ಅದು ಕೊನೆಗೊಳ್ಳುವಂತೆ ಮಾಡಲು ಅವರು ದೊಡ್ಡಮನಸ್ಸು ಮಾಡಿದ್ದಾರೆ. ತಮ್ಮ ಮಕ್ಕಳಿಗಾಗಿ ಇರುವ ಆಳವಾದ ಹಾಗೂ ಶ್ರೇಷ್ಠ ಪ್ರೇಮದಿಂದಾಗಿ ತಮ್ಮ ಮೇಲೆ ಮಬ್ಬಿನ ನಿಲುವಂಗಿಯನ್ನು ಧರಿಸಲು, ಪೀಡಾಕಾರಕ ಪ್ರಭಾವವಿರುವ ಗಾಢಾಂಧಕಾರದ ಸಾಮರ್ಥ್ಯಗಳು ಹಾಗೂ ಮಿಥ್ಯೆ ಇವುಗಳ ಆಕ್ರಮಣವನ್ನು ಸಹಿಸಿಕೊಳ್ಳಲು, ಮೃತ್ಯುವೇ ಆಗಿರುವ ಜನ್ಮ ತಳೆದು, ಅದರ ಮೂಲಕ ಹಾಯ್ದು ಹೋಗಲು ಒಪ್ಪಿಕೊಂಡಿದ್ದಾರೆ. ಸೃಷ್ಟಿಯ ತೀವ್ರ ಯಾತನೆಯನ್ನು, ದುಃಖಗಳನ್ನು, ಮತ್ತು ವೇದನೆಗಳನ್ನು ತಮ್ಮ ಮೇಲೆ ತೆಗೆದುಕೊಂಡಿದ್ದಾರೆ, ಏಕೆಂದರೆ ಈ ರೀತಿಯಲ್ಲಿ ಮಾತ್ರ ಮನುಷ್ಯ ಜನ್ಮವನ್ನು ದೈವೀ ಪ್ರಕಾಶ, ಸತ್ಯ, ಸಂತೋಷ ಮತ್ತು ಶಾಶ್ವತ ಜೀವನ ಇವುಗಳತ್ತ ಮೇಲಕ್ಕೆತ್ತಬಹುದು ಎಂದು ತೋರಿಬಂದಿತು.

**CWSA 32/15-17**

*

**ದೈವೀ ಮಾರ್ಗವನ್ನು ತೆರೆದು ತೋರಿಸುವುದಕ್ಕಾಗಿ ಅವತಾರ ತಳೆದು ಬಂದ ವ್ಯಕ್ತಿಯ ಹೋರಾಟಗಳು**

ನಮ್ಮ ವೇದನೆಗಳು ಹಾಗೂ ಹೋರಾಟಗಳ ಮುಂದೆ ನಿನ್ನದು ಕೇವಲ ಮಗುವಿನ ಆಟವಿದ್ದ ಹಾಗೆ. ನಮ್ಮ ಸಂದರ್ಭಗಳು ನಿನ್ನದಿರುವುದಕ್ಕೆ ಸಮನಾಗುವಂತೆ ನಾನು ಮಾಡಿಲ್ಲ. ಮನುಕುಲಕ್ಕೆ ಉಚ್ಚತರ ಪ್ರಜ್ಞೆಯತ್ತ ದೈವೀ ಮಾರ್ಗವನ್ನು ತೆರೆದಿರಿಸುವುದಕ್ಕಾಗಿ ಬರುವ ವ್ಯಕ್ತಿ ಅವತಾರ ತಾಳಿದ ವ್ಯಕ್ತಿಯಾಗಿರುತ್ತಾನೆ ಎಂದು ನಾನು ಹೇಳಿದ್ದೇನೆ. ಆ ಮಾರ್ಗವನ್ನು ಯಾರೂ ಅನುಸರಿಸದೆ ಹೋದರೆ, ಆ ವಿಷಯ ಕುರಿತು ಕ್ರಿಸ್ತ, ಶ್ರೀಕೃಷ್ಣ ಮತ್ತು ಬುದ್ಧ ಇವರದೂ ಆಗಿದ್ದ ಆ ಕಲ್ಪನೆ ಪೂರ್ತಿ ತಪ್ಪಾದದ್ದು ಇಲ್ಲವೆ ಅವತಾರ ತಳೆದ ವ್ಯಕ್ತಿಯ ಇಡೀ ಜೀವನ ಹಾಗೂ ಕ್ರಿಯೆ ಸಂಪೂರ್ಣವಾಗಿ ವ್ಯರ್ಥವಾದದ್ದು ಆಗುತ್ತದೆ, ಅಂತಹ ವ್ಯಕ್ತಿಯ ಮಾರ್ಗವನ್ನು ಅನುಸರಿಸಲು ಸಾಧ್ಯವಾಗುವುದಿಲ್ಲ, ಅವತಾರ ತಳೆದ ವ್ಯಕ್ತಿಯ ಹೋರಾಟಗಳು ಹಾಗೂ ವೇದನೆಗಳು ನಿಜವಾದವುಗಳಲ್ಲ ಮತ್ತು ಎಲ್ಲವೂ ಕಪಟಾಚಾರ(humbug) ಭಗವಂತನನ್ನು ಪ್ರತಿನಿಧಿಸುವವರು ಹೋರಾಟ ಮಾಡುವ ಸಾಧ್ಯತೆಯಿಲ್ಲ ಎಂದು ಕ್ಷ (x) ಹೇಳುತ್ತಿರುವಂತಿದೆ. ಇಂತಹ ಕಲ್ಪನೆ ಅವತಾರತ್ವದ ವಿಚಾರವನ್ನು ಅರ್ಥಹೀನವಾದದ್ದನ್ನಾಗಿ ಮಾಡುತ್ತದೆ, ಆಗ ಅದಕ್ಕೆ ಕಾರಣವಿರುವುದಿಲ್ಲ, ಅದರ ಆವಶ್ಯಕತೆ ಇರುವುದಿಲ್ಲ ಮತ್ತು ಅರ್ಥವಿರುವುದಿಲ್ಲ. ಭಗವಂತ ಸರ್ವಸಮರ್ಥನಾಗಿರುವುದರಿಂದ ಪೃಥ್ವಿಯ ಮೇಲೆ ಕೆಳಗಿಳಿದು ಬರುವ ತೊಂದರೆ ತೆಗೆದುಕೊಳ್ಳದೆ ಜನರನ್ನು ಮೇಲಕ್ಕೆತ್ತಬಲ್ಲ. ಭಗವಂತ ತನ್ನ ಮೇಲೆ ಮನುಕುಲದ ಭಾರವನ್ನು ಹೊತ್ತುಕೊಳ್ಳಬೇಕು ಮತ್ತು ದೈವೀ ಮಾರ್ಗವನ್ನು ತೆರೆದಿರಿಸಬೇಕು ಎಂಬುದು ವಿಶ್ವದ ವ್ಯವಸ್ಥೆಯ ಒಂದು ಭಾಗವಾಗಿದ್ದರೆ ಮಾತ್ರ ಅವತಾರತ್ವಕ್ಕೆ ಒಂದು ಅರ್ಥವಿರುತ್ತದೆ.

**CWSA 35/420**

*

**ಭವಿಷ್ಯತ್ತಿನ ಸೂರ್ಯಪ್ರಕಾಶಿತ ದೈವೀ ಮಾರ್ಗವನ್ನು ಕೊರೆದು ತೆಗೆಯುವುದು**

ಈ ಮಾರ್ಗ ನಿನಗೆ ಹಾಗೂ ನಿನ್ನಂತಹರಿಗೆ ಬಹಳ ಕಠಿಣವಾದದ್ದಾಗಿದೆ, ಕೇವಲ ನನ್ನಂತಹ ಇಲ್ಲವೆ ಶ್ರೀಮಾತೆಯವರಂತಹ ಅವತಾರ ತಳೆದ ವ್ಯಕ್ತಿಗಳು



ಅದನ್ನು ಅನುಸರಿಸಬಹುದು ಎಂದು ಹೇಳುತ್ತೀ. ಅದೊಂದು ವಿಚಿತ್ರ ತಪ್ಪು ಕಲ್ಪನೆ, ಏಕೆಂದರೆ ತದ್ವಿರುದ್ಧವಾಗಿ ಅದು ಅತ್ಯಂತ ನೇರವಾದ, ಬಹಳ ಸುಲಭವಾದ ಹಾಗೂ ಸರಳವಾದ ಮಾರ್ಗ, ತನ್ನ ಮನಸ್ಸನ್ನು ಹಾಗೂ ಪ್ರಾಣಿಕವನ್ನು ಅಚಂಚಲಗೊಳಿಸಲು ಶಕ್ತನಾಗಿರುವ ಯಾರಾದರೂ ಅದನ್ನು ಕೈಕೊಳ್ಳಬಹುದು, ನಿನ್ನ ಕ್ಷಮತೆಯಲ್ಲಿಯ ಹತ್ತು ಭಾಗಗಳಲ್ಲಿ ಒಂದು ಭಾಗ ಮಾತ್ರವಿದ್ದವರೂ ಅದನ್ನು ಕೈಕೊಳ್ಳಬಹುದು. ಉದ್ವಿಗ್ನತೆ, ಪ್ರಯಾಸ ಹಾಗೂ ಕಠಿಣ ಪ್ರಯತ್ನ ಇವೆಲ್ಲವುಗಳಿರುವ ಆ ಇನ್ನೊಂದು ಮಾರ್ಗ ಕಠಿಣವಾದದ್ದು ಮತ್ತು ಅದಕ್ಕೆ ತಪಸ್ಸಿನ ಭವ್ಯ ಶಕ್ತಿ ಬೇಕಾಗುತ್ತದೆ. ಶ್ರೀಮಾತೆಯವರನ್ನು ಹಾಗೂ ನನ್ನನ್ನು ಕುರಿತು ಹೇಳುವುದಾದರೆ ನಾವು ಎಲ್ಲ ಮಾರ್ಗಗಳಲ್ಲಿ ಪ್ರಯತ್ನ ಮಾಡಬೇಕಾಗಿತ್ತು, ಎಲ್ಲ ವಿಧಾನಗಳನ್ನು ಅನುಸರಿಸಬೇಕಾಗಿತ್ತು, ಗುಡ್ಡದಷ್ಟು ತೊಂದರೆಗಳ ಮೇಲೆ ಜಯ ಸಾಧಿಸಬೇಕಾಗಿತ್ತು, ನೀನು ಇಲ್ಲವೆ ಆಶ್ರಮದಲ್ಲಿಯ ಅಥವಾ ಬಾಹ್ಯದಲ್ಲಿರುವ ಯಾರಾದರೂ ಹೊರಲು ಸಾಧ್ಯವಿಲ್ಲದಷ್ಟು ಭಾರ ಹೊರಬೇಕಾಗಿತ್ತು, ಹೋರಾಡಬೇಕಾದ ಸಮರಗಳಿದ್ದವು, ತಾಳಿಕೊಳ್ಳಬೇಕಾದ ಗಾಯಗಳಿದ್ದವು, ಒಳನುಗ್ಗಲಾಗದ ಕೆಸರು ನೆಲ, ಮರುಭೂಮಿ, ಅರಣ್ಯ, ಜಯಿಸಬೇಕಾದ ವಿರೋಧಿ ಮೊತ್ತ ಇವೆಲ್ಲವುಗಳನ್ನು ಭೇದಿಸಿಕೊಂಡು ಹೋಗಬೇಕಾದ ರೀತಿಗಳಿದ್ದವು ಅಂತಹ ಕಾರ್ಯವನ್ನು ನಮಗಿಂತ ಮೊದಲು ಬಂದವರು ಯಾರೂ ಮಾಡಬೇಕಾಗಿರಲಿಲ್ಲ ಎಂಬುದರ ಬಗ್ಗೆ ನನಗೆ ನಿಶ್ಚಿತತೆ ಇದೆ. ನಮ್ಮದಂತಹ ಕಾರ್ಯದಲ್ಲಿ, ದೈವೀ ಮಾರ್ಗದ ನೇತಾರ ಭಗವಂತನನ್ನು ಕೆಳಗಿಳಿಸಿ ತರಬೇಕಾಗುತ್ತದೆ, ಪ್ರತಿನಿಧಿಸಬೇಕಾಗುತ್ತದೆ ಮತ್ತು ಮೈವೆತ್ತಬೇಕಾಗುತ್ತದೆ ಅಷ್ಟೇ ಅಲ್ಲ, ಆದರೆ ಮನುಕುಲದಲ್ಲಿರುವ ಆರೋಹಣದ ಅಂಶವನ್ನೂ ಕೂಡ ಪ್ರತಿನಿಧಿಸಬೇಕಾಗುತ್ತದೆ ಮತ್ತು ಮನುಕುಲದ ಭಾರವನ್ನು ಪೂರ್ತಿಯಾಗಿ ಹೊರಬೇಕಾಗುತ್ತದೆ, ಅನುಭವಕ್ಕೆ ತಂದುಕೊಳ್ಳಬೇಕಾಗುತ್ತದೆ, ಅದು ಇರುವುದು ಕೇವಲ ಲೀಲೆಯಲ್ಲಷ್ಟೇ ಅಲ್ಲ, ಆದರೆ ಕ್ರೂರ ತೀವ್ರಾಸಕ್ತಿಯಲ್ಲಿರುವ ಎಲ್ಲ ಅಡೆತಡೆ, ತೊಂದರೆ, ವೈರುಧ್ಯ ಇವುಗಳಿಂದ ದಿಗ್ಭ್ರಮೆಗೊಳಗಾದ ಮತ್ತು ಅಡ್ಡಗಟ್ಟಲಾದ, ಕೇವಲ ನಿಧಾನಗತಿಯಲ್ಲಿ ವಿಜಯಿಯಾಗುವ ಶ್ರಮ ಇವೆಲ್ಲ ಮಾರ್ಗದಲ್ಲಿ ಸಂಭವನೀಯವಾಗಿರುತ್ತವೆ, ಆದರೆ ಅದೆಲ್ಲವನ್ನು ಇತರರ ಅನುಭವದಲ್ಲಿ ಪುನರಾವರ್ತಿಸಬೇಕಾದ ಆವಶ್ಯಕತೆಯಿಲ್ಲ, ಅದು ಸಹನೀಯವೂ ಆಗಿರುವುದಿಲ್ಲ. ನಮಗೆ ಅದರ ಸಂಪೂರ್ಣ ಅನುಭವ ಇರುವುದರಿಂದ ಇತರರಿಗೆ ನಾವು ಹೆಚ್ಚು ನೇರವಾದ ಹಾಗೂ ಹೆಚ್ಚು ಸುಲಭವಾದ

ಮಾರ್ಗವನ್ನು ತೋರಿಸಬಲ್ಲೆವು–ಅವರು ಆ ಮಾರ್ಗ ಅನುಸರಿಸಲು ತಮ್ಮ ಒಪ್ಪಿಗೆ ನೀಡಿರಬೇಕು. ನಮ್ಮ ಅನುಭವವನ್ನು ಮಹತ್ತರ ಬೆಲೆ ತೆತ್ತು ಪಡೆದಿರುವುದರಿಂದ ನಾವು ನಿನಗೆ ಮತ್ತು ಇತರರಿಗೆ ಒತ್ತಾಯಪೂರ್ವಕ ಹೇಳಬಲ್ಲೆವು: "ಚೈತ್ಯ ಮನೋಭಾವವನ್ನು ಹೊಂದಿರಿ, ಪ್ರಕಟವಾಗಿ ಇಲ್ಲವೆ ರಹಸ್ಯ ರೀತಿಯಲ್ಲಿ ನಿಮ್ಮನ್ನು ಮೇಲಕ್ಕೆತ್ತಿ ಕರೆದೊಯ್ಯುವ ಭಗವಂತನೊಂದಿಗೆ ನೇರ ಹಾಗೂ ಸೂರ್ಯಪ್ರಕಾಶಿತ ಮಾರ್ಗವನ್ನು ಅನುಸರಿಸಿರಿ–ರಹಸ್ಯವಾಗಿಯಾದರೆ ಅವನು ತನ್ನನ್ನು ಸಕಾಲದಲ್ಲಿ ತೋರಿಸುವನು–ಕಠಿಣ, ಅಡೆತಡೆಗೊಳಗಾದ, ಸುತ್ತುಬಳಸಿನ ಮತ್ತು ಕಠಿಣ ಪ್ರಯಾಣ ಕೈಕೊಳ್ಳುವುದಕ್ಕೆ ಒತ್ತು ನೀಡಬೇಡಿರಿ."

**CWSA 32/94-95** **– ಶ್ರೀ ಅರವಿಂದರು**

*

**ದೈವೀ ಪರಾಮಾತೆ ದೈವೀ ಕಾರ್ಯಕ್ಕಾಗಿ ಮಾನವ ರೂಪ ತಾಳಿರುವುದು**

ನಾನು ಸಂಪೂರ್ಣವಾಗಿ ನಿಶ್ಚಿತತೆ ಹೊಂದಿರುವ ಕೇವಲ ಒಂದು ವಿಷಯ–ವಿದೆ, ಅದು ನಾನು ಯಾರು ಎಂಬುದನ್ನು ಕುರಿತಾಗಿದೆ. ಶ್ರೀ ಅರವಿಂದರೂ ಕೂಡ ಅದನ್ನು ತಿಳಿದಿದ್ದರು ಮತ್ತು ಅದನ್ನು ಸಾರಿ ಹೇಳಿದರು. ಇಡೀ ಮನುಕುಲದ ಸಂಶಯಗಳು ಈ ವಾಸ್ತವತೆಯಲ್ಲಿ ಯಾವುದನ್ನೂ ಬದಲಿಸಲಾರದು.

**CWM 13/47** **ಮೇ 24, 1951**

*

*ಪ್ರಶ್ನೆ: ಪರಮೋಚ್ಚ ದೈವೀ ಪ್ರಭು ನಿಮಗೆ ಈ ಜಗತ್ತನ್ನು ನಿರ್ಮಾಣ ಮಾಡು ಎಂದು ಹೇಳಿದಾಗ ಕೈಕೊಳ್ಳಬೇಕಾದುದು ಏನು ಎಂಬುದನ್ನು ಹೇಗೆ ತಿಳಿದು–ಕೊಂಡಿರಿ?*

ಶ್ರೀಮಾತೆ : ಅದಕ್ಕಾಗಿ ನಾನು ಕಲಿಯಬೇಕಾದುದು ಏನೂ ಇರಲಿಲ್ಲ, ಏಕೆಂದರೆ ಪರಮೋಚ್ಚ ದೈವೀ ಪ್ರಭು ಎಲ್ಲವನ್ನೂ ತನ್ನಲ್ಲಿ ಒಳಗೊಂಡಿರುತ್ತಾನೆ: ಇಡೀ ಜಗತ್ತು, ಜಗತ್ತಿನ ಬಗೆಗಿನ ಜ್ಞಾನ ಮತ್ತು ಅದನ್ನು ನಿರ್ಮಾಣ ಮಾಡುವ ಸಾಮರ್ಥ್ಯ ಇವೆಲ್ಲವೂ ಅವನಲ್ಲಿರುತ್ತವೆ. ಒಂದು ಜಗತ್ತಿರಲಿ ಎಂದು ನಿರ್ಧರಿಸಿದಾಗ ಮೊದಲು ಜಗತ್ತಿನ ಬಗೆಗಿನ ಜ್ಞಾನವನ್ನು ಹಾಗೂ ನನ್ನನ್ನು ಎಂದರೆ ಅದನ್ನು ನಿರ್ಮಾಣ



ಮಾಡುವ ಸಾಮರ್ಥ್ಯವನ್ನು ಹೊರಗೆ ತೆಗೆದುಕೊಂಡು ಬಂದ ನಂತರ ಜಗತ್ತನ್ನು ನಿರ್ಮಿಸಲು ನನಗೆ ಆಜ್ಞೆ ಮಾಡಿದ.

**CWM 13/25** **ಸೆಪ್ಟಂಬರ, 1957**

*ಪ್ರಶ್ನೆ: ನಮ್ಮ ರೀತಿಯಲ್ಲಿ ಏಕೆ ಜನ್ಮ ತಾಳಿ ಬಂದಿರಿ? ನೀವು ನಿಜವಾಗಿ ಇರುವ ರೀತಿಯಲ್ಲಿ ಏಕೆ ಬರಲಿಲ್ಲ?*

ಶ್ರೀಮಾತೆ : ಅದಕ್ಕೆ ಕಾರಣ, ನಾನು ನಿಮ್ಮ ಹಾಗೆ ಬರದೆ ಹೋಗಿದ್ದರೆ, ನಾನು ಎಂದಿಗೂ ನಿಮಗೆ ಹತ್ತಿರದವಳಾಗುತ್ತಿರಲಿಲ್ಲ ಮತ್ತು "ನಾನಿರುವ ಹಾಗೆ ಆಗಿರಿ" ಎಂದು ನನಗೆ ಹೇಳಲು ಸಾಧ್ಯವಾಗುತ್ತಿರಲಿಲ್ಲ.

**ಸೆಪ್ಟಂಬರ 27, 1957**

*

**ನಲಿನಿ ಕಾಂತ ಗುಪ್ತ ಅವರ ಸ್ಮೃತಿಗಳು**

ಪ್ರಾರಂಭದಲ್ಲಿ ಶ್ರೀ ಅರವಿಂದರು ಶ್ರೀಮಾತೆಯವರನ್ನು ಕುರಿತು ಮಿರ್ರಾ ಎಂದೇ ಸ್ಪಷ್ಟವಾಗಿ ಹೇಳುತ್ತಿದ್ದರು. ಕೆಲ ಕಾಲದ ನಂತರ (ಹೀಗೆ ಕರೆಯುತ್ತಿದ್ದುದು ಹಲವಾರು ವರ್ಷಗಳ ಕಾಲ ಹರಡಿಕೊಂಡಿರಬಹುದು) ಅಕ್ಷರ ಉಚ್ಚರಿಸು–ತ್ತಿದ್ದಂತೆಯೆ ಅವರು ನಿಂತುಬಿಡುತ್ತಿದ್ದುದನ್ನು ಮತ್ತು ನಂತರ ಸ್ವಲ್ಪ ಹಿಂದು ಮುಂದೆ ನೋಡಿ ಮಿರ್ರಾ ಎಂಬ ಹೆಸರನ್ನು ಉಚ್ಚರಿಸುತ್ತಿದ್ದರು. ಆಗ ಅದು ನಮಗೆ ಬಹಳ ವಿಚಿತ್ರವಾದದ್ದು ಎಂದೆನಿಸುತ್ತಿತ್ತು, ನಂತರ ಅದಕ್ಕೆ ಇದ್ದ ಕಾರಣ ನಮಗೆ ತಿಳಿದುಬಂದಿತು. ಶ್ರೀ ಅರವಿಂದರ ತುಟಿಗಳು ಮದರ (Mother) ಎಂದು ಹೇಳಲು ತುದಿಯಂಚಿನಲ್ಲಿರುತ್ತಿದ್ದವು, ಆದರೆ ನಾವು ತಯಾರಾಗಬೇಕಾಗಿದ್ದಿತು, ಹಾಗಾಗಿ ಮದರ ಎಂದು ಹೇಳುವುದರ ಬದಲಾಗಿ ಮಿರ್ರಾ ಎಂದು ಹೇಳಿ ಮುಕ್ತಾಯಗೊಳಿಸುತ್ತಿದ್ದರು. ಯಾವ ಒಂದು ದಿನದಂದು, ಯಾವ ಶುಭ ಕ್ಷಣದಲ್ಲಿ 'ಮದರ' ಶಬ್ದ ಶ್ರೀ ಅರವಿಂದರ ತುಟಿಗಳಿಂದ ಉಚ್ಚರಿಸಲಾಯಿತು ಎಂಬುದು ಯಾರಿಗೂ ನಿಶ್ಚಿತವಾಗಿ ತಿಳಿದಿಲ್ಲ. ಅದು ದಾಖಲಿಸಲಾಗದ ಕಾಲಗತಿಯಲ್ಲಿ ದೈವೀ ಕ್ಷಣವಾಗಿತ್ತು, ಪೃಥ್ವಿಯ ಹಾಗೂ ಮಾನವನ ಇತಿಹಾಸದಲ್ಲಿ ಅದೃಷ್ಟದ ಒಂದು ಕ್ಷಣವಾಗಿತ್ತು, ಏಕೆಂದರೆ ಈ ಪರಮೋಚ್ಚ ಕ್ಷಣದಲ್ಲಿ ಈ ಪ್ರಾಪಂಚಿಕ ಪೃಥ್ವಿಯ

ಮೇಲೆ ಹಾಗೂ ಮನುಷ್ಯನ ಬಾಹ್ಯ ಪ್ರಜ್ಞೆಯ ಮೇಲೆ ಶ್ರೀಮಾತೆಯವರು ಸ್ಥಾಪಿತ–ಗೊಂಡರು.

**ಸಪ್ಟಂಬರ 27, 1957**

*

ಶ್ರೀ ಅರವಿಂದರನ್ನು ಅರಿತುಕೊಳ್ಳುವುದಕ್ಕಿಂತ ಮತ್ತು ಅವರನ್ನು ಭೇಟಿ ಮಾಡುವುದಕ್ಕಿಂತ ಮೊದಲೇ ಶ್ರೀಮಾತೆಯವರು ಯೋಗವನ್ನು ಆಚರಿಸುತ್ತಿದ್ದರು, ಆದರೆ ಅವರ ಯೋಗದ ವಿಧಾನಗಳು ಸ್ವತಂತ್ರವಾಗಿ ಅದೇ ರೀತಿಯನ್ನು ಅನುಸರಿಸಿದವು. ಒಬ್ಬರನ್ನೊಬ್ಬರು ಭೇಟಿ ಮಾಡಿದಾಗ, ಸಾಧನೆಯನ್ನು ಪರಿಪೂರ್ಣಗೊಳಿಸುವುದರಲ್ಲಿ ಪರಸ್ಪರರಲ್ಲಿ ಸಹಾಯ ಕಂಡುಕೊಂಡರು. ಶ್ರೀ ಅರವಿಂದರ ಯೋಗ ಎಂಬುದು ಶ್ರೀ ಅರವಿಂದರು ಹಾಗೂ ಶ್ರೀಮಾತೆ–ಯವರು ಜೊತೆಗೂಡಿ ಸೃಷ್ಟಿಸಿದ ಯೋಗವಾಗಿದೆ. ಈಗ ಅವರು ತಮ್ಮನ್ನು ಒಬ್ಬರಲ್ಲಿ ಇನ್ನೊಬ್ಬರನ್ನು ಸಂಪೂರ್ಣವಾಗಿ ಗುರುತಿಸಿಕೊಂಡಿದ್ದಾರೆ–ಆಶ್ರಮದಲ್ಲಿ ಸಾಧನೆಯನ್ನು ಹಾಗೂ ಎಲ್ಲ ವ್ಯವಸ್ಥೆಯನ್ನು ಶ್ರೀಮಾತೆಯವರು ನೇರವಾಗಿ ನೆರವೇರಿಸಿ ಕೊಡುತ್ತಾರೆ, ಶ್ರೀ ಅರವಿಂದರು ಹಿಂದೆ ಇದ್ದು ಅವರಿಗೆ ಆಧಾರ ನೀಡುತ್ತಾರೆ. ಯೋಗಾಚಾರಣೆಗಾಗಿ ಇಲ್ಲಿಗೆ ಬರುವವರೆಲ್ಲರೂ ಶ್ರೀಮಾತೆಯವರಿಗೆ ಶರಣಾಗತರಾಗಬೇಕು, ಅವರಿಗೆ ಶ್ರೀಮಾತೆಯವರು ಸಹಾಯ ಮಾಡುತ್ತಾರೆ ಹಾಗೂ ಅವರ ಆಧ್ಯಾತ್ಮಿಕ ಜೀವನವನ್ನು ನಿರ್ಮಾಣ ಮಾಡುತ್ತಾರೆ.

**CWSA 32/81-82** **– ಶ್ರೀ ಅರವಿಂದರು**

*

## ವಾರ್ತಾಪತ್ರ

### ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 29ನೇ ಮಾರ್ಚ್ 2015ರ ಭಾನುವಾರದಂದು ಶ್ರೀಮಾತೆಯವರು ಮೊದಲನೇ ಸಲ ಪಾಂಡಿಚೇರಿಗೆ ಬಂದು ನೆಲೆಸಿದ ಕಾರ್ಯಕ್ರಮವನ್ನು ಏರ್ಪಡಿ–



ಸಲಾಗಿತ್ತು. ತತ್ಸಂಬಂಧ 10 ಗಂಟೆಯಿಂದ 10.20ರವರೆಗೆ ಸಾಮೂಹಿಕ ಧ್ಯಾನ ಏರ್ಪಡಿಸಲಾಗಿತ್ತು. ನಂತರ 10.30 ರಿಂದ 12.30ರವರೆಗೂ “The Teachings of Flowers” ಎಂಬ ವಿಷಯದ ಬಗ್ಗೆ ವೀಡಿಯೋ ಪ್ರದರ್ಶಿಸಲಾಯಿತು. ಈ ಕಾರ್ಯಕ್ರಮಕ್ಕೆ ಅನೇಕ ಗುರು–ಬಂಧುಗಳು ಹಾಗೂ ಇತರರು ಹಾಜರಿದ್ದರು.

**ಒಪ್ಪೋಲೆ :**

**ಅಖಿಲ ಭಾರತ ಪತ್ರಿಕೆ, ಫೆಬ್ರವರಿ 2015**

| ಪುಟ | ಸಾಲು | ತಪ್ಪು | ಒಪ್ಪು |
|---|---|---|---|
| 15 | 1 | ಶಾಶ್ವತೆ | ಶಾಶ್ವತತೆ |
| 29 | 3 | ಮೇಲ್ಕಕ್ಕೇರಿ | ಮೇಲಕ್ಕೇರಿ |
| 39 | 7 | ಅಜ್ಞಾನದದ್ದು | ಅಜ್ಞಾನದ್ದು |
| 47 | ಕೆಳಗಿನಿಂದ 2 | ಪರಿಶುದ್ಧಗಳು | ಪರಿಶುದ್ಧಳು |



*"The soul that can live alone*
*with itself meets God,*
*Its lonely universe is their rendezvous."*

- Sri Aurobindo

**RNI No. 22511/1971**
No. of Pages **60 + 4 (Cov. Page)**
KAR Reg No : RNP/KA/BGS/368/2015-2017
Permitted to Post 10th of Every Month. Reg. Valid till : 31-12-2017
Licensed to Post at BG PSO, Mysore Road, Bengaluru - 560 026

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು-ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು - 560 078
ದೂರವಾಣಿ : 080-22449882, 22459628

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase,Bengaluru - 560 078. Phone : 080 - 2244 9882.